ಶನಿವಾರ, ಸೆಪ್ಟೆಂಬರ್ 17, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ನವದೆಹಲಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಗುಡ್‌ಬೈ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಪಾಲ್ಗೊಂಡಿದ್ದರು




ಇಂದಿನಿಂದ ಕಾಮಿಡಿ ಕಿಲಾಡಿಗಳು-4 ನಗುವಿನ ಹಬ್ಬ ಆರಂಭ

ಜೀ ಕನ್ನಡ, ಮನರಂಜನೆಯನ್ನು ಮೂಲ ಧರ್ಮ ಮತ್ತು ಕರ್ಮವಾಗಿಸಿಕೊಂಡು ಕರುನಾಡ ಕಿರುತೆರೆಯ ಕಲಾ ಸಾರ್ವಭೌಮನಾಗಿ ಅತ್ಯಂತ ವಿನಮ್ರತೆಯಿಂದ ವಿಜೃಂಭಿಸುತ್ತಿರುವ ನಂಬರ್ 1 ವಾಹಿನಿ. ವರ್ಣರಂಜಿತ, ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ನಿರಂತರವಾಗಿ ಅತಿಹೆಚ್ಚು ವೀಕ್ಷಕರನ್ನು ಸೆಳೆಯುತ್ತಲೇ ಇದೆ. ಕೆಲ ದಿನಗಳ ಹಿಂದಷ್ಟೇ ಡ್ರಾಮಾ ಜೂನಿಯರ್ಸ್ ಎಂಬ ಮಕ್ಕಳ ಲೋಕದಲ್ಲಿ ಸುಂದರವಾದ ದೃಶ್ಯ ವೈಭವ ಸೃಷ್ಟಿಸಿದ್ದ ವಾಹಿನಿ ನಗಿಸುವ ಪುಣ್ಯಕಾರ್ಯವನ್ನು ಸಹ ಮಾಡುತ್ತಾ ಬಂದಿದ್ದು ಯಶಸ್ವಿ ಮೂರು ಸೀಸನ್ ಗಳಿಂದಷ್ಟೇ ಅಲ್ಲದೆ ಚಾಂಪಿಯನ್ ಶಿಪ್ ನಲ್ಲೂ ಸಫಲವಾಗಿದೆ. ವಿನೂತನ ಸ್ಕಿಟ್ ಗಳ ಮೂಲಕ ನಮ್ಮೆಲ್ಲರ ವಾರಾಂತ್ಯಗಳಿಗೆ ನಗುವಿನ ರೂಪ ನೀಡಿದ್ದಈ ತಂಡ ಇದೀಗ ಕಾಮಿಡಿ ಕಿಲಾಡಿಗಳು ನಾಲ್ಕನೇ ಸೀಸನ್ ಗೆ ಅದ್ದೂರಿಯಾಗಿ ಚಾಲನೆ ನೀಡಲು ಸಜ್ಜಾಗಿದೆ. ಇದೇ ಸೆಪ್ಟೆಂಬರ್ 17 ರಿಂದ ಶನಿವಾರ - ಭಾನುವಾರ ರಾತ್ರಿ 9 ಕ್ಕೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ.

ಶೋಗೆ ಸಿಕ್ಕಿದೆ ಸ್ಯಾಂಡಲ್‌ವುಡ್‌ನ ಚಪ್ಪಾಳೆ!

ಫಿಕ್ಶನ್ ಹಾಗು ನಾನ್ ಫಿಕ್ಷನ್ ಎರಡೂ ವಿಭಾಗಗಳಲ್ಲೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಿ ಅಸಂಖ್ಯಾತ ಕಲಾವಿದರಿಗೆ ಜನ್ಮ ನೀಡಿ ಅವರ ಕನಸುಗಳು ಬಯಸುತ್ತಿರುವ ಬಾಗಿಲು ತೆಗೆಯುತ್ತಿರುವ ಜೀ ಕನ್ನಡ ವಾಹಿನಿ ಕನ್ನಡ ಚಿತ್ರೋದ್ಯಮಕ್ಕೆ ಕೊಡುಗೆಯಾಗಿ ಅತ್ಯದ್ಭುತ ನಟ - ನಟಿಯರನ್ನು ನಿರಂತರವಾಗಿ ನೀಡುತ್ತಲೇ ಬಂದಿರುವುದು ಶ್ಲಾಘನೀಯ ಕಾರ್ಯ ಎಂದು ಸ್ಯಾಂಡಲ್ ವುಡ್ ಅಭಿಪ್ರಾಯಪಟ್ಟಿದೆ. ವಾಹಿನಿಯ ಪ್ರತಿಯೊಂದು ಕಾರ್ಯಕ್ರಮವನ್ನು ಗಮನಿಸುವ ಉದ್ಯಮ ಇದೀಗ ನಾಲ್ಕನೇ ಸೀಸನ್ ನ ಕಾಮಿಡಿ ಕಿಲಾಡಿಗಳ ಮೇಲೂ ಕಣ್ಣಿಟ್ಟಿದ್ದು ಮತ್ತಷ್ಟು ಕಲಾವಿದರನ್ನು ಸ್ವಾಗತಿಸಲು ಎದುರುನೋಡುತ್ತಿದೆ

ಕಿಲಾಡಿ ತೀರ್ಪುಗಾರರ ದರ್ಬಾರ್



ನವರಸ ನಾಯಕ ಜಗ್ಗೇಶ್ : ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ ।ನಗುವ ಕೇಳುತ ನಗುವುದತಿಶಯದ ಧರ್ಮ ! ಎಂಬ ಡಿವಿಜಿ ಅವರ ಮಾತನ್ನು ನಂಬಿರುವ ನಾನು ಸುಮಾರು ವರ್ಷಗಳಿಂದ ಕನ್ನಡ ಸಿನಿರಸಿಕರನ್ನು ನಗಿಸುತ್ತಿದ್ದೇನೆ. ಶುದ್ಧ ಹಾಸ್ಯದ ಕಾರ್ಯಕ್ರಮಗಳೇ ಅಪರೂಪವಾಗಿರುವ ಈ ಕಾಲಘಟ್ಟದಲ್ಲಿ ಕಾಮಿಡಿ ಕಿಲಾಡಿಗಳು ಶೋ ತುಂಬಾ ವಿಶೇಷವಾಗಿದೆ. ಈ ವೇದಿಕೆಯಿಂದ ಹೊರಹೊಮ್ಮಿರುವ ಕಲಾವಿದರು ಇಂದು ನಮ್ಮ ಚಂದನವನದಲ್ಲಿ ಮಿಂಚುತ್ತಿರುವುದೇ ಸಾಕ್ಷಿ. ಇದೀಗ ನಾಲ್ಕನೇ ಸೀಸನ್ ಕೂಡ ಅದ್ಭುತವಾದ ಪ್ರತಿಭೆಗಳನ್ನು ನೀಡುತ್ತದೆ ಎನ್ನುವ ಭರವಸೆ ನನ್ನದು.



ನಿರ್ದೇಶಕ, ಯೋಗರಾಜ್ ಭಟ್ : ನಗಿಸೋದು ಸುಲಭದ ಕೆಲಸವಲ್ಲ ಅದೊಂದು ಪುಣ್ಯದ ಕಾರ್ಯ. ಒಬ್ಬ ನಿರ್ದೇಶಕನಾಗಿ, ಬರಹಗಾರನಾಗಿ, ನಟನಾಗಿ ನಗಿಸೋದು ಎಷ್ಟು ಕಷ್ಟದವಾದದ್ದು ಅಂತ ನಂಗೆ ಗೊತ್ತಿದೆ. ಕಾಮಿಡಿ ಕಿಲಾಡಿಗಳು ಮೂರು ಸೀಸನ್ ಗಳು, ಚಾಂಪಿಯನ್ ಶಿಪ್ ವೇದಿಕೆಗೆ ಬಂದ ಕಲಾವಿದರೆಲ್ಲರೂ ಹೊಟ್ಟೆ ಹುಣ್ಣಾಗಿಸೋಷ್ಟು ನಗಿಸಿದ್ದಾರೆ. ಇಲ್ಲಿನ ಬರಹಗಾರರಾಗಲಿ, ಕಲಾವಿದರಾಗಲಿ ನಮ್ಮ ಇಂಡಸ್ಟ್ರಿಗೆ ಅತ್ಯದ್ಭುತವಾದ ಕೊಡುಗೆಯಾಗಿದ್ದಾರೆ. ಈ ಸೀಸನ್ ಕೂಡ ಅಂಥದ್ದೇ ಅದ್ಭುತಗಳಿಗೆ ಸಾಕ್ಷಿಯಾಗಲಿದೆ ಅಂತ ನಾನು ನಂಬಿದ್ದೇನೆ.



ನಟಿ, ರಕ್ಷಿತಾ ಪ್ರೇಮ್ : ಕಾಮಿಡಿ ಕಿಲಾಡಿಗಳು ಇಡೀ ಕರ್ನಾಟಕ ಮೆಚ್ಕೊಂಡಿರೋ ಶೋ. ಚಾಂಪಿಯನ್ ಶಿಪ್ ಆದ್ಮೇಲೆ ಈ ಕಾರ್ಯಕ್ರಮ ಯಾವಾಗ ಬರುತ್ತೆ ಅಂತ ನಾನು ಕಾಯ್ತಿದ್ದೆ. ಮೂರು ಸೀಸನ್ ಗಳ ಜೊತೆ ಚಾಂಪಿಯನ್ ಶಿಪ್ ನಮಗೆ ಹೊಸ ಹೊಸ ಅನುಭವ ನೀಡಿದೆ. ಇದೀಗ ಈ ನಾಲ್ಕನೇ ಸೀಸನ್ ನಲ್ಲಿ ಯಾವ ರೀತಿಯ ಟ್ಯಾಲೆಂಟ್ ಗಳು ನಮ್ಮ ವೇದಿಕೆಗೆ ಬರ್ತಾರೆ, ಯಾವ ರೀತಿ ನಗಿಸುತ್ತಾರೆ ಎಂಬ ಕುತೂಹಲ ನಂಗಿದೆ. ಟೆನ್ಷನ್ ಗಳನ್ನೆಲ್ಲ ಮರೆಸಿ ನಮ್ಮನ್ನೆಲ್ಲ ನಗಿಸೋ ಈ ಶೋನ ನಾನಂತೂ ತುಂಬಾ ಮಿಸ್ ಮಾಡ್ಕೊಳ್ತಿದ್ದೆ.



ಇಂದಿನಿಂದ ಶನಿ-ಭಾನು | ರಾತ್ರಿ 9ಕ್ಕೆ

ಪ್ರೋಮೋಗೆ ಪ್ರಶಂಸೆಯ ಸುರಿಮಳೆ



ಕಾಮಿಡಿಗೆ ಭಾಷೆ ಯಾವುದ್ರಿ, ಎಲ್ಲರೂ ಮನಸು ಬಿಚ್ಚಿ ನಗೋಣ ಬನ್ರೀ ! ಎಂದು ಬಿಡುಗಡೆಗೊಂಡಿರುವ ಪ್ರೋಮೋ ಯಾರೂ ಊಹಿಸಿರದ ರೀತಿಯಲ್ಲಿ ಎಲ್ಲೆಡೆ ಭರ್ಜರಿ ಪ್ರತಿಕ್ರಿಯೆ ಪಡೆದುಕೊಂಡಿದ್ದು ಎಲ್ಲರ ಮೆಚ್ಚುಗೆಗಳಿಸಿದೆ. ಸೋಷಿಯಲ್ ಮೀಡಿಯಾದಲ್ಲೂ ಸಾಕಷ್ಟು ವೈರಲ್ ಆಗಿದೆ. ನಗು ಎನ್ನುವುದು ಯಾವುದೇ ಗೆರೆ ಹಾಕಿಕೊಳ್ಳದೆ ಗಡಿದಾಟಿ ಎಲ್ಲರನ್ನು ತಲುಪುತ್ತದೆ ಎನ್ನುವುದನ್ನು ನಿರೂಪಿಸಿದೆ. ತಮ್ಮ ಯಾವುದೇ ಶೋಗಳಿಗಾದರೂ ಸಿರಿತನದ ಸ್ಪರ್ಶ ನೀಡುವುದನ್ನು ರೂಢಿಸಿಕೊಂಡಿರುವ ವಾಹಿನಿ ತಾನೆಷ್ಟು ವಿಶೇಷ ಎನ್ನುವುದನ್ನು ಭಿನ್ನ, ವಿಭಿನ್ನ ಕಾನ್ಸೆಪ್ಟ್‌ಗಳುಳ್ಳ ಪ್ರೋಮೋಗಳ ಮೂಲಕ ಅನೇಕ ವರ್ಷಗಳಿಂದ ಸಾಬೀತುಪಡಿಸುತ್ತಲೇ ಬಂದಿದೆ. ಈ ಸಲವೂ ಅದನ್ನು ಮುಂದುವರೆಸಿದೆ.

ನಮ್ಮ ಯಾವುದೇ ಕಾರ್ಯಕ್ರಮವಾದರೂ ವಿಭಿನ್ನ, ವಿಶೇಷ ಆಲೋಚನೆ ಮತ್ತು ಉತ್ತಮ ರೀತಿಯಲ್ಲಿ ವೀಕ್ಷಕರನ್ನು ರಂಜಿಸಬೇಕೆಂಬ ಉದ್ದೇಶವನ್ನೇ ಮೂಲವಾಗಿರಿಸಿಕೊಂಡಿರುತ್ತದೆ. ನೋಡುಗರ ವಾರಾಂತ್ಯಗಳಿಗೆ ಮೋಸ ಮಾಡಬಾರದೆಂಬ ಆಶಯ ಹೊಂದಿರುವ ನಾವು ಜೋಡಿ ನಂಬರ್1, ಡ್ರಾಮಾ ಜೂನಿಯರ್ಸ್, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಮತ್ತು ಕಾಮಿಡಿ ಕಿಲಾಡಿಗಳು ಕಾರ್ಯಕ್ರಮಗಳನ್ನು ಅದ್ಧೂರಿಯಾಗಿ ಜನರಿಗೆ ತಲುಪಿಸುವುದರಲ್ಲಿ ಯಶಸ್ವಿಯಾಗಿದ್ದೇವೆ ಎಂದರೆ ಅದಕ್ಕೆ ತಂಡದ ಶ್ರಮ ಅಧಿಕವಾಗಿದೆ. ಇದೀಗ ಕಾಮಿಡಿ ಕಿಲಾಡಿ ಸೀಸನ್ 4 ಆರಂಭವಾಗುತ್ತಿದ್ದು ಇದನ್ನು ಜನ ಅಷ್ಟೇ ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆ ಎನ್ನುವ ವಿಶ್ವಾಸ ನಮಗಿದೆ. ಎಂದಿನಂತೆ ಹೊಸ ಹೊಸ ಪ್ರತಿಭೆಗಳನ್ನು ತಿದ್ದಲು ತೀರ್ಪುಗಾರರಾಗಿ ಜಗ್ಗೇಶ್ ಸರ್, ಯೋಗರಾಜ್ ಭಟ್ ಸರ್, ರಕ್ಷಿತಾ ಇದ್ದರೆ ನಿರೂಪಣೆಯ ಜವಾಬ್ದಾರಿಯನ್ನು ಮಾಸ್ಟರ್ ಆನಂದ್ ಅವರೇ ವಹಿಸಿದ್ದಾರೆ. ಈ ಬಾರಿ ಆಯ್ಕೆಯಾಗಿರುವ ಸ್ಪರ್ಧಿಗಳು ಕೂಡ ತಮ್ಮ ವಿಭಿನ್ನ ಶೈಲಿಯ ನಟನೆಯ ಮೂಲಕ ಜನರನ್ನು ಮನರಂಜಿಸಲಿದ್ದಾರೆ ಎನ್ನುವ ಭರವಸೆ ನಮ್ಮದು.



• ರಾಘವೇಂದ್ರ ಹುಣಸೂರು
ಜೀ ಕನ್ನಡ ಹಾಗೂ ಜೀ ಪಿಚ್ಚರ್ ಬ್ಯುಸಿನೆಸ್ ಹೆಡ್

ಕಾಮಿಡಿ ಕಿಲಾಡಿಗಳು Season 04 ಗ್ರ್ಯಾಂಡ್ ಪ್ರೀಮಿಯರ್..

ಶುದ್ಧ ಹಾಸ್ಯದ ಕಾರ್ಯಕ್ರಮವಾಗಿ ಕಿರುತೆರೆಯಲ್ಲಿ ಸಂಚಲನ ಮೂಡಿಸಿದ್ದ ಕಾಮಿಡಿ ಕಿಲಾಡಿಗಳು ನಮ್ಮ ನೆಲದ ಎಲೆಮರೆಕಾಯಿಗಳಂತಿದ್ದ ಅನೇಕ ಕಲಾವಿದರನ್ನು ಕನ್ನಡ ನಾಡಿಗೆ ಪರಿಚಯಿಸಿದ ಹೆಗ್ಗಳಿಕೆ ಹೊಂದಿದೆ. ಅಷ್ಟೇ ಅಲ್ಲದೇ ಸಾಕಷ್ಟು ನಟ - ನಟಿಯರನ್ನು ಚಂದನವನಕ್ಕೆ ಕೊಡುಗೆಯಾಗಿಯೂ ನೀಡಿದೆ. ಈ ವೇದಿಕೆಯಲ್ಲಿ ಉದಯಿಸಿದವರು ಇಂದು ಬೆಳ್ಳಿತೆರೆಯ ಮುಖ್ಯಭೂಮಿಕೆಯಲ್ಲಿ ಮತ್ತು ಸ್ಟಾರ್ ನಟರ ಜೊತೆ ಸಹ ಕಲಾವಿದರಾಗಿ ಮಿಂಚುತ್ತಿರುವುದೇ ಸಾಕ್ಷಿಯಾಗಿದೆ. ಈ ಸೀಸನ್ ನಲ್ಲೂ ಈ ತಂಡ ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ಸಂಚರಿಸಿ ಆಡಿಷನ್ ಮೂಲಕ ಹೊಸ ಹೊಸ ಪ್ರತಿಭೆಗಳನ್ನು ಹುಡುಕಿ ಅವರಿಗೊಂದು ಭವ್ಯ ವೇದಿಕೆ ಕಲ್ಪಿಸಿಕೊಡುತ್ತಿದೆ. ಮೆಗಾ ಆಡಿಷನ್ ನಲ್ಲಿ ಈ ಬಾರಿಯೂ ವಿವಿಧ ಭಾಗದ ಬೇರೆ ಬೇರೆ ವರ್ಗದ ಕಲಾವಿದರು ಆಯ್ಕೆಯಾಗಿದ್ದು ಅವರೆಲ್ಲರೂ ಸಹ ತಮ್ಮ ವಿಭಿನ್ನ, ವಿಶೇಷ ಪ್ರತಿಭೆಯಿಂದ ನೋಡುಗರನ್ನು ರಂಜಿಸುತ್ತಾರೆ ಎಂದು ವಾಹಿನಿ ಅಭಿಪ್ರಾಯಪಟ್ಟಿದೆ ಹಾಗು ಯಾವ ರೀತಿಯ ಪ್ರತಿಭೆಗಳು ಆಯ್ಕೆಯಾಗಿರಬಹುದೆಂದು ವೀಕ್ಷಕರು ಕುತೂಹಲದಿಂದ ಕಾಯುವಂತೆ ಮಾಡಿದೆ.



ಆನಂದ್ ನಿರೂಪಣೆಯ ಮಾಸ್ಟರ್

ಒಬ್ಬ ಕಲಾವಿದನಾಗಿ ಗುರುತಿಸಿಕೊಂಡಿದ್ದ ನನಗೆ ನಿರೂಪಣೆಯ ಜವಾಬ್ದಾರಿ ನೀಡಿ ವೀಕ್ಷಕರಿಗೆ ಹೊಸ ರೀತಿಯ ಆನಂದ್ ನನ್ನು ಪರಿಚಯಿಸಿದ್ದು ಜೀ ಕನ್ನಡ ವಾಹಿನಿ. ಎಲ್ಲಾ ಸೀಸನ್ ಗಳನ್ನೂ ಯಶಸ್ವಿಯಾಗಿ ಮುಗಿಸಿ ಇದೀಗ ನಾಲ್ಕನೇ ಸೀಸನ್ ಗೆ ಕಾಲಿಡುತ್ತಿರುವುದು ತುಂಬಾ ಖುಷಿಯ ವಿಷಯ. ಹೊಸ ಹೊಸ ಸ್ಪರ್ಧಿಗಳು, ಜಗ್ಗೇಶ್ ಸರ್, ಯೋಗರಾಜ್ ಭಟ್ ಸರ್ ಮತ್ತೆ ರಕ್ಷಿತಾ ಮೇಡಂ ಇವರನ್ನೆಲ್ಲ ಮತ್ತೆ ಕಾಮಿಡಿ ಕಿಲಾಡಿಗಳು ಸೆಟ್ ನಲ್ಲಿ ಭೇಟಿಯಾಗೋಕೆ ಕಾತುರದಿಂದ ಕಾಯ್ತಿದ್ದೀನಿ.



ಕಾಮಿಡಿ ಕಿಲಾಡಿಗಳು season 04 ನ ಇನ್ನೂ ಹೆಚ್ಚಿನ ಅಪ್‌ಡೇಟ್‌ಗಳಿಗಾಗಿ ಇಲ್ಲಿ ಭೇಟಿ ನೀಡಿ /zeekannadatv /zeekannada /zeekannada /zeekannada zee5.com

2 ಬೈಪಾಸ್‌ಗಳಲ್ಲಿ ವಾಹನಗಳ ಓಡಾಟ ಶುರು: ತಪ್ಪಿದ ಟ್ರಾಫಿಕ್ ಕಿರಿಕಿರಿ

ಹತ್ತು ಪಥ ಸಂಚಾರಕ್ಕೆ ಶೀಘ್ರ ಮುಕ್ತ

ಅಂಕಿ ಅಂಶ									
₹ 8,172 ಕೋಟಿ ಯೋಜನೆಯ ಸದ್ಯದ ವೆಚ್ಚ	118 ಕಿ.ಮೀ ಒಟ್ಟು ರಸ್ತೆಯ ಉದ್ದ	6 ಪಥದ ಎಕ್ಸ್‌ಪ್ರೆಸ್ ವೇ (ಮೈಸೂರು ಕಡೆಗೆ 3 ಪಥ, ಬೆಂಗಳೂರು ಕಡೆಗೆ 3)	4 ಪಥದ ಸರ್ವಿಸ್ ರಸ್ತೆ ನಿರ್ಮಾಣ (ಒಂದು ಕಡೆಗೆ ತಲಾ 2)	49 ಕೆಳ ಸೇತುವೆಗಳು	13 ಮೇಲ್ಸೆತುವೆಗಳು	6 ಬೈಪಾಸ್‌ಗಳು	8 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್	9 ದೊಡ್ಡ ಸೇತುವೆಗಳು	44 ಕಿರು ಸೇತುವೆಗಳು

• ಆರ್. ಜಿತೇಂದ್ರ

ರಾಮನಗರ: ಬಹುನಿರೀಕ್ಷಿತ ಬೆಂಗಳೂರು–ಮೈಸೂರು ಹೆದ್ದಾರಿ ಹತ್ತು ಪಥ ಕಾಮಗಾರಿಯು ಅಂತಿಮ ಘಟ್ಟ ತಲುಪಿದ್ದು, ಈ ಬಾರಿಯ ದಸರಾದಲ್ಲಿ ಪ್ರಯಾಣಿಕರು ಹೆಚ್ಚಿನ ಟ್ರಾಫಿಕ್ ಕಿರಿಕಿರಿ ಇಲ್ಲದೇ ಮೈಸೂರು ತಲುಪಬಹುದಾಗಿದೆ.

ಹೆಲಿಪ್ಯಾಡ್ ನಿರ್ಮಾಣ ಸೇರಿದಂತೆ ಹತ್ತು ಹಲವು ವಿಶೇಷತೆ ಹೊಂದಿರುವ ಈ 'ಎಕ್ಸ್‌ಪ್ರೆಸ್ ವೇ' ಬೆಂಗಳೂರು–ಮೈಸೂರು ಕಾರಿಡಾರ್‌ನ ಅಭಿವೃದ್ಧಿಗೆ ಬೂಸ್ಟರ್ ಆಗಲಿದೆ ಎಂದು ವಿಶ್ಲೇಷಿಸಲಾಗಿದೆ. ಎರಡು ಹಂತದಲ್ಲಿ ಕೆಲಸ ನಡೆದಿದ್ದು, ಮೊದಲ ಚರಣದಲ್ಲಿ ಬೆಂಗಳೂರಿನ ನೈಸ್ ರಸ್ತೆ ಜಂಕ್ಷನ್‌ನಿಂದ ಮದ್ದೂರು ತಾಲ್ಲೂಕಿನ ನಿಡಘಟ್ಟವರೆಗಿನ 56.2 ಕಿ.ಮೀ ಉದ್ದದ ಹತ್ತು ಪಥದ ಹೆದ್ದಾರಿ ಕಾಮಗಾರಿ ಬಹುತೇಕ ಮುಗಿದಿದೆ. ಈಗಾಗಲೇ, ಬೈಪಾಸ್ ರಸ್ತೆ ಸಹ ಸಂಚಾರಕ್ಕೆ ಮುಕ್ತವಾಗಿದ್ದು, ವಾಹನಗಳು ಸಂಚರಿಸುತ್ತಿವೆ.

ನಿಡಘಟ್ಟದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ (ಕೊಲಂಬಿಯಾ ಏಷ್ಯಾ)ವರೆಗಿನ 62 ಕಿ.ಮೀ. ಉದ್ದದ ಕಾಮಗಾರಿಯು ಪ್ರಗತಿಯಲ್ಲಿದೆ. ಅಲ್ಲಲ್ಲಿ ಬೈಪಾಸ್, ಸೇತುವೆ ನಿರ್ಮಾಣ ಕಾಮಗಾರಿಗಳು ಸದ್ಯ ನಡೆದಿವೆ.

ಎಕ್ಸ್‌ಪ್ರೆಸ್ ವೇ: ಹತ್ತು ಪಥದಲ್ಲಿ ಆರು ಪಥಗಳು 'ಎಕ್ಸ್‌ಪ್ರೆಸ್ ವೇ'ಗೆ ಮೀಸಲು. ಇದರಲ್ಲಿ ಬೆಂಗಳೂರು–ಮೈಸೂರು ಕಡೆಗೆ ತಲಾ ಮೂರು ಪಥಗಳು ಮೀಸಲಿವೆ. ಇದರ ಎಡಬಲದಲ್ಲಿ ತಲಾ ಎರಡು ಪಥಗಳ ಸರ್ವೀಸ್ ರಸ್ತೆ ಸಹ ನಿರ್ಮಾಣ ಆಗುತ್ತಿದೆ.

ಹಳೇ ಹೆದ್ದಾರಿಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ತೆರಳಬೇಕಾದರೆ ಕನಿಷ್ಠ 3–4 ಗಂಟೆ ಬೇಕಿತ್ತು. ಹೊಸ ಹೆದ್ದಾರಿಯಿಂದ ಟ್ರಾಫಿಕ್ ಕಿರಿಕಿರಿ ತಪ್ಪಲಿದ್ದು, ಬೈಪಾಸ್‌ಗಳಿಂದಾಗಿ ಸದ್ಯ ಈ ನಗರಗಳ ನಡುವಿನ ಪ್ರಯಾಣದ ಅವಧಿ ಈಗಾಗಲೇ ಸಾಕಷ್ಟು ಕಡಿಮೆ ಆಗಿದೆ. ಅಂತಿಮವಾಗಿ ಪ್ರಯಾಣದ ಒಟ್ಟು ಅವಧಿ ಸರಾಸರಿ 90 ನಿಮಿಷಕ್ಕೆ ಇಳಿಕೆ ಆಗುವ ನಿರೀಕ್ಷೆ ಇದೆ.

ಬೈಪಾಸ್‌ಗಳು ಮುಕ್ತ: ದಶಪಥ ಕಾಮಗಾರಿ ವೇಳೆ ಬರೋಬ್ಬರಿ 52 ಕಿ.ಮೀ. ನಷ್ಟು ಉದ್ದದ ಮಾರ್ಗವನ್ನು ಹೊಸತಾಗಿ ನಿರ್ಮಿಸಿರುವುದು ವಿಶೇಷ. ಇದರಿಂದಾಗಿ ಬೆಂಗಳೂರಿನಿಂದ ಮೈಸೂರಿಗೆ ನೇರ ಪ್ರಯಾಣಿಸುವವರು ಈ ಮಾರ್ಗದಲ್ಲಿನ ಪ್ರಮುಖ ನಗರಗಳಿಗೆ ಬಾರದೆಯೇ ಬೈಪಾಸ್ ಮೂಲಕ ಹಾದು ಹೋಗಬಹುದು. ಬಿಡದಿ, ರಾಮನಗರ–ಚನ್ನಪಟ್ಟಣ ಬೈಪಾಸ್‌ಗಳು ಈಗಾಗಲೇ ಸಂಚಾರಕ್ಕೆ ಮುಕ್ತವಾಗಿವೆ. ಬೆಟ್ಟ, ಗುಡ್ಡ, ಕಾಡಿನ ನಡುವೆ ಈ ಹೊಸ ರಸ್ತೆ ಹಾದು ಹೋಗಿದ್ದು, ಪ್ರಯಾಣಿಕರು ಪ್ರಕೃತಿ ಸೌಂದರ್ಯ ಸವಿಯಲು ಅವಕಾಶ ದೊರೆತಿದೆ.

ನವೀನ ಬಗೆಯ ತಂತ್ರಜ್ಞಾನ: ಹೆದ್ದಾರಿ ಕಾಮಗಾರಿಯಲ್ಲಿ ಹಲವು ನವೀನ ಬಗೆಯ ತಂತ್ರಜ್ಞಾನವನ್ನು ಬಳಸಲಾಗಿದೆ. ಪ್ರತಿ ಎರಡು ಕಿ.ಮೀ.ಗೆ ಒಂದು ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇರಲಿದೆ. ಪ್ರತಿ 5 ಕಿ.ಮೀ.ಗೆ ಕ್ಲೋಸ್ ಯೂಟರ್ನ್ ಸಿಗಲಿದೆ. ಎಲಿವೇಟೆಡ್ ಕಾರಿಡಾರ್‌ಗಳಲ್ಲಿ 'ಸ್ಪೈನ್ ಆ್ಯಂಡ್ ವಿಂಗ್ ಸೆಗ್‌ಮೆಂಟ್' ತಂತ್ರಜ್ಞಾನ ಬಳಸಿದ್ದು, ವಾಹನಗಳು ಹೆಚ್ಚು ಅಲುಗಾಡುವುದು ತಪ್ಪಲಿದೆ.



ಪ್ರಮುಖ ನಗರಗಳಿಗೆ ಪ್ರವೇಶ–ನಿರ್ಗಮನ ವ್ಯವಸ್ಥೆ

ಎಕ್ಸ್‌ಪ್ರೆಸ್ ವೇನಲ್ಲಿ ಬೆಂಗಳೂರಿನಿಂದ ಮೈಸೂರುವರೆಗೆ ಮಧ್ಯೆ ಎಲ್ಲಿಯೂ ವಾಹನಗಳಿಗೆ ಪ್ರವೇಶ ನೀಡದಿರಲು ಹೆದ್ದಾರಿ ಪ್ರಾಧಿಕಾರ ಚಿಂತನೆ ನಡೆಸಿತ್ತು. ಆದರೆ, ಸ್ಥಳೀಯರ ಒತ್ತಾಯದ ಹಿನ್ನೆಲೆಯಲ್ಲಿ ಈಗ ಈ ಮಾರ್ಗದ ಪ್ರಮುಖ ಎಲ್ಲಾ ನಗರಗಳಲ್ಲಿ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆಗೆ ಪ್ರಾಧಿಕಾರ ಮುಂದಾಗಿದೆ.


ನೈಸ್ ರಸ್ತೆ ಮಾದರಿಯಲ್ಲಿ ಒಟ್ಟು 16 ಸ್ಥಳಗಳಲ್ಲಿ ಪ್ರವೇಶ ಮತ್ತು ನಿರ್ಗಮನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಇದಲ್ಲದೆ ಸರ್ವೀಸ್ ರಸ್ತೆ ಪಕ್ಕ 92 ಬಸ್‌ಬೇಗಳು ತಲೆ ಎತ್ತಲಿವೆ.

ಕೆಫೆಟೇರಿಯಾ ನಿರ್ಮಾಣ; ಹೆಲಿಪ್ಯಾಡ್ ವ್ಯವಸ್ಥೆ

ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಮಧ್ಯೆ ಎಲ್ಲೂ ಸರ್ವೀಸ್ ರಸ್ತೆಗೆ ಇಳಿಯಲು ಅವಕಾಶ ಇರದು. ಇಂತಹವರ ಊಟೋಪಚಾರಕ್ಕೆಂದು ವಿಶಿಷ್ಟ ಮಾದರಿಯಲ್ಲಿ ಕೆಫೆಟೇರಿಯಾ ನಿರ್ಮಿಸಲು ಯೋಜಿಸಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಕನ್ನಮಂಗಲ ಬಳಿ ಬೈಪಾಸ್ ರಸ್ತೆಗೆ ಹೊಂದಿಕೊಂಡಂತೆ ಹೋಟೆಲ್ ಸಮುಚ್ಚಯ ತಲೆ ಎತ್ತಲಿದ್ದು, ಶೌಚಾಲಯ, ಲಾರಿ ಚಾಲಕರ ವಿಶ್ರಾಂತಿಗೆ ಟರ್ಮಿನಲ್ ಸಹ ಇರಲಿದೆ. ಇದಲ್ಲದೆ ಇನ್ನೂ ಮೂರು ಕಡೆ ಪ್ರಯಾಣಿಕರ ವಿಶ್ರಾಂತಿ ಸ್ಥಳಗಳು ತಲೆ ಎತ್ತಲಿವೆ.

ರಾಮನಗರ–ಚನ್ನಪಟ್ಟಣ ಬೈಪಾಸ್‌ಗೆ ಹೊಂದಿಕೊಂಡಂತೆ ಹೆಲಿಪ್ಯಾಡ್ ನಿರ್ಮಾಣಕ್ಕೆ ಸಹ ಹೆದ್ದಾರಿ ಪ್ರಾಧಿಕಾರ ಯೋಜಿಸಿದ್ದು, ಇದಕ್ಕೆ ಕೇಂದ್ರದ ಅನುಮತಿಯೂ ಸಿಕ್ಕಿದೆ. ಆರೋಗ್ಯ ಮತ್ತಿತರ ತುರ್ತು ಸೇವೆಗಳು ಹಾಗೂ ಗಣ್ಯರ ಓಡಾಟಕ್ಕೆ ಇದನ್ನು ಬಳಸಿಕೊಳ್ಳಬಹುದಾಗಿದೆ.



ಎಲ್ಲೆಲ್ಲಿ ಎಲಿವೇಟೆಡ್ ಕಾರಿಡಾರ್

4 ಕಿ.ಮೀ. ಪಂಚಮುಖಿ ಗಣೇಶ ದೇವಸ್ಥಾನದಿಂದ ಕ್ರೈಸ್ಟ್ ಕಾಲೇಜು (ಕುಂಬಳಗೋಡು)

4 ಕಿ.ಮೀ. ಮದ್ದೂರು ಹೊರವಲಯದಿಂದ ಗೆಜ್ಜಲಗೆರೆ ಕಾಲೊನಿ (ಮದ್ದೂರು)

ಬೆಂಗಳೂರು–ಮೈಸೂರು ಹೆದ್ದಾರಿ ಸವಾರಿ

ಬೆಂಗಳೂರು–ಮೈಸೂರು ಹೆದ್ದಾರಿಯು ಈಗ ನಾಲ್ಕು ಪಥದಿಂದ ದಶಪಥಕ್ಕೆ ವಿಸ್ತಾರಗೊಳ್ಳುತ್ತಿದೆ. ಮೊದಲ ಹಂತದ ಕಾಮಗಾರಿಗಳು ಅಂತಿಮ ಘಟ್ಟ ತಲುಪಿದ್ದು, ಎರಡನೇ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. ಇದರಿಂದ ಈ ಮಹಾನಗರಗಳ ನಡುವಿನ ಪ್ರಯಾಣದ ಅವಧಿ ಮೂರರಿಂದ ಒಂದೂವರೆ ಗಂಟೆಗೆ ತಲುಪಲಿದೆ ಎಂದು ನಿರೀಕ್ಷಿಸಲಾಗಿದೆ.

ನೂತನ ದಶಪಥ ರಸ್ತೆಯ ವಿಶೇಷಗಳು ಏನು? ಪ್ರಯಾಣಿಕರಿಗೆ ಆಗುವ ಅನುಕೂಲಗಳೇನು? ಯಾವೆಲ್ಲ ಸೌಲಭ್ಯಗಳು ಇರಲಿವೆ? ಇದರ ನ್ಯೂನತೆಗಳೇನು? ಎಂಬುದನ್ನು 'ಪ್ರಜಾವಾಣಿ' ಸಾಕ್ಷಾತ್ ವರದಿ ಮೂಲಕ ನಿಮ್ಮ ಮುಂದೆ ಇಡಲಿದೆ.



ಬೆಟ್ಟ–ಗುಡ್ಡಗಳ ನಡುವಿನ ಹತ್ತು ಪಥದ ಹೆದ್ದಾರಿ ಪ್ರಜಾವಾಣಿ ಚಿತ್ರ: ಚಂದ್ರೇಗೌಡ

ಬಿಡದಿ, ರಾಮನಗರ–ಚನ್ನಪಟ್ಟಣ ಬೈಪಾಸ್‌ಗಳು ಈಗಾಗಲೇ ಪ್ರಯಾಣಿಕರಿಗೆ ಮುಕ್ತವಾಗಿವೆ. ಉಳಿದೆಡೆಯೂ ಶೇ 80ರಷ್ಟು ಕಾಮಗಾರಿ ಮುಗಿದಿದ್ದು, ಹಂತ ಹಂತವಾಗಿ ಬಳಕೆಗೆ ತೆರೆದುಕೊಳ್ಳಲಿವೆ

ಶ್ರೀಧರ್, ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ದಸರಾ ವೇಳೆಗೆ ಹೆದ್ದಾರಿಯು ಉದ್ಘಾಟನೆ ಆಗಬೇಕಿತ್ತು. ಆದರೆ, ಮಳೆ ಮತ್ತಿತರ ಕಾರಣಕ್ಕೆ ಕೊಂಚ ವಿಳಂಬವಾಗಿದ್ದು, 2023ರ ಆರಂಭಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ

ಪ್ರತಾಪ ಸಿಂಹ, ಸಂಸದ, ಮೈಸೂರು–ಕೊಡಗು ಕ್ಷೇತ್ರ

ಎಕ್ಸ್‌ಪ್ರೆಸ್ ಹೈವೆ ವಿಶೇಷಗಳಿವು

- ಆರು ಪಥದ ಎಡಬಲಕ್ಕೆ 6 ಅಡಿಯ ತಂತಿಬೇಲಿ
- ರಸ್ತೆ ವಿಭಜಕ ಸ್ಥಳದಲ್ಲಿ ಗಿಡಗಳ ಪೋಷಣೆ
- ತಲಾ ಎರಡು ಕಡೆ ಟೋಲ್ ನಿರ್ಮಾಣ
- ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು

ಎಲ್ಲೆಲ್ಲಿ ಹೊಸ ಬೈಪಾಸ್

7 ಕಿ.ಮೀ. ಕಾಡುಮನೆ ಕ್ರಾಸ್‌ನಿಂದ ಕಲ್ಲುಗೋಪಳ್ಳಿ (ಬಿಡದಿ ಬೈಪಾಸ್)

23 ಕಿ.ಮೀ. ಬಸವನಪುರದಿಂದ ಬೈರಾಪಟ್ಟಣ (ರಾಮನಗರ– ಚನ್ನಪಟ್ಟಣ ಬೈಪಾಸ್)

4 ಕಿ.ಮೀ ನಿಡಘಟ್ಟದಿಂದ ಮದ್ದೂರು

10 ಕಿ.ಮೀ. ಸಾಂಜೋ ಆಸ್ಪತ್ರೆಯಿಂದ ದುದ್ದ ಕ್ರಾಸ್ (ಮಂಡ್ಯ ಬೈಪಾಸ್)

8 ಕಿ.ಮೀ. ಕೆ. ಶೆಟ್ಟಹಳ್ಳಿಯಿಂದ ನಗುವನಹಳ್ಳಿ ಗೇಟ್ (ಶ್ರೀರಂಗಪಟ್ಟಣ ಬೈಪಾಸ್)

ಹಲವು ವರ್ಷ ವಿಳಂಬ: ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ಬೆಂಗಳೂರು–ಮೈಸೂರು ರಸ್ತೆಯನ್ನು ನಾಲ್ಕು ಪಥಗಳ ಸುಸಜ್ಜಿತ ಹೆದ್ದಾರಿಯನ್ನಾಗಿ ನಿರ್ಮಿಸಲಾಗಿತ್ತು. ಆದರೆ, ನಂತರದಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾದ ಕಾರಣಕ್ಕೆ ಇದನ್ನು ಷಟ್ಪಥವನ್ನಾಗಿ ಪರಿವರ್ತಿಸಲು ಸರ್ಕಾರ ನಿರ್ಧರಿಸಿತ್ತು. 2016ರಲ್ಲಿ ಹತ್ತು ಪಥದ ಯೋಜನೆಗೆ ಅಂತಿಮ ಅನುಮೋದನೆ ದೊರೆಯಿತಾದರೂ ಭೂಸ್ವಾಧೀನ ಕಾರ್ಯ ವಿಳಂಬವಾದ ಕಾರಣ 2019ರಲ್ಲಿ ಕಾಮಗಾರಿ ಆರಂಭಗೊಂಡಿತು. ನಂತರದಲ್ಲಿಯೂ ಕೋವಿಡ್ ಹಾಗೂ ಮಳೆಯ ಕಾರಣಕ್ಕೆ ಕಾಮಗಾರಿ ಆಗಾಗ್ಗೆ ನಿಂತ ಕಾರಣ 2021ಕ್ಕೆ ಉದ್ಘಾಟನೆ ಆಗಬೇಕಿದ್ದ ದಶಪಥ ಹೆದ್ದಾರಿಯು 2023ರ ಆರಂಭಕ್ಕೆ ಉದ್ಘಾಟನೆ ಆಗುವ ನಿರೀಕ್ಷೆ ಇದೆ.

ಸುದ್ದಿ 2 ನಿಮಿಷ

ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವಕ್ಕೆ ₹ 1ಕೋಟಿ

ಬೆಂಗಳೂರು: ಸಮಾಜವಾದಿ ಚಳವಳಿಯ ನೇತಾರರಾದ ದಿವಂಗತ ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವ ಆಚರಣೆ ಹಾಗೂ ಗೌಡರ ಹೆಸರಿನಲ್ಲಿ ಪ್ರಶಸ್ತಿ ನೀಡಲು ಸರ್ಕಾರ ₹ 1 ಕೋಟಿ ಅನುದಾನ ಮಂಜೂರು ಮಾಡಿದೆ.

ಪ್ರಸಕ್ತ ವರ್ಷದ ಮಾರ್ಚ್ 14ರಿಂದ 2023ನೇ ಮಾರ್ಚ್ 14ರವರೆಗೆ ಗೋಪಾಲಗೌಡರ ಜನ್ಮ ಶತಮಾನೋತ್ಸವ ಆಚರಿಸಲಾಗುತ್ತಿದೆ. ಈ ಸಮಯದಲ್ಲಿ ಅವರ ನೆನಪಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು, ಪ್ರಶಸ್ತಿ ನೀಡಲು ಅನುದಾನ ನೀಡುವಂತೆ ಕೋರಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದ್ದರು.

ಆರಗ ಅವರ ಮನವಿಯನ್ನು ಪುರಸ್ಕರಿಸಿರುವ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವ ಆಚರಣೆ ಸಮಿತಿಗೆ ಹಣ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ನೂತನ ತಂತ್ರಜ್ಞಾನದಿಂದ ಕಾಂಚಿಪುರಂ ಸೀರೆಗಳ ವಿನ್ಯಾಸ



ಬೆಂಗಳೂರು: 'ಆರ್‌ಎಂವಿಕೆ ಸಿಲ್ಕ್ ಸಂಸ್ಥೆಯು ಎರಡು ನೂತನ ತಂತ್ರಜ್ಞಾನದ ಮೂಲಕ ರೇಷ್ಮೆ ಸೀರೆಗಳನ್ನು ವಿನ್ಯಾಸಗೊಳಿಸಿದೆ'.

'ನೈಸರ್ಗಿಕ ರೇಷ್ಮೆ' ಸೀರೆಗಳನ್ನು ಸಾಂಪ್ರದಾಯಿಕವಾಗಿ ಕೈಯಿಂದ ನೇಯ್ದು, ಅದಕ್ಕೆ ನೈಸರ್ಗಿಕ ಬಣ್ಣಗಳನ್ನು ಬಳಸಿ ವಿನ್ಯಾಸಗೊಳಿಸಲಾಗಿದೆ ಎಂದು ಆರ್‌ಎಂವಿಕೆ ಸಿಲ್ಕ್‌ನ ನಿರ್ದೇಶಕ ಶಂಕರ್ ಕುಮಾರಸ್ವಾಮಿ ತಿಳಿಸಿದ್ದಾರೆ.

'ಸೀರೆಗಳನ್ನು ತಮಿಳುನಾಡಿನ ಆರ್‌ಎಂವಿಕೆ ಸಿಲ್ಕ್‌ನ ಆರ್ ಅಂಡ್ ಡಿ ಸೆಂಟರ್‌ನಲ್ಲಿ ಹತ್ತಾರು ನೈಸರ್ಗಿಕ ಬಣ್ಣಗಳ ಪಾಕವಿಧಾನಗಳನ್ನು ಬಳಸಿ ಮರುಸಂಶೋಧಿಸಲಾಗಿದೆ. ನಮ್ಮದೇ ಆದ ಕೆಲವು ವಿಶೇಷ ಬಣ್ಣಗಳನ್ನ ಸಹ ಆವಿಷ್ಕರಿಸಲಾಗಿದೆ' ಎಂದರು.

'ದಸರಾ ಹಬ್ಬಕ್ಕೆ 'ಲಿನೋ' ತಂತ್ರಜ್ಞಾನದ ಸಿಲ್ಕ್ ಸೀರೆಗಳನ್ನು ಪರಿಚಯಿಸಲಾಗುತ್ತಿದ್ದು, ಇವು ಕೈಗಳಿಂದ ನೇಯ್ದ ರೇಷ್ಮೆ ಸೀರೆಗಳಾಗಿವೆ. ಇವನ್ನು ಲೆನೋ ತಂತ್ರಜ್ಞಾನವನ್ನು ಬಳಸಿಕೊಂಡು ರಚಿಸಿರುವುದರಿಂದ ಶೇ 40ರಷ್ಟು ಹಗುರವಾಗಿವೆ. ಇವುಗಳನ್ನು ಯುವ ಪೀಳಿಗೆಯ ಗ್ರಾಹಕರನ್ನು ಗಮದಲ್ಲಿಟ್ಟು ಕೊಂಡು ವಿನ್ಯಾಸ ಮಾಡಲಾಗಿದೆ ಎಂದು ನಿರ್ದೇಶಕ ಪ್ರಣವ್‌ಕುಮಾರ್ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಬಿಪಿಎಲ್‌ಆರ್ ಆಧಾರಿತ (ಬೆಂಚ್‌ಮಾರ್ಕ್ ಪ್ರೈಮ್ ಲೆಂಡಿಂಗ್ ರೇಟ್) ಸಾಲದ ಬಡ್ಡಿ ದರವನ್ನು 70 ಮೂಲಾಂಶಗಳಷ್ಟು ಹೆಚ್ಚಿಸಿದೆ. ಈಗ ಇದು ಶೇ 13.45ರಷ್ಟು ಆಗಿದೆ.

ಇದರಿಂದಾಗಿ ಬಿಪಿಎಲ್‌ಆರ್ ಜೊತೆ ಜೋಡಣೆ ಆಗಿರುವ ಸಾಲಗಳ ಮರುಪಾವತಿ ಕಂತು ಮೊತ್ತ ಜಾಸ್ತಿ ಆಗಲಿದೆ. ಪರಿಷ್ಕೃತ ದರವು ಗುರುವಾರದಿಂದ ಜಾರಿಗೆ ಬಂದಿದೆ.

ಚಿತ್ರಾವಳಿ



ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕೀಳುಮಟ್ಟದ ಪದ ಪ್ರಯೋಗ ಮಾಡಿದ್ದಾರೆ ಎಂದು ಆರೋಪಿಸಿ, 'ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ' ಮತ್ತು 'ಸಿದ್ದರಾಮಯ್ಯ ಅಭಿಮಾನಿಗಳ ಬಳಗ'ದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ



1995ರ ನಂತರ ಆರಂಭವಾದ ಕನ್ನಡ ಮಾಧ್ಯಮ ಅನುದಾನ ರಹಿತ ಶಾಲಾ –ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವಂತೆ ಒತ್ತಾಯಿಸಿ ರಾಜ್ಯ ಅನುದಾನರಹಿತ ಶಾಲಾ–ಕಾಲೇಜುಗಳ ಆಡಳಿತ ಮಂಡಳಿಗಳು ಮತ್ತು ನೌಕರರ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ



ಬ್ಯಾಟರಾಯನಪುರ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಜಕ್ಕೂರು ವಾರ್ಡ್ ವ್ಯಾಪ್ತಿಯ ಅಮರಜ್ಯೋತಿ ಬಡಾವಣೆಯಲ್ಲಿ ಕ್ಷೇತ್ರದ ಅಧ್ಯಕ್ಷ ಎನ್‌.ವೇಣುಗೋಪಾಲ್ ಅವರು ಮಹಿಳೆಯರಿಗೆ ಸೀರೆ ವಿತರಿಸಿದರು. ಮುಖಂಡರಾದ ಹರೀಶ್ ಕುಮಾರ್, ಖಲೀಲುಲ್ಲಾ, ಆಂಜನೇಗೌಡ, ದಾಸಪ್ಪ, ಗುರು, ಥಾಮಸ್, ಮುರುಗ ಉಪಸ್ಥಿತರಿದ್ದರು

ನಾಳೆ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಾಲ್ಕ್ ಕೌಶಲ್ಯಾಭಿವೃದ್ಧಿ ವೃತ್ತಿ ಶಿಕ್ಷಣ ಹಾಗೂ ಉದ್ಯೋಗ ಮಾರ್ಗದರ್ಶನ ಸಂಸ್ಥೆಯ ವತಿಯಿಂದ ಸೆಪ್ಟೆಂಬರ್ 18ರಂದು (ಭಾನುವಾರ) ಸುಂಕದಕಟ್ಟೆಯ ಓಂಸಾಯಿ ಕಾಲೇಜಿನಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಈ ಉದ್ಯೋಗ ಮೇಳದಲ್ಲಿ ಸಾಫ್ಟ್‌ವೇರ್, ಹಾರ್ಡ್‌ವೇರ್, ಆಟೋಮೊಬೈಲ್, ಮ್ಯಾನ್ಯುಫ್ಯಾಕ್ಚರಿಂಗ್, ರಿಟೈಲ್, ಮಾರ್ಕೆಟಿಂಗ್, ಬ್ಯಾಂಕಿಂಗ್, ಅಕೌಂಟಿಂಗ್, ಗ್ರಾಫಿಕ್ಸ್ ಡಿಸೈನಿಂಗ್ ಸೇರಿದಂತೆ 100ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. ಎಸ್ಸೆಸ್ಸೆಲ್ಸಿ, ಐಟಿಐ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಪಡೆದ, ವಿದ್ಯಾಭ್ಯಾಸ ಹೊಂದಿಲ್ಲದವರ ಕೌಶಲ್ಯಕ್ಕೆ ತಕ್ಕಂತೆ ಉದ್ಯೋಗ ಅವಕಾಶ ದೊರೆಯಲಿದೆ.

ಆಸಕ್ತರು ಉದ್ಯೋಗ ಮೇಳದಲ್ಲಿ ಭಾಗವಹಿಸಲು 9606338866 ಸಂಖ್ಯೆಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬೇಕು. ಸ್ವವಿವರಗಳನ್ನು balc.jobfair@gmail.comಗೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಒಬಿಸಿಗೆ ರಾಜಕೀಯ ಮೀಸಲು ಕೊರತೆ'

ಬಿಬಿಎಂಪಿ: ಸಮಯಾವಕಾಶ ಬೇಕು ಎಂದು ಹೈಕೋರ್ಟ್‌ಗೆ ಮನವಿ ಮಾಡಿದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಗೆ ಸಿದ್ಧಪಡಿಸಲಾಗಿರುವ 243 ವಾರ್ಡ್‌ಗಳ ಮೀಸಲು ಪಟ್ಟಿಯಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಮೀಸಲು ಕಲ್ಪಿಸಲಾಗಿಲ್ಲ ಎಂದು ದೂರಲಾಗಿರುವ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಬೇಕು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಕುರಿತಂತೆ ಈಜಿಪುರದ ಕೆ.ಮಹದೇವ, ಕಮ್ಮನಹಳ್ಳಿಯ ಪಳನಿ ದಯಾಳನ್, ದೊಡ್ಡಬಾಣಸವಾಡಿಯ ವಿ.ಶ್ರೀನಿವಾಸ್ ಮತ್ತು ನಾಗನಾಥಪುರದ ಕೆ.ಚಂದ್ರಶೇಖರ್ ಹಾಗೂ ಇತರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ಮತ್ತು ಎ.ಎಸ್.ಪೊನ್ನಣ್ಣ, 'ಹೊಸದಾಗಿ ರಚನೆಯಾಗಿರುವ 243 ಬಿಬಿಎಂಪಿ ವಾರ್ಡ್‌ಗಳಿಗೆ ಮೀಸಲು ಪಟ್ಟಿಯನ್ನು 2022ರ ಆಗಸ್ಟ್ 3ರಂದು ಪ್ರಕಟಿಸಲಾಗಿದೆ. ಈ ಎಲ್ಲ 243 ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸುವಲ್ಲಿ ಒಬಿಸಿಗೆ ರಾಜಕೀಯ ಮೀಸಲಾತಿ ಕಲ್ಪಿಸಿಲ್ಲ. ಈ ಬಗ್ಗೆ ಕೇಳಿದರೆ ಚುನಾವಣಾ ಆಯೋಗ ಕಲ್ಪಿಸಲಾಗಿದೆ ಎಂದು ಹೇಳುತ್ತದೆ. ಆದರೆ, ಅದರ ಬಳಿ ಯಾವುದೇ ದಾಖಲೆಗಳು ಇಲ್ಲ. ಸರ್ಕಾರವೂ ಈ ಬಗ್ಗೆ ಮುಗುಮ್ಮಾಗಿದೆ. ಚುನಾವಣಾ ಆಯೋಗ ಸ್ವತಂತ್ರವಾಗಿ ತನ್ನ ಕಾರ್ಯ ನಿರ್ವಹಿಸುತ್ತಿರುವಂತೆ ಕಾಣುತ್ತಿಲ್ಲ. ಆದ್ದರಿಂದ, ಈ ಕುರಿತ ದಾಖಲೆಗಳನ್ನು ನ್ಯಾಯಾಲಯಕ್ಕೆ ಪ್ರಸ್ತುತಪಡಿಸಬೇಕು' ಎಂದು ಕೋರಿದರು.

'ವಾರ್ಡ್‌ವಾರು ಮೀಸಲಾತಿ ನಿಗದಿಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಭಕ್ತವತ್ಸಲ ಸಮಿತಿ ವರದಿ ಆಧರಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ, ಭಕ್ತವತ್ಸಲ ಸಮಿತಿ ಶಿಫಾರಸು ಮಾಡಿರುವ ಮೂರು ಹಂತದ ಪರಿಶೀಲನೆಯನ್ನು (ಟ್ರಿಪಲ್ ಟೆಸ್ಟ್) ಅನ್ವಯಿಸಿಕೊಂಡಿಲ್ಲ. ಯಾವ ಜಾತಿಗಳಿಗೆ ಪ್ರಾತಿನಿಧ್ಯ ಕಲ್ಪಿಸಲಾಗಿದೆ ಎಂಬ ಪಟ್ಟಿಯನ್ನೂ ಒದಗಿಸಿಲ್ಲ. ಒಬಿಸಿಯಲ್ಲಿ ಅಲ್ಪಸಂಖ್ಯಾತರೂ ಸೇರಿದ್ದು, ಇವರಲ್ಲಿ ಮುಸ್ಲಿಂ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ಇದೆ. ಇನ್ನುಳಿದ ಅಲ್ಪಸಂಖ್ಯಾತರು ಕಡೆಗಣನೆಗೆ ಒಳಗಾಗಿದ್ದಾರೆ' ಎಂದು ಬಲವಾಗಿ ಆಕ್ಷೇಪಿಸಿದರು.

'ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ನೀಡಬೇಕು' ಎಂಬ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಅವರ ಮನವಿಯನ್ನು ನ್ಯಾಯಪೀಠ ಪುರಸ್ಕರಿಸಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ಅರ್ಜಿಗಳ ವಜಾ: 243 ವಾರ್ಡ್‌ಗಳ ಮರು ವಿಂಗಡಣೆ ಅಧಿಸೂಚನೆ ಪ್ರಶ್ನಿಸಲಾಗಿದ್ದ ಹತ್ತಕ್ಕೂ ಹೆಚ್ಚು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ ವೇಳೆ ವಜಾಗೊಳಿಸಿತು.

'ವಾರ್ಡ್ ಮರುವಿಂಗಡಣೆ ನಿಗದಿಗೆ ಭೌಗೋಳಿಕ ವಿಸ್ತೀರ್ಣ ಮತ್ತು 2011ರ ಜನಗಣತಿ ಆಧಾರದಲ್ಲಿ ನ್ಯಾಯೋಚಿತ ಮಾರ್ಗಗಳನ್ನು ಅನುಸರಿಸಲಾಗಿದೆ' ಎಂಬ ರಾಜ್ಯ ಸರ್ಕಾರದ ನಿಲುವನ್ನು ನ್ಯಾಯಪೀಠ ಎತ್ತಿಹಿಡಿದಿದೆ.

ಮತದಾರರ ಅಂತಿಮ ಪಟ್ಟಿ 22ಕ್ಕೆ ಪ್ರಕಟ

ಬೆಂಗಳೂರು: ಬಿಬಿಎಂಪಿ 243 ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಸಿದ್ಧವಾಗಿದ್ದು, ಮುದ್ರಣ ಕಾರ್ಯ ನಡೆಯುತ್ತಿದೆ. ಸೆ.22ರಂದು ಅಂತಿಮ ಪಟ್ಟಿ ಸಾರ್ವಜನಿಕವಾಗಿ ಪ್ರಕಟಿಸಲಾಗುವುದು.

ಆ.25ರಂದು ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಆಕ್ಷೇಪಣೆ ಹಾಗೂ ತಿದ್ದುಪಡಿ ಸಲ್ಲಿಸಲು ಸೆ.2ರವರೆಗೆ ನೀಡಿದ್ದ ಅವಧಿಯನ್ನು 9ರವರೆಗೆ ವಿಸ್ತರಿಸಲಾಗಿತ್ತು. ಈ ಅವಧಿಯಯಲ್ಲಿ 1800 ಆಕ್ಷೇಪಣೆ/ ತಿದ್ದುಪಡಿಗೆ ಮನವಿಗಳು ಬಂದಿದ್ದವು. ಅವುಗಳನ್ನು ಪರಿಶೀಲಿಸಿ, ಅಗತ್ಯ ಪರಿಷ್ಕರಣೆ ಕಾರ್ಯ ನಡೆಸಲಾಗಿದೆ. ರಾಜ್ಯ ಚುನಾವಣೆ ಆಯೋಗದ ವೇಳಾಪಟ್ಟಿಯಂತೆ ಸೆ.16ರಿಂದ ಮತದಾರರ ಪಟ್ಟಿ ಮುದ್ರಣ ಕಾರ್ಯ ಆರಂಭವಾಗಿದೆ. ಇದೇ 22ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಬಿಬಿಎಂಪಿಯ ಚುನಾವಣೆ ವಿಭಾಗದ ಸಹಾಯಕ ಆಯುಕ್ತ ಉಮೇಶ್ ಅವರು ತಿಳಿಸಿದರು.

ವಾರ್ಡ್ ಬದಲಾವಣೆ, ಹೆಸರು ತಿದ್ದುಪಡಿ, ವಿಳಾಸದಲ್ಲಿ ತಪ್ಪು ಸೇರಿದಂತೆ ಹಲವು ರೀತಿಯ ತಿದ್ದುಪಡಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಕೆಲವರು ಇಲ್ಲಿಲ್ಲ, ಅವರ ಹೆಸರು ತೆಗೆಯಿರಿ ಎಂಬ ಆಕ್ಷೇಪಣೆಗಳೂ ಇದ್ದವು. ಎಲ್ಲವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.



ಮತದಾರ ಪಟ್ಟಿಗೆ ಸೇರಿಸುವ ಪ್ರಕ್ರಿಯೆ ಇಲ್ಲಿಗೆ ಮುಗಿಯುವುದಿಲ್ಲ. ಚುನಾವಣೆ ಪ್ರಕಟಗೊಂಡು, ನಾಮಪತ್ರ ಸಲ್ಲಿಸಲು ಕೊನೆಯ ದಿನ ಇರುವವರೆಗೂ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಉಮೇಶ್ ಮಾಹಿತಿ ನೀಡಿದರು.

ಪೊಲೀಸರಿಗೆ ದೂರು ನೀಡಲು ಅವಕಾಶ

ಅಂಬೇಡ್ಕರ್ ಭವನದ ಹೆಸರಿನಲ್ಲಿ ಅಕ್ರಮ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಅಂಬೇಡ್ಕರ್ ಭವನ' ನಿರ್ಮಾಣದ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ₹ 40 ಲಕ್ಷ ಅವ್ಯವಹಾರ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಈ ಸಂಬಂಧ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಅಕ್ರಮ ಸಂಬಂಧ ಪೊಲೀಸರಿಗೆ ದೂರು ನೀಡಲು ಹಾಗೂ ಸಂಬಂಧಪಟ್ಟ ಕಚೇರಿಗಳಿಂದ ದಾಖಲೆ ಪಡೆಯಲು ತಾಲ್ಲೂಕು ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಕುಂದುಕೊರತೆ ಸಮಿತಿ ಸದಸ್ಯರಿಗೆ ಅವಕಾಶ ನೀಡಲು ಸಭೆ ನಿರ್ಧರಿಸಿತು.

ಲೂಟಿ ಮಾಡಿರುವ ಅಧಿಕಾರಿಗಳನ್ನು ಅಮಾನತು ಮಾಡಬೇಕು ಹಾಗೂ ಅಕ್ರಮಕ್ಕೆ ಬಳಸಿರುವ ನಿವೇಶನವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆದ ಹಿನ್ನೆಲೆಯಲ್ಲಿ ಸಭೆ ಕರೆಯಲಾಗಿತ್ತು.

ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷ ಬಿ.ಆರ್.ಭಾಸ್ಕರ್ ಪ್ರಸಾದ್ ಮಾತನಾಡಿ, 'ನೆಲಮಂಗಲ ಯೋಜನಾ ಪ್ರಾಧಿಕಾರ, ಕೆಆರ್‌ಐಡಿಎಲ್, ನಗರಾಭಿವೃದ್ಧಿ ಇಲಾಖೆ ಕೆಲವು ಅಧಿಕಾರಿಗಳು, ನಕಲಿ ಎನ್‌ಜಿಒವೊಂದರ ಜೊತೆ ಕೈಜೋಡಿಸಿ ಪಟ್ಟಣದ ಲೋಹಿತ್ ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಿದ್ದೇವೆ ಎಂದು ನಕಲಿ ದಾಖಲೆ ಸೃಷ್ಟಿಸಿ ₹ 40 ಲಕ್ಷ ಲೂಟಿ ಮಾಡಿದ್ದಾರೆ. ಒಂದು ತಿಂಗಳಿಂದ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿದರೂ ಕ್ರಮ ಕೈಗೊಂಡಿಲ್ಲ. ಹೀಗಾಗಿ ಪ್ರತಿಭಟನೆ ಹಾದಿ ಹಿಡಿಯಬೇಕಾಯಿತು' ಎಂದರು.

ತಹಶೀಲ್ದಾರ್ ಮಂಜುನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಎಂ.ವಾಣಿ, ಪೊಲೀಸ್ ಇನ್‌ಸ್ಪೆಕ್ಟರ್ ಶಶಿಧರ್, ಎನ್.ಕೆ.ರಾಜು, ಎನ್. ನಾಗರಾಜು ಹಾಜರಿದ್ದರು.



ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷ ಬಿ.ಆರ್.ಭಾಸ್ಕರ್ ಪ್ರಸಾದ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಮುಖ್ಯಾಂಶಗಳು

- ₹ 40 ಲಕ್ಷ ಅವ್ಯವಹಾರ
- ಅಧಿಕಾರಿಗಳ ಅಮಾನತಿಗೆ ಆಗ್ರಹ, ಪ್ರತಿಭಟನೆ

ಪಾಪನಹಳ್ಳಿ: ಸರ್ಕಾರಿ ಶಾಲೆ ಜಾಗದ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಟ್ಟಹಲಸೂರು ಸರ್ಕಾರಿ ಶಾಲೆ ಜಾಗದಲ್ಲಿ ಬಡಾವಣೆ ನಿರ್ಮಾಣವಾಗಿರುವ ಸ್ಥಳಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಗ್ರಾಮಸ್ಥರು ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಚಿಕ್ಕಜಾಲ ಹೋಬಳಿ ಪಾಪನಹಳ್ಳಿ ಸರ್ವೆ ನಂಬರ್ 46ರಲ್ಲಿ 5 ಎಕರೆ 16 ಗುಂಟೆ ಜಾಗ ಶಿಕ್ಷಣ ಇಲಾಖೆ ವಶದಲ್ಲಿ ಇಲ್ಲ. ಆದರೆ, 3 ಎಕರೆ 36 ಗುಂಟೆ ಜಾಗ ಶಾಲೆ ವಶದಲ್ಲೇ ಇದೆ. ಈ ಹಿಂದೆಯೇ ಸುತ್ತಲೂ ಬೇಲಿ ನಿರ್ಮಾಣವಾಗಿದೆ. ಶಿಕ್ಷಣ ಇಲಾಖೆಯಿಂದ ಈ ಕಾಮಗಾರಿ ಕೈಗೊಂಡಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಅದನ್ನು ಗ್ರಾಮಸ್ಥರೇ ನಿರ್ಮಿಸಿದ್ದಾರೆ. ಈ ಬಗ್ಗೆ ಮೇಲಧಿಕಾರಿಗಳಿಗೆ ವಿವರ ನೀಡಿದ್ದೇವೆ' ಎಂದು ಯಲಹಂಕ ಶಿಕ್ಷಣ ಸಂಯೋಜಕ ಅಶೋಕ್ ಕಂಪ್ಲಿ ತಿಳಿಸಿದರು.

'ಸರ್ಕಾರಿ ಶಾಲೆಗೇ ಸೇರಿದ ಜಮೀನು ಎಂದು ಹೈಕೋರ್ಟ್ 2013ರಲ್ಲಿ ಆದೇಶ ನೀಡಿತು. ಅದಾದ ಬಳಿಕ ಶಾಲೆ ಹೆಸರಿಗೆ ಖಾತೆ ಮಾಡಿಸಿ ಈ ಜಾಗಕ್ಕೆ ತಂತಿ ಬೇಲಿ ಹಾಕಿಸಿ ರಕ್ಷಣೆ ಮಾಡಲು ಅವಿರತವಾಗಿ ಶ್ರಮಿಸಿದ್ದೇವೆ' ಎಂದು ಗ್ರಾಮಸ್ಥರಾದ ಬಿ.ನಾರಾಯಣ ತಿಳಿಸಿದರು.

'ಖಾತೆ ಮಾಡಲು ವಿಶೇಷ ತಹಶೀಲ್ದಾರ್ ಹಿಂದೇಟು ಹಾಕಿದ್ದರು. ಲೋಕಾಯುಕ್ತಕ್ಕೆ ದೂರು ನೀಡಿದ ಬಳಿಕ ಖಾತೆ ಮಾಡಿಕೊಟ್ಟರು. ಬಳಿಕ ತಂತಿ ಬೇಲಿ ಹಾಕಿಸಿದ್ದೇವೆ. ಈ ನಡುವೆ ಟೆಲಿಕಾಂ ಹೌಸಿಂಗ್ ಸೊಸೈಟಿಯವರು ಮತ್ತೆ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಬಡಾವಣೆ ಪ್ರದೇಶದಲ್ಲೇ ಇರುವ ಶಾಲೆ ಜಾಗಕ್ಕೆ ಬದಲಾಗಿ, ಬೇರೆ ಜಾಗ ನೀಡುವುದಾಗಿ ಹೇಳುತ್ತಿದ್ದಾರೆ. ಈ ವಿಷಯ ಇನ್ನೂ ನ್ಯಾಯಾಲಯದಲ್ಲಿದೆ' ಎಂದು ಹೇಳಿದರು.

ಮುಖ್ಯಾಂಶಗಳು

- ಲೋಕಾಯುಕ್ತಕ್ಕೆ ದೂರು ನೀಡಿದ ಬಳಿಕ ಖಾತೆ
- ನ್ಯಾಯಾಲಯದ ಮೊರೆ ಹೋದ ಟೆಲಿಕಾಂ ಹೌಸಿಂಗ್ ಸೊಸೈಟಿ

ಶನಿವಾರ, ಸೆಪ್ಟೆಂಬರ್ 17, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿದ್ಧತೆ
ವಿಶ್ವಕರ್ಮ ಜಯಂತ್ಯುತ್ಸವದ ಅಂಗವಾಗಿ ಕೋಲ್ಕತ್ತದಲ್ಲಿ ವ್ಯಕ್ತಿಯೊಬ್ಬರು ಶುಕ್ರವಾರ ಪೂಜೆಗಾಗಿ ವಿಶ್ವಕರ್ಮ ಮೂರ್ತಿಯನ್ನು ಕೊಂಡೊಯ್ದರು

ಶನಿವಾರ, ಸೆಪ್ಟೆಂಬರ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 258 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕಸ ಸಂಗ್ರಹಕ್ಕಾಗಿ ನಿಯೋಜಿಸಿರುವ 'ಸ್ವಚ್ಛವಾಹಿನಿ'ಗೆ ಮಹಿಳೆಯರೇ ಸಾರಥಿ.



ಯಾತ್ರೆಗೆ ನಾಯಕರ ಅಸಹಕಾರ: ಡಿಕೆಶಿ ಕಿಡಿ 5
'ಸಾಕ್ಷ್ಯಸಹಿತ ದೂರಿತ್ತರೆ ಕ್ರಮ ನಿಶ್ಚಿತ' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,841	17,531	₹51,000 (ಬೆಂಗಳೂರು)	₹57,300 (ಬೆಂಗಳೂರು)	79.78

ಜಕ್ಕೂರು: 75 ಎಕರೆ ಖಾಸಗಿಗೆ?

ವೈಮಾನಿಕ ತರಬೇತಿ ಶಾಲೆಯ ₹1,500 ಕೋಟಿ ಮೌಲ್ಯದ ಜಮೀನು • ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕ್ಕೂರಿನಲ್ಲಿರುವ ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸೇರಿದ ಸುಮಾರು ₹1,500 ಕೋಟಿ ಮೌಲ್ಯದ 75 ಎಕರೆ ಜಾಗವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಹೆಸರಿನಲ್ಲಿ ಖಾಸಗಿಯವರಿಗೆ ವಹಿಸಲು ಕ್ರೀಡಾ ಇಲಾಖೆ ಸಿದ್ಧತೆ ನಡೆಸಿದೆ ಎಂಬ ದೂರು ರಾಜ್ಯಪಾಲರಿಗೆ ಸಲ್ಲಿಕೆಯಾಗಿದೆ.

ಬಡ ಮತ್ತು ಮಧ್ಯಮ ವರ್ಗದವರಿಗೆ ವಿಮಾನ ಚಾಲನೆ ತರಬೇತಿ (ಪೈಲಟ್) ನೀಡಬೇಕೆಂಬ ಆಶಯದಿಂದ ಮೈಸೂರು ಮಹಾರಾಜರು 211 ಎಕರೆ ವಿಸ್ತೀರ್ಣದ ಈ ಜಾಗವನ್ನು ಸರ್ಕಾರಕ್ಕೆ ದಾನವಾಗಿ ನೀಡಿದ್ದರು. ಈ ಜಾಗದಲ್ಲಿ 25 ಎಕರೆ (1,01,196 ಚದರ ಮೀಟರ್) ಯಷ್ಟು ಜಾಗವನ್ನು ಏರೋ ಕ್ಲಬ್ ಏರಿಯಾ ಹಾಗೂ 50 (2,02,358 ಚದರ ಮೀಟರ್) ಎಕರೆಯನ್ನು ಕಮರ್ಷಿಯಲ್ ಕಾಂಪ್ಲೆಕ್ಸ್ ಏರಿಯಾ ಎಂದು ಅಭಿವೃದ್ಧಿ ಪಡಿಸಲು ಕ್ರೀಡೆ ಮತ್ತು ಯುವಜನ ಸಬಲೀಕರಣ ಇಲಾಖೆ ಪ್ರಸ್ತಾವ ಸಿದ್ಧಪಡಿಸಿದೆ ಎಂದು ಗೊತ್ತಾಗಿದೆ.

ಬಹುಕೋಟಿ ರೂಪಾಯಿ ಬೆಲೆ ಬಾಳುವ ಈ ಜಾಗವನ್ನು ಪಿಪಿಪಿ ಮಾದರಿಯಲ್ಲಿ ಖಾಸಗಿಯವರಿಗೆ ಹಸ್ತಾಂತರಿಸುವ ಯತ್ನವನ್ನು ತಡೆಯುವಂತೆ ರಾಜ್ಯಪಾಲರಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಭ್ರಷ್ಟಾಚಾರ ನಿರ್ಮೂಲನಾ ಸಂಸ್ಥೆ ದಾಖಲೆ ಸಹಿತ ದೂರನ್ನೂ ಸಲ್ಲಿಸಿದೆ. ಈ ಜಾಗದಲ್ಲಿ ಪ್ರತಿ ಎಕರೆ ಜಮೀನಿನ ಮಾರುಕಟ್ಟೆ ದರ ಕನಿಷ್ಠ ₹20 ಕೋಟಿಯಷ್ಟಿದೆ.

ಯೋಜನೆಗೆ ಸಿದ್ಧತೆ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ಬಳ್ಳಾರಿ ರಸ್ತೆಯಲ್ಲಿನ ಈ ಪ್ರದೇಶ ಬಹುಬೇಡಿಕೆ ಹೊಂದಿದೆ. ಮೇಲ್ಸೇತುವೆ ನಿರ್ಮಾಣವಾದ ಮೇಲೆ ಜಕ್ಕೂರು ಏರೋಡ್ರಂನಲ್ಲಿ ಸಣ್ಣ ವಿಮಾನಗಳ ಹಾರಾಟಕ್ಕೆ ಇದ್ದ ರನ್‌ವೇ ಉದ್ದ ಕುಗ್ಗಿತ್ತು. ಇದರಿಂದಾಗಿ, ವೈಮಾನಿಕ ಹಾರಾಟಕ್ಕೆ ಇದು ಸೂಕ್ತ ಪ್ರದೇಶವಲ್ಲ ಎಂಬ ಬಗ್ಗೆ ವೈಮಾನಿಕ ಶಾಲೆಯೇ ಪ್ರತಿಪಾದಿಸಿತ್ತು.

ಈ ಕಾರಣ ಮುಂದಿಟ್ಟು, ಆಯಕಟ್ಟಿನ ಜಾಗವನ್ನು ಬಳಸಿಕೊಂಡು ವಿವಿಧ ಉದ್ದೇಶದ ಹೆಸರಿನಲ್ಲಿ ಜಂಟಿಯಾಗಿ ಅಭಿವೃದ್ಧಿಪಡಿಸಿ, ಸರ್ಕಾರಕ್ಕೆ ನೀಡುವುದಾಗಿ ಖಾಸಗಿ ಕಂಪೆನಿಗಳು ಮುಂದೆ ಬಂದಿದ್ದವು. ಈ ಯೋಜನೆಯ ರೂಪುರೇಷೆ ಸಿದ್ಧಪಡಿಸಿಕೊಡು-ವಂತೆ ಕ್ರೀಡಾ ಇಲಾಖೆಯು 'ಕ್ಯಾಡ್ (ಸಿಎಡಿಡಿ) ಫೋರಂ' ಸಂಸ್ಥೆಯನ್ನು ಸಮಾಲೋಚಕರಾಗಿ ನಿಯೋಜಿಸಿತ್ತು. ಈ ಸಂಸ್ಥೆ ಸಿದ್ಧಪಡಿಸಿರುವ ಪ್ರಸ್ತಾವವನ್ನು ದೂರಿನಲ್ಲಿ ಲಗತ್ತಿಸಲಾಗಿದೆ.

4ನೇ ಪುಟ ನೋಡಿ


ಉನ್ನತೀಕರಣಕ್ಕೆ ಆದ್ಯತೆ: ನಾರಾಯಣಗೌಡ

'ವೈಮಾನಿಕ ಶಾಲೆಯ ಉನ್ನತೀಕರಣಕ್ಕೆ ಆದ್ಯತೆ ನೀಡುವುದು ನಮ್ಮ ಆಶಯ. ಅಲ್ಲಿ ವಾಣಿಜ್ಯೀಕರಣಕ್ಕೆ ಅವಕಾಶ ಕೊಡುವುದಿಲ್ಲ' ಎಂದು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಹೇಳಿದರು.

'ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ವೈಮಾನಿಕ ಶಾಲೆಯನ್ನು ಅಭಿವೃದ್ಧಿಪಡಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ವಿವಿಧ ವಿಮಾನ ಸಂಸ್ಥೆಗಳಲ್ಲಿ ಕೆಲಸ ಮಾಡುವ ವಿಮಾನ ಚಾಲಕರಿಗೆ ಆರು ತಿಂಗಳಿಗೊಮ್ಮೆ ಉನ್ನತ ತರಬೇತಿ ನೀಡಲಾಗುತ್ತದೆ. ಅದು ಅತ್ಯಂತ ದುಬಾರಿಯಾದ ತರಬೇತಿಯಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ ಈ ತರಬೇತಿ ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆ' ಎಂದರು.

ಅಂಕಿ-ಅಂಶಗಳು

- **221** ಎಕರೆ — ಒಟ್ಟು ಜಮೀನು
- ₹**20** ಕೋಟಿ — ಪ್ರತಿ ಎಕರೆಯ ಮೌಲ್ಯ
- ₹**4,220** ಕೋಟಿ — ಒಟ್ಟು ಜಮೀನಿನ ಮೌಲ್ಯ
- **75** ಎಕರೆ — ಪಿಪಿಪಿ ಯೋಜನೆಯ ಜಮೀನು
- ₹**1,500** ಕೋಟಿ — ಪಿಪಿಪಿಗೆ ಬಳಕೆಯಾಗುವ ಜಮೀನಿನ ಮೌಲ್ಯ





ತಾಲೀಮು ದಸರಾ ಮಹೋತ್ಸವದ ಪೂರ್ವಭಾವಿಯಾಗಿ ಮೈಸೂರಿನ ವಸ್ತು ಪ್ರದರ್ಶನ ಮೈದಾನದಲ್ಲಿ ಶುಕ್ರವಾರ ಫಿರಂಗಿಗಳಿಂದ ಸಿಡಿಮದ್ದು ಸಿಡಿಸುವ ತಾಲೀಮು ನಡೆಯಿತು –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ವಿಶ್ವ ಬ್ಯಾಂಕ್ ಎಚ್ಚರಿಕೆ • ಹಣದುಬ್ಬರದಿಂದ ಸಮಸ್ಯೆ ಸೃಷ್ಟಿ

2023ಕ್ಕೆ ಆರ್ಥಿಕ ಹಿಂಜರಿತ

ವಾಷಿಂಗ್ಟನ್ (ಎಎಫ್‌ಪಿ): ಕೇಂದ್ರೀಯ ಬ್ಯಾಂಕ್‌ಗಳು ಹಣದುಬ್ಬರ ತಗ್ಗಿಸಲು ಬಡ್ಡಿ ದರ ಹೆಚ್ಚಿಸುತ್ತಿರುವ ಕಾರಣ ಜಾಗತಿಕ ಆರ್ಥಿಕ ಹಿಂಜರಿತದ ಭೀತಿಯು ತೀವ್ರಗೊಳ್ಳುತ್ತಿದ್ದು, 2023ರಲ್ಲಿ ಜಾಗತಿಕ ಆರ್ಥಿಕ ಹಿಂಜರಿತ ಆರಂಭವಾಗಬಹುದು ಎಂದು ವಿಶ್ವ ಬ್ಯಾಂಕ್ ಎಚ್ಚರಿಕೆ ನೀಡಿದೆ.

ಬೆಲೆ ಏರಿಕೆಗೆ ಕಾರಣವಾಗುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರಗಳು ಪೂರೈಕೆಯನ್ನು ಹೆಚ್ಚಿಸಬೇಕು ಎಂದು ಅದು ಕರೆ ನೀಡಿದೆ.

ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ ಬೇಡಿಕೆ ಹೆಚ್ಚುತ್ತಿರು-ವುದು ಹಾಗೂ ಪೂರೈಕೆ ಸರಿಯಾಗಿ ಇಲ್ಲದಿರುವ ಕಾರಣ ಜಗತ್ತಿನ ಎಲ್ಲೆಡೆ ಹಣದುಬ್ಬರ ಪ್ರಮಾಣವು ವೇಗವಾಗಿ ಹೆಚ್ಚಾಗುತ್ತಿದೆ. ರಷ್ಯಾ ದೇಶವು ಉಕ್ರೇನ್ ಮೇಲೆ ನಡೆಸಿದ ಆಕ್ರಮಣ ಹಾಗೂ ಚೀನಾದಲ್ಲಿನ ಲಾಕ್‌ಡೌನ್‌ನ ನಂತರದಲ್ಲಿ ಹಣದುಬ್ಬರದ ಸಮಸ್ಯೆಯು ತೀವ್ರಗೊಂಡಿದೆ.

ಜಗತ್ತಿನ ಪ್ರಮುಖ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಹೆಚ್ಚಿಸಿವೆ. ಆದರೆ, ಹಣದುಬ್ಬರವನ್ನು ತಗ್ಗಿಸಲು ಈ ಕ್ರಮ ಸಾಕಾಗಲಿಕ್ಕಿಲ್ಲ ಎಂದು ವಿಶ್ವ ಬ್ಯಾಂಕ್‌ನ ಅರ್ಥಶಾಸ್ತ್ರಜ್ಞರು ಎಚ್ಚರಿಕೆ ನೀಡಿದ್ದಾರೆ.

ಆರ್ಥಿಕ ಹಿಂಜರಿತ ಎದುರಾಗದಂತೆ ನೋಡಿಕೊಳ್ಳಲು, ಬಿಗಿಯಾದ ಹಣಕಾಸಿನ ನೀತಿಗಳಿಂದ ತಪ್ಪಿಸಿಕೊಳ್ಳಲು ಹಲವು ದೇಶಗಳಿಗೆ ಆಗಲಿಕ್ಕಿಲ್ಲ. ಇದರಿಂದಾಗಿ ಹಣಕಾಸಿನ ಒತ್ತಡ ಜಾಸ್ತಿಯಾಗಬಹುದು. ಈ ರೀತಿ ಆದರಲ್ಲಿ 2023ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರವು ಶೇ 0.5ಕ್ಕೆ ಇಳಿಕೆ ಆಗಲಿದೆ.

10ನೇ ಪುಟ ನೋಡಿ

ಹಿಂಜರಿತ: ದನಿಗೂಡಿಸಿದ ಐಎಂಎಫ್



ವಾಷಿಂಗ್ಟನ್ (ರಾಯಿಟರ್ಸ್): 2023ರಲ್ಲಿ ಕೆಲವು ದೇಶಗಳು ಆರ್ಥಿಕ ಹಿಂಜರಿತಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹೇಳಿದೆ.

ಆದರೆ, ಈ ಹಿಂಜರಿತವು ಜಾಗತಿಕ ಮಟ್ಟದ್ದಾಗಿರ-ಲಿದೆಯೇ ಎಂಬುದನ್ನು ಈಗಲೇ ಹೇಳಲಾಗದು ಎಂದು ಐಎಂಎಫ್ ವಕ್ತಾರ ಗೆರ್ರಿ ರೈಸ್ ಹೇಳಿದ್ದಾರೆ.

ಕೆಲವು ದೇಶಗಳು ತಾಂತ್ರಿಕವಾಗಿ ಹಿಂಜರಿತಕ್ಕೆ ಸಿಲುಕದಿದ್ದರೂ, ಅದು ಹಿಂಜರಿತದ ರೀತಿಯಲ್ಲೇ ಅನುಭವಕ್ಕೆ ಬರಲಿದೆ ಎಂದು ಅವರು ಹೇಳಿದ್ದಾರೆ.

ಎಸ್‌ಸಿಒ ಶೃಂಗಸಭೆ ವೇಳೆ ಉಭಯ ನಾಯಕರ ಚರ್ಚೆ

'ಇದು ಯುದ್ಧದ ಕಾಲವಲ್ಲ'

ಸಮರ್ಕಂಡ್ (ಪಿಟಿಐ/ಎಎಫ್‌ಪಿ): 'ಇದು ಯುದ್ಧದ ಕಾಲವಲ್ಲ. ಸಂಘರ್ಷವನ್ನು ಕೊನೆಗೊಳಿಸಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಶುಕ್ರವಾರ ಹೇಳಿದರು.

ಉಜ್ಬೇಕಿಸ್ತಾನದ ಸಮರ್ಕಂಡ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆ ಹಿನ್ನೆಲೆಯಲ್ಲಿ ಉಭಯ ನಾಯಕರ ನಡುವೆ ನಡೆದ ಮಾತುಕತೆ ಸಂದರ್ಭದಲ್ಲಿ ಉಕ್ರೇನ್–ರಷ್ಯಾ ಸಂಘರ್ಷ ಪ್ರಸ್ತಾಪಿಸಿ, ಮೋದಿ ಈ ಮಾತುಗಳನ್ನಾಡಿದರು.

'ಉಭಯ ದೇಶಗಳ ನಡುವಿನ ಸಂಘರ್ಷವನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗಗಳ ಮೂಲಕ ಬಗೆಹರಿಸಿಕೊಳ್ಳುವುದು ಸೂಕ್ತ. ಈ ಹಿಂದೆ ಹಲವಾರು ಬಾರಿ ದೂರವಾಣಿ ಮೂಲಕ ನಿಮ್ಮ ಜೊತೆ ಮಾತನಾಡಿದ ಸಂದರ್ಭದಲ್ಲಿ ಈ ಕುರಿತು ಚರ್ಚಿಸಿದ್ದೇವೆ ' ಎಂದು ಮೋದಿ ಹೇಳಿದರು.



ಉಜ್ಬೇಕಿಸ್ತಾನದ ಸಮರ್ಕಂಡ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶುಕ್ರವಾರ ಪರಸ್ಪರ ಕೈಕುಲುಕಿದರು –ಎಎಫ್‌ಪಿ ಚಿತ್ರ

ಮೋದಿ ಅವರ ಮಾತಿಗೆ ಪ್ರತಿಕ್ರಿ-ಯಿಸಿದ ಪುಟಿನ್, 'ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿದ ಭಾರತದ ನಿಲುವು ಮತ್ತು ಕಳವಳ ನನಗೆ ಅರ್ಥವಾಗುತ್ತದೆ. ಶೀಘ್ರ ಸಂಘರ್ಷ ಕೊನೆಗೊಳಿಸಲು ಪ್ರಯತ್ನ ಮಾಡುತ್ತೇನೆ' ಎಂದರು.

ಮೋದಿ– ಷಿ ಮುಖಾಮುಖಿ: ಪೂರ್ವ ಲಡಾಖ್‌ನಲ್ಲಿ ಉಭಯ ದೇಶಗಳ ನಡುವೆ ಗಡಿಗೆ ಸಂಬಂಧಿಸಿದ ಬಿಕ್ಕಟ್ಟು ಪ್ರಾರಂಭವಾದ ಎರಡು ವರ್ಷಗಳ ನಂತರ, ಇದೇ ಮೊದಲ ಬಾರಿಗೆ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಈ ಶೃಂಗಸಭೆಯಲ್ಲಿ ವೇದಿಕೆ ಹಂಚಿಕೊಂಡರು. ಆದರೆ, ಉಭಯ ನಾಯಕರ ನಡುವೆ ಮಾತುಕತೆ ನಡೆಯಲಿಲ್ಲ.

ಇನ್ನೊಂದು ಸುದ್ದಿ 5

'ಟೋಯಿಂಗ್ ಅಗತ್ಯ: ಪರಿಶೀಲನೆ'

ಬೆಂಗಳೂರು: 'ನಗರದ ನೋ ಪಾರ್ಕಿಂಗ್ ಜಾಗ ಹಾಗೂ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುವ ವಾಹನಗಳ ಟೋಯಿಂಗ್ ಪುನಃ ಆರಂಭಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು. 2

ವಿಶ್ವ ಯೂತ್ ಚೆಸ್: ಕರ್ನಾಟಕದ ಪ್ರಣವ್‌ಗೆ ಚಿನ್ನ



ಬೆಂಗಳೂರು: ಕರ್ನಾಟಕದ ಪ್ರಣವ್ ಆನಂದ್ ಅವರು ರೊಮೇನಿಯದಲ್ಲಿ ಶುಕ್ರವಾರ ಕೊನೆಗೊಂಡ 16 ವರ್ಷದೊಳಗಿನ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡರು. 12

ಚಿನಕುರಳಿ

ಪ್ರಕಾಶ್ ಶೆಟ್ಟಿ



2012–15ರ ಅವಧಿಯ ನೇಮಕಾತಿ ಅಕ್ರಮ

ಸಿಐಡಿ ಭಯ: ಸಹ ಶಿಕ್ಷಕರು ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲೆಗಳ ಗ್ರೇಡ್‌–2 ಸಹ ಶಿಕ್ಷಕರ ನೇಮಕಾತಿ ಅಕ್ರಮ ಸಂಬಂಧ ಎಫ್‌ಐಆರ್ ದಾಖಲಾಗು-ತ್ತಿದ್ದಂತೆ, ರಾಜ್ಯದ ಹಲವು ಜಿಲ್ಲೆಗಳ ಕೆಲ ಸಹ ಶಿಕ್ಷಕರು ರಜೆ ಪಡೆದು ನಾಪತ್ತೆಯಾಗಿದ್ದಾರೆ. ಈ ಬಗ್ಗೆ ಮಾಹಿತಿ ಕಲೆಹಾಕಿರುವ ಸಿಐಡಿ ಅಧಿಕಾರಿಗಳು, ಶಿಕ್ಷಕರ ಪತ್ತೆಗಾಗಿ ತನಿಖೆ ಮುಂದುವರಿ-ಸಿದ್ದಾರೆ.

2012–13 ಹಾಗೂ 2014–15ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ (ಪ್ರೌಢ) ಅವರು ವಿಧಾನಸೌಧ ಠಾಣೆಗೆ ಇತ್ತೀಚೆಗಷ್ಟೆ ಪ್ರತ್ಯೇಕ ದೂರು ನೀಡಿದ್ದರು. ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ, 12 ಸಹ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗ ಸಹ ನಿರ್ದೇಶಕ ಕಚೇರಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಕೆ.ಎಸ್. ಪ್ರಸಾದ್ ಅವರನ್ನು ಈಗಾಗಲೇ ಬಂಧಿಸಿದೆ.

'ತುಮಕೂರು, ಕೋಲಾರ ಹಾಗೂ ವಿಜಯಪುರ ಜಿಲ್ಲೆಯ ನೇಮಕಾತಿಯಲ್ಲಿ ಅಕ್ರಮ ನಡೆದಿ-ರುವುದಕ್ಕೆ ದಾಖಲೆಗಳು ಸಿಕ್ಕಿವೆ. ಇನ್ನುಳಿದ ಜಿಲ್ಲೆಗಳ ನೇಮಕಾತಿಯಲ್ಲೂ ಅಕ್ರಮ ನಡೆದಿರುವ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

4ನೇ ಪುಟ ನೋಡಿ

45 ದಿನದಲ್ಲಿ ಹಣ ಕಳೆದುಕೊಂಡ 62 ಗ್ರಾಹಕರು, 8 ಜಿಲ್ಲೆಗಳಲ್ಲಿ ವಂಚನೆ ಬೆಳಕಿಗೆ

ವಿದ್ಯುತ್ ಗ್ರಾಹಕರೇ ಸೈಬರ್ ವಂಚಕರ ಗುರಿ

• ಆದಿತ್ಯ ಕೆ.ಎ.

ಬೆಂಗಳೂರು: ಬೆಸ್ಕಾಂ ಸಿಬ್ಬಂದಿ ಸೋಗಿನಲ್ಲಿ ವಿದ್ಯುತ್ ಗ್ರಾಹಕರಿಗೆ ಸೈಬರ್ ಕಳ್ಳರು ವಂಚಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, 45 ದಿನಗಳಲ್ಲಿ ಎಂಟು ಜಿಲ್ಲೆಗಳ 62 ಮಂದಿ ಗ್ರಾಹಕರು ಮೋಸಕ್ಕೆ ಒಳಗಾಗಿದ್ದಾರೆ.

ಸೈಬರ್ ವಂಚಕರ ಹಾವಳಿಯಿಂದ ಬೆಸ್ಕಾಂ ಗ್ರಾಹಕರು ಸಾವಿರಾರು ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ.

ಬೆಂಗಳೂರು ನಗರ–ಗ್ರಾಮಾಂತರ, ಕೋಲಾರ, ಚಿಕ್ಕಬ-ಳ್ಳಾಪುರ, ರಾಮನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ ವ್ಯಾಪ್ತಿಯನ್ನು ಬೆಸ್ಕಾಂ ಒಳಗೊಂಡಿದೆ. ಈ ಜಿಲ್ಲೆಗಳ ಗ್ರಾಹಕರಿಗೆ ಉತ್ತರ ಪ್ರದೇಶ, ಪಶ್ಚಿಮ ಬಂಗಾಳದಿಂದ ಅಪರಿಚಿತರಿಂದ ಕರೆಗಳು ಬರುತ್ತಿವೆ. ಅದನ್ನೇ ನಂಬಿ ದಾಖಲೆ ನೀಡುವ ಗ್ರಾಹಕರು ಕ್ಷಣಾರ್ಧ-ದಲ್ಲಿ ಹಣ ಕಳೆದುಕೊಳ್ಳುತ್ತಿದ್ದಾರೆ.

ಜೂನ್, ಜುಲೈನಲ್ಲಿ 16 ಮಂದಿ ವಂಚನೆಗೆ ಒಳಗಾಗಿದ್ದರು. ಆಗಸ್ಟ್‌ನಲ್ಲಿ 53 ಹಾಗೂ ಸೆಪ್ಟೆಂಬರ್ 15ರ ವರೆಗೆ 9 ಮಂದಿ ಸೈಬರ್ ವಂಚಕರ ಬಲೆಗೆ ಬಿದ್ದು, ಹಣ ಕಳೆದುಕೊಂಡಿ-ದ್ದಾರೆ.

'ವಿದ್ಯುತ್ ಬಿಲ್ ಪಾವತಿ ಆಗಿಲ್ಲ. ತಕ್ಷಣ ಬಿಲ್ ಪಾವ-ತಿಸದಿದ್ದರೆ ವಿದ್ಯುತ್ ಸಂಪರ್ಕ ಕಡಿತ ಮಾಡುತ್ತೇವೆ...' ಎಂದು ಕರೆ ಅಥವಾ ಎಸ್‌ಎಂಎಸ್ ಮಾಡಿ, ಗ್ರಾಹಕರಿಂದ ತಮ್ಮ ಖಾತೆಗೆ ಹಣವನ್ನು ವರ್ಗಾಯಿಸಿಕೊಳ್ಳುತ್ತಿದ್ದಾರೆ ಸೈಬರ್ ವಂಚಕರು.

'ಆನ್‌ಲೈನ್ ವಂಚಕರ ಜಾಲವು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಸೈಬರ್ ಠಾಣೆಗೆ ದೂರು ನೀಡಿದ್ದರೂ ಪೊಲೀಸರು ಕರೆಯ ಮೂಲ ಪತ್ತೆ ಹಚ್ಚಿದ್ದಾರೆ. ಆರೋಪಿಗಳ ಪತ್ತೆ ಸಾಧ್ಯವಾಗಿಲ್ಲ. ಇದರಿಂದ ಬೆಸ್ಕಾಂ ಬಿಲ್ ಪಾವತಿ ಸಹ ವಿಳಂಬ-ವಾಗುತ್ತಿದೆ' ಎಂದು ಬೆಸ್ಕಾಂ ಗ್ರಾಹಕ ಸೇವಾ ವಿಭಾಗದ ಅಧಿಕಾರಿಗಳು ಹೇಳುತ್ತಾರೆ.

'ಬೆಸ್ಕಾಂನಿಂದ ಬಿಲ್ ಪಾವತಿ ಸಂಬಂಧ ಕರೆಯಾಗಲಿ, ಎಸ್‌ಎಂಎಸ್ ಆಗಲಿ ಮಾಡುವುದಿಲ್ಲ. ಆದರೆ, ವಂಚಕರು ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಮಾತುಕತೆ ನಡೆಸಿ ಆನ್‌ಲೈನ್‌ನಲ್ಲಿ ಬಿಲ್ ಪಾವತಿಸುವಂತೆ ನಂಬಿಸುತ್ತಿದ್ದಾರೆ. ಲಿಂಕ್ ಕಳುಹಿಸಿ ಹಣ ವರ್ಗಾವಣೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಬೆಸ್ಕಾಂನ ಗ್ರಾಹಕ ವ್ಯವಹಾರಗಳ ಪ್ರಧಾನ ವ್ಯವಸ್ಥಾಪಕ ಎಸ್.ಆರ್. ನಾಗರಾಜ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಸ್ಕಾಂನ ಪಾವತಿ ಕೇಂದ್ರಗಳ ಮೂಲಕವೇ ಗ್ರಾಹಕರು ಹಣ ಪಾವತಿಸಬೇಕು. ಬೆಸ್ಕಾಂ ಸಿಬ್ಬಂದಿಯ ಮಾಹಿತಿ ಆಧರಿಸಿ ದೂರು ದಾಖಲು ಮಾಡಿಕೊಳ್ಳಲಾಗಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಪೊಲೀಸರಿಗೆ ಮಾಹಿತಿ ನೀಡಲಾಗಿದೆ' ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಿಶೇಷ

'ಸಹಾಯವಾಣಿ'ಗೆ ಕರೆ ಮಾಡಿ ಕಣ್ಣೀರು

'ಹಣ ಕಳೆದುಕೊಂಡವರು ನಿತ್ಯ ಸಹಾಯವಾಣಿಗೆ ಕರೆ ಮಾಡಿ ಕಣ್ಣೀರು ಹಾಕುತ್ತಿದ್ದಾರೆ. ಸಹಾಯ ಕೋರಿ ಇತ್ತೀಚೆಗೆ ಕರೆ ಮಾಡುವ ಗ್ರಾಹಕರ ಸಂಖ್ಯೆ ಹೆಚ್ಚಾಗಿದೆ. ಹೆಚ್ಚು ಮೊತ್ತದ ಬಿಲ್ ಪಾವತಿದಾರರನ್ನೇ ವಂಚಕರು ಗುರಿಯಾಗಿಸಿ ಹಣ ಲಪಟಾಯಿಸುತ್ತಿದ್ದಾರೆ' ಎಂದು ಸಹಾಯವಾಣಿ ಸಿಬ್ಬಂದಿ ಹೇಳಿದರು.

> **ವಿದ್ಯುತ್ ಸಂಪರ್ಕ ಕಡಿತವಾಗುವ ಭಯದಿಂದ ತಿಳಿದವರೇ ವಂಚನೆಯ ಜಾಲಕ್ಕೆ ಬೀಳುತ್ತಿದ್ದಾರೆ**
> **ಎಸ್.ಆರ್.ನಾಗರಾಜ**
> ಪ್ರಧಾನ ವ್ಯವಸ್ಥಾಪಕ, ಗ್ರಾಹಕ ವ್ಯವಹಾರ ವಿಭಾಗ, ಬೆಸ್ಕಾಂ

> **ವಂಚನೆ ತಡೆಗಟ್ಟುವಂತೆ ಎಲ್ಲ ಸಿಬ್ಬಂದಿ, ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಪರಿಚಿತರು ಕರೆ ಮಾಡಿದರೆ ಕೂಡಲೇ ಮಾಹಿತಿ ನೀಡಬೇಕು**
> **ಮಹಾಂತೇಶ ಬೀಳಗಿ**
> ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

‘ಟೋಯಿಂಗ್ ಅಗತ್ಯ: ಪರಿಶೀಲನೆ’

ಬೆಂಗಳೂರು: ‘ನಗರದ ನೋ ಪಾರ್ಕಿಂಗ್ ಜಾಗ ಹಾಗೂ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುವ ವಾಹನಗಳ ಟೋಯಿಂಗ್ ಪುನಃ ಆರಂಭಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಟೋಯಿಂಗ್ ಬಗ್ಗೆ ಪರಿಶೀಲನೆಗೆ ಹೈಕೋರ್ಟ್ ಕಾಲಾವಕಾಶ ನೀಡಿದೆ. ಈ ಬಗ್ಗೆ ಇಲಾಖೆ ಸದ್ಯದಲ್ಲೇ ತೀರ್ಮಾನಿಸಲಿದೆ’ ಎಂದರು.

‘ನಗರದಲ್ಲಿ ರಸ್ತೆ ಸಂಚಾರಕ್ಕೆ ಅಡ್ಡವಾಗಿ ನಿಲ್ಲಿಸುವ ವಾಹನಗಳನ್ನು ಟೋಯಿಂಗ್ ಮಾಡಬೇಕಾದ ಅವಶ್ಯಕತೆಯಿದೆ. ಆದರೆ, ಟೋಯಿಂಗ್ ನಿಯಮದಲ್ಲಿ ಕೆಲ ಲೋಪದೋಷ ಇರುವ ದೂರುಗಳು ಕೇಳಿಬಂದಿವೆ. ಯಾವ ಸ್ಥಳದಲ್ಲಿ ಹಾಗೂ ಯಾವ ರೀತಿ ಟೋಯಿಂಗ್ ಮಾಡಬೇಕು ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಹೇಳಿದರು.

ಭಯೋತ್ಪಾದಕರ ಏಕ ಪಟ್ಟಿಗೆ ನಿರ್ಧಾರ

ಸಮರ್ಕಂಡ್ (ಪಿಟಿಐ): ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸದಸ್ಯ ರಾಷ್ಟ್ರಗಳಲ್ಲಿ ನಿಷೇಧಿಸಲ್ಪಟ್ಟ ಭಯೋತ್ಪಾದಕರು, ಪ್ರತ್ಯೇಕತಾವಾದಿಗಳು ಮತ್ತು ಉಗ್ರವಾದಿ ಗುಂಪುಗಳ ಏಕ ಪಟ್ಟಿಯನ್ನು ಸಿದ್ಧಪಡಿಸಲು ಶುಕ್ರವಾರ ನಡೆದ ಶೃಂಗಸಭೆಯಲ್ಲಿ ನಿರ್ಧರಿಸಲಾಗಿದೆ. ನಿಷೇಧಿತ ಸಂಘಟನೆಗಳಿಂದ ಬರುವ ಬೆದರಿಕೆಗಳಿಗೆ ತಿರುಗೇಟು ನೀಡುವ ಉದ್ದೇಶದಿಂದ ಈ ಪಟ್ಟಿ ಸಿದ್ಧಪಡಿಸಲು ಯೋಜಿಸಲಾಗಿದೆ. ಈ ಸಂಬಂಧ ಶೃಂಗಸಭೆಯ ಅಂತ್ಯದಲ್ಲಿ ಜಂಟಿ ಹೇಳಿಕೆ ಬಿಡುಗಡೆ ಮಾಡಲಾಗಿದೆ.

ಮಲ್ಲೇಶ್ವರ: ಬಿಬಿಎಂಪಿ, ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಸಹಯೋಗ

ಸಿಯುಪಿಎಚ್‌ಸಿ: ಇಂದಿನಿಂದ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮತ್ತು ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಮಲ್ಲೇಶ್ವರದ ಪ್ಯಾಲೆಸ್ ಗುಟ್ಟಹಳ್ಳಿಯಲ್ಲಿ ನಿರ್ಮಾಣಗೊಂಡಿರುವ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ (ಸಿಯುಪಿಎಚ್‌ಸಿ) ಶನಿವಾರದಿಂದ ವೈದ್ಯಕೀಯ ಸೇವೆಗಳು ಪ್ರಾರಂಭವಾಗಲಿವೆ.

ಪ್ರಧಾನಿ ನರೇಂದ್ರ ಮೋದಿಯವರ 72ನೇ ಜನ್ಮದಿನದ ಪ್ರಯುಕ್ತ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಹಾಗೂ ಕ್ಷೇತ್ರದ ಶಾಸಕರೂ ಆಗಿರುವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಶುಕ್ರವಾರ ಈ ಕೇಂದ್ರವನ್ನು ಪರಿಶೀಲಿಸಿ, ವೈಶಿಷ್ಟ್ಯಗಳ ಬಗ್ಗೆ ವಿವರಿಸಿದರು.



ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಡಾ.ಸಿ.ಎನ್. ಅಶ್ವತ್ಥನಾರಾಯಣ ಪರಿಶೀಲಿಸಿದರು. ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ. ತ್ರಿಲೋಕ ಚಂದ್ರ ಇದ್ದಾರೆ – ಪ್ರಜಾವಾಣಿ ಚಿತ್ರ

‘ಈ ಕೇಂದ್ರ ನಿರ್ಮಾಣಕ್ಕೆ ಸಾರ್ವಜನಿಕರು ಕೂಡ ದೇಣಿಗೆ ನೀಡಿದ್ದಾರೆ. ಇಲ್ಲಿ ಪ್ರಯೋಗಾಲಯ, ಡಿಜಿಟಲ್ ಎಕ್ಸ್‌ರೇ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಪಿಎಫ್‌ಟಿ ಮತ್ತು ಇಸಿಜಿ ಸೌಲಭ್ಯಗಳು ದೊರೆಯುತ್ತವೆ. ಯಾವ ಖಾಸಗಿ ಆಸ್ಪತ್ರೆಗೂ ಕಡಿಮೆ ಇಲ್ಲದಂತಹ ಕಣ್ಣಿನ ಪರೀಕ್ಷೆ, ದಂತ ಪರೀಕ್ಷೆ, ತುರ್ತು ಚಿಕಿತ್ಸಾ ಘಟಕ, ಫಿಸಿಯೋಥೆರಪಿ, ಪ್ರಧಾನಮಂತ್ರಿಗಳ ಜನೌಷಧ ಕೇಂದ್ರ ಎಲ್ಲವೂ ಇಲ್ಲಿ ಲಭ್ಯವಿರಲಿದೆ. ಕೇಂದ್ರದಲ್ಲಿ ಒಳರೋಗಿಗಳ ವಿಭಾಗ ಹಾಗೂ ಇಎಂಆರ್ (ಎಲೆಕ್ಟ್ರಾನಿಕ್ ಮೆಡಿಕಲ್ ರೆಕಾರ್ಡ್) ವ್ಯವಸ್ಥೆಯೂ ಇದೆ’ ಎಂದು ಹೇಳಿದರು.

‘ಈ ಕೇಂದ್ರದಲ್ಲಿ ಒಂದು ದಿನಕ್ಕೆ ಗರಿಷ್ಠ 150 ಜನರಿಗೆ ಚಿಕಿತ್ಸೆ ಕೊಡಬಹುದು. ಇಲ್ಲಿ ಲಭ್ಯವಿಲ್ಲದ ಚಿಕಿತ್ಸೆಗಳನ್ನು ಮಣಿಪಾಲ್ ಸಮೂಹದ ಆಸ್ಪತ್ರೆಗಳ ಮೂಲಕ ಸರ್ಕಾರಿ ದರದಲ್ಲಿ ಕೊಡಲಾಗುವುದು. ಈ ಸಂಬಂಧ ಒಡಂಬಡಿಕೆ ಮಾಡಿಕೊಳ್ಳಲಾಗಿದೆ’ ಎಂದು ತಿಳಿಸಿದರು.

‘ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಲ್ಲೇಶ್ವರ ಕ್ಷೇತ್ರದ ನಾಗಪ್ಪ ಬ್ಲಾಕ್, ಗಾಂಧಿ ಗ್ರಾಮ, ಯಶವಂತಪುರ ಮತ್ತು ಮತ್ತೀಕೆರೆಯಲ್ಲಿಯೂ ನವೀಕರಿಸಲಾಗಿದೆ. ಇವು ಒಂದು ತಿಂಗಳಲ್ಲಿ ಕಾರ್ಯಾರಂಭ ಮಾಡಲಿವೆ. ಈ ಕೇಂದ್ರಗಳಿಗೆ ನಗರೋತ್ಥಾನ ಯೋಜನೆಯಡಿ ತಲಾ ₹ 1.50 ಕೋಟಿ ಕೊಡಲಾಗುತ್ತಿದೆ. ಉಳಿದ ಎರಡು ವಾರ್ಡುಗಳಲ್ಲೂ ಇಂತಹ ಸಿಯುಪಿಎಚ್‌ಸಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ’ എಂದು ವಿವರಿಸಿದರು.

ಡೆಂಗಿ: ಒಂದೂವರೆ ತಿಂಗಳಲ್ಲಿ 325 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿರಂತರ ಸುರಿದ ಮಳೆಯಿಂದಾಗಿ ಡೆಂಗಿ ಪ್ರಕರಣಗಳು ಹೆಚ್ಚಳವಾಗಿದ್ದು, ಒಂದೂವರೆ ತಿಂಗಳಲ್ಲಿ 325 ಮಂದಿಗೆ ಡೆಂಗಿ ಜ್ವರ ಬಾಧಿಸಿದೆ.

ಮೊದಲ ಆರು ತಿಂಗಳು ಡೆಂಗಿ ನಿಯಂತ್ರಣದಲ್ಲಿತ್ತು. ಆ ವೇಳೆ ಜ್ವರಕ್ಕೆ ಒಳಪಟ್ಟವರ ಸಂಖ್ಯೆ 350ರ ಗಡಿಯ ಆಸುಪಾಸಿನಲ್ಲಿತ್ತು. ಬಿಸಿಲು–ಮಳೆಯಿಂದಾಗಿ ಪ್ರಕರಣಗಳ ಸಂಖ್ಯೆ ದಿಢೀರ್ ಹೆಚ್ಚಳವಾಗಿದೆ. ಈವರೆಗೆ ನಗರದಲ್ಲಿ ವರದಿಯಾದ ಡೆಂಗಿ ಪ್ರಕರಣಗಳ ಒಟ್ಟು ಸಂಖ್ಯೆ 1,161ಕ್ಕೆ ತಲುಪಿದೆ.



ನಗರದಲ್ಲಿ ಈವರೆಗೆ 44,166 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದೆ. ಅವರಲ್ಲಿ 5,581 ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಡೆಂಗಿ ಜ್ವರಕ್ಕೆ ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 903 ಮಂದಿಯಲ್ಲಿ ಚಿಕೂನ್‌ಗುನ್ಯ ಜ್ವರದ ಶಂಕೆ ವ್ಯಕ್ತವಾಗಿದೆ. ಅವರಲ್ಲಿ 22 ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 10 ಮಂದಿಯಲ್ಲಿ ಚಿಕೂನ್‌ಗುನ್ಯ ಜ್ವರ ದೃಢಪಟ್ಟಿದೆ.

‘ಎಡಬಿಡದೆ ಸುರಿದ ಮಳೆಯಿಂದಾಗಿ ಡೆಂಗಿ ಪ್ರಕರಣಗಳು ಕಳೆದೊಂದು ತಿಂಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿವೆ. ಕೆಲವೆಡೆ ಮಳೆ ನೀರು ಹಾಗೇ ನಿಂತಿದ್ದರಿಂದ ಸೊಳ್ಳೆಗಳ ಉತ್ಪತ್ತಿಗೆ ಅವಕಾಶವಾಯಿತು. ಈಡಿಸ್ ಎಂಬ ಸೊಳ್ಳೆ ಕಡಿತದಿಂದ ಬರುವ ಡೆಂಗಿ ಜ್ವರ, ಒಬ್ಬರಿಂದ ಮತ್ತೊಬ್ಬರಿಗೆ ಬಹು ಬೇಗ ಹರಡುತ್ತದೆ. ಹಗಲು ಹೊತ್ತಿನಲ್ಲಿ ಕಚ್ಚುವ ಈ ಸೊಳ್ಳೆ, ಸಂಗ್ರಹಿಸಿಟ್ಟ ನೀರಿನಲ್ಲಿ ಮೊಟ್ಟೆಯಿಟ್ಟು, ಸಂತಾನೋತ್ಪತ್ತಿ ಮಾಡುತ್ತದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ನೀರಿನ ತೊಟ್ಟಿಗಳು, ಟ್ಯಾಂಕ್‌ಗಳು ಮತ್ತು ಬ್ಯಾರಲ್‌ಗಳನ್ನು ಕನಿಷ್ಠ ಒಂದು ವಾರಗಳಿಗೊಮ್ಮೆ ಸ್ವಚ್ಛಗೊಳಿಸಿ, ಮುಚ್ಚಿಡಬೇಕು. ಮಳೆ ನೀರು ಸಂಗ್ರಹವಾಗುವ ವಾಹನಗಳ ಚಕ್ರಗಳು, ತೆಂಗಿನ ಚಿಪ್ಪುಗಳನ್ನು ವಿಲೇವಾರಿ ಮಾಡಬೇಕು. ಹವಾನಿಯಂತ್ರಿತ ಯಂತ್ರಗಳು, ಹೂವಿನಕುಂಡಗಳಲ್ಲಿ ಪ್ರತಿ ವಾರ ನೀರನ್ನು ಖಾಲಿ ಮಾಡಬೇಕು’ ಎಂದು ಹೇಳಿದರು.

ಪೊಲೀಸ್ ಸಾಹಿತ್ಯ ಸಂಭ್ರಮ 18ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ರಚಿಸಿರುವ ಸಾಹಿತ್ಯವನ್ನು ಜನರ ಎದುರು ತೆರೆದಿಡುವ ಉದ್ದೇಶದಿಂದ ಇದೇ 18ರಂದು ‘ಪೊಲೀಸ್ ಸಾಹಿತ್ಯ ಸಂಭ್ರಮ–2022’ ಕಾರ್ಯಕ್ರಮ ಆಯೋಜಿಸಲಾಗಿದೆ.

ನಗರದ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ನಡೆಯಲಿರುವ ಕಾರ್ಯಕ್ರಮವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಉದ್ಘಾಟಿಸಲಿದ್ದಾರೆ. ಸಾಹಿತಿ ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಕಮಿಷನರ್ ಪ್ರತಾಪ್ ರೆಡ್ಡಿ ಹಾಜರಿರಲಿದ್ದಾರೆ.

‘ಪೊಲೀಸ್ ಸಾಹಿತ್ಯ–ಒಂದು ಹಿನ್ನೋಟ’, ‘ಪೊಲೀಸ್ ಮಹಿಳೆಯರು ಮತ್ತು ಸಾಹಿತ್ಯ’ ಹಾಗೂ ‘ಪೊಲೀಸ್ ರಸ ಪ್ರಸಂಗ’ ವಿಷಯಗಳಡಿ ಗೋಷ್ಠಿಗಳು ನಡೆಯಲಿವೆ. ಕವಿಗೋಷ್ಠಿ ಸಹ ನಡೆಯಲಿದೆ.

ಅತ್ಯಾಚಾರ: ಪೋಕ್ಸೊ ಪ್ರಕರಣ ದಾಖಲು

ಮದ್ದೂರು: 14 ವರ್ಷದ, ಹೈಸ್ಕೂಲ್ ವಿದ್ಯಾರ್ಥಿನಿ ಮೇಲೆ ನಾಲ್ಕೈದು ತಿಂಗಳಿಂದ ನಿರಂತರವಾಗಿ ದೈಹಿಕ ಸಂಪರ್ಕ ಹೊಂದಿದ್ದ ಆರೋಪದಲ್ಲಿ ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

ಸಂತ್ರಸ್ತೆಯ ತಾಯಿ ದೂರು ನೀಡಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಿಧನ ವಾರ್ತೆ

ಕೆ. ಸತ್ಯನಾರಾಯಣ



ಬೆಂಗಳೂರು: ಪತ್ರಕರ್ತ ಕೆ. ಸತ್ಯನಾರಾಯಣ (73) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಸತ್ಯನಾರಾಯಣ ಅವರು ಸಂಯುಕ್ತ ಕರ್ನಾಟಕ ಹಾಗೂ ಕನ್ನಡ ಪ್ರಭ ದಿನಪತ್ರಿಕೆಗಳಲ್ಲಿ ಸಹಾಯಕ ಸಂಪಾದಕರಾಗಿದ್ದರು. ವಿಜಯ ಕರ್ನಾಟಕ ಹಾಗೂ ಸುವರ್ಣ ಟೈಮ್ಸ್ ಆಫ್ ಕರ್ನಾಟಕ ದಿನಪತ್ರಿಕೆಗಳಲ್ಲೂ ಕೆಲಸ ಮಾಡಿದ್ದರು.

‘ಆಸ್ಟ್ರೇಲಿಯಾದಲ್ಲಿರುವ ಪುತ್ರಿ, ಬೆಂಗಳೂರಿಗೆ ಬರುತ್ತಿದ್ದಾರೆ. ಬನಶಂಕರಿಯ ಚಿತಾಗಾರದಲ್ಲಿ ಭಾನುವಾರ ಬೆಳಿಗ್ಗೆ 10 ಗಂಟೆಗೆ ಸತ್ಯನಾರಾಯಣ ಅವರ ಅಂತ್ಯಸಂಸ್ಕಾರ ನಡೆಸಲಾಗುವುದು’ ಎಂದು ಕುಟುಂಬದವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮೆಗಾ ಬ್ಲಡ್ ಡೊನೇಷನ್ ಡ್ರೈವ್: ಆಯೋಜನೆ: ಅಖಿಲ ಭಾರತೀಯ ತೇರಾಪಂಥ ಯುವಕ ಪರಿಷತ್, ಸ್ಥಳ: ಗಾಂಧಿನಗರ, ವಿಜಯನಗರ, ಎಚ್‌ಬಿಎಸ್‌ಟಿ, ರಾಜಾಜಿನಗರ, ಟಿ.ದಾಸರಹಳ್ಳಿ, ಆರ್.ಆರ್. ನಗರ, ಯಶವಂತಪುರ, ಬೆಳಿಗ್ಗೆ 9

ರಕ್ತದಾನ ಅಮೃತ ಮಹೋತ್ಸವ, ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ ಅಭಿಯಾನ: ಅತಿಥಿಗಳು: ಡಾ.ಕೆ. ಸುಧಾಕರ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಳಿಗ್ಗೆ 10

ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್‌ನ ವಾರ್ಷಿಕ ದಿನ: ಅತಿಥಿಗಳು: ಸಿ. ಬಸವರಾಜು, ಸುದೇಶ.ವಿ., ಅಧ್ಯಕ್ಷತೆ: ಪಿ.ಎಸ್. ನಂದಕುಮಾರ್, ಆಯೋಜನೆ: ಆರ್.ವಿ. ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಜಯನಗರ, ಬೆಳಿಗ್ಗೆ 10.30

ಲಯ ವೈಭವಂ: ನಿರ್ದೇಶನ: ಬೆಂಗಳೂರು ಎಸ್.ವಿ. ಬಾಲಕೃಷ್ಣ, ಸಹಕಾರ: ವಿನಯ್ ನಾಗಾರ್ಜುನ ಎಂ., ಮೃದಂಗ: ಪ್ರಣವ್. ಎಸ್. ಬಾಲಕೃಷ್ಣ, ಖಂಜೀರಾ: ಶ್ರೀಧರ್ ಶಿವಶಂಕರ್, ಮೋರ್ಸಿಂಗ್: ಲಿಖಿತ್.ಕೆ.ಎಂ., ತಬಲಾ: ಸ್ಕಂದಾ ಮಂಜುನಾಥ್, ಡ್ರಮ್ಸ್: ಅರ್ಣವ್ ವಿಕ್ರಾಂತ್, ಮೃದಂಗ: ಅನಂತ್. ಎಂ. ಅತ್ರೇಯ, ಸಂಗೀತ ಕಛೇರಿ: ಗಾಯನ: ಅಶ್ವಿನಿ ಭೀಡೆ ದೇಶಪಾಂಡೆ, ತಬಲಾ: ರವೀಂದ್ರ ಯಾವಗಲ್, ಪಿಟೀಲು: ವ್ಯಾಸ ಮೂರ್ತಿ ಕಟ್ಟಿ, ಆಯೋಜನೆ: ಎಮ್, ಸಪ್ತಕ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವಯ್ಯಾಲಿ ಕಾವಲ್, ಸಂಜೆ 6.30



ಅಶ್ವಿನಿ ಭೀಡೆ

ಸ್ಟಾರ್ಟ್‌ಅಪ್ ಸಾಹಿತ್ಯ ಉತ್ಸವ ಮತ್ತು ಬಿಬಿಎಲ್‌ಎಫ್ ಸಿ.ಕೆ. ಪ್ರಹ್ಲಾದ್ ಬೆಸ್ಟ್ ಬ್ಯುಸಿನೆಸ್ ಬುಕ್ ಅವಾರ್ಡ್: ಆಯೋಜನೆ: ಮ್ಯಾನೇಜ್‌ಮೆಂಟ್ ನೆಕ್ಸ್ಟ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ಬೆಳಿಗ್ಗೆ 10.30

ನಂದಿದುರ್ಗ ಬಾಲುಗೌಡ ಅವರ ‘ಎಲ್ಲರಂತಲ್ಲ ನಮ್ಮೆಲ್ಲರ ಹಿರಿಯಣ್ಣ ಈ ನಮ್ಮ ವಿ. ಸೋಮಣ್ಣ ನಾ ಕಂಡಂತೆ’ ಪುಸ್ತಕ ಬಿಡುಗಡೆ: ಉದ್ಘಾಟನೆ: ವಿ. ಸೋಮಣ್ಣ, ಅಧ್ಯಕ್ಷತೆ: ಬಿ.ಎನ್. ಬಚ್ಚೇಗೌಡ, ಅತಿಥಿಗಳು: ಕೆ. ಗೋಪಾಲಯ್ಯ, ಆಯೋಜನೆ: ಯುವಚೇತನ ಯುವಜನ ಕೇಂದ್ರ, ಸ್ಥಳ: ಎನ್.ಜಿ.ಒ., ಹಾಲ್ (ನೌಕರರ ಭವನ), ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಉತ್ಸವ ಯಾತ್ರೆ–2022: ಆವಾಹನ್: ಮಧ್ಯಾಹ್ನ 2ಕ್ಕೆ, ಸಿತಾರ್: ಸುಬ್ರತಾ. ದೇ., ತಬಲಾ: ರವೀಂದ್ರ ಯಾವಗಲ್, ಆವೇಶಿಕಾ ಒಡಿಸ್ಸಿ ನೃತ್ಯ ಪ್ರಸ್ತುತಿ: ಅಂಜನಾ ಮೊಯೀ ಸೈಕಿಯಾ(ಸತ್ರಿಯ) ಮತ್ತು ವಂದನಾ ಸುಪ್ರಿಯಾ ಕಾಸರವಳ್ಳಿ, ಆಯೋಜನೆ: ಶುಭಂ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಶಂಕರ ಫೌಂಡೇಷನ್, ಕನಕಪುರ ರಸ್ತೆ, ದೊಡ್ಡಕಲ್ಲಸಂದ್ರ, ಸಂಜೆ 6.30

‘ಡಿಸ್ಕವರಿಂಗ್ ನ್ಯೂ ಇಂಡಿಯಾ’ ಪುಸ್ತಕ ಬಿಡುಗಡೆ: ಎಂ.ಎನ್. ವೆಂಕಟಾಚಲಯ್ಯ, ಅತಿಥಿಗಳು: ಚೆನ್‌ರಾಜ್ ರಾಯ್‌ಚಂದ್, ಆರ್.ಎನ್. ಅಯ್ಯಂಗಾರ್, ಚಿರಂಜೀವಿ ಸಿಂಗ್, ಆಯೋಜನೆ: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಸ್ಥಳ: ಸಿಎಂಎಸ್ ಬ್ಯುಸಿನೆಸ್ ಸ್ಕೂಲ್, ಶೇಷಾದ್ರಿ ರಸ್ತೆ, ಗಾಂಧಿನಗರ, ಸಂಜೆ 4

ಕರ್ನಾಟಕ ಶಾಸ್ತ್ರೀಯ ವೇಣು ಗಾನ ಕಛೇರಿ: ವೇಣು: ಹೆಮ್ಮಿಗೆ.ಎಸ್. ವೇಣುಗೋಪಾಲ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಎಚ್. ಎಸ್. ಕೃಷ್ಣಮೂರ್ತಿ, ಘಟ: ಎನ್. ಎಸ್. ಕೃಷ್ಣಪ್ರಸಾದ್, ಆಯೋಜನೆ: ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯ ಮಾರುತಿ ದೇವಸ್ಥಾನ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರನಗರ, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಸಹನಾ ಚಂದ್ರಶೇಖರ್, ಮೃದಂಗ: ವಿನೋದ್ ಶ್ಯಾಮ್ ಆನೂರು, ಪಿಟೀಲು: ಅರ್ಜುನ್ ದಿನಕರ್, ಮೋರ್ಸಿಂಗ್: ಭ್ಯಾಗಲಕ್ಷ್ಮಿ ಕೃಷ್ಣ, ಆಯೋಜನೆ: ಶಾರದಾ ಸಾಂಸ್ಕೃತಿಕ ಸಂಘ, ಸ್ಥಳ: ಎಸ್‌ಬಿಐ ಆಫೀಸರ್ಸ್ ಹಾಲ್, ಶಾರದಾ ಕಾಲೊನಿ ಎದುರು, ಗಣಪತಿ ಸೇವಾ ಸಮಿತಿ, ಬಸವೇಶ್ವರನಗರ, ಸಂಜೆ 6.30

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ: ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯು ಸ್ಪರ್ಧಾತ್ಮಕ ಪರೀಕ್ಷೆಗೆ ಮಾರ್ಗದರ್ಶನ ಮತ್ತು ತರಬೇತಿಗೆ ಅರ್ಜಿ ಆಹ್ವಾನಿಸಿದೆ.

ಐಎಎಸ್, ಕೆಎಎಸ್, ಬ್ಯಾಂಕಿಂಗ್ ಪರೀಕ್ಷೆಗಾಗಿ ಮತ್ತು ಸಾಮಾನ್ಯ ಜ್ಞಾನ ಫೌಂಡೇಷನ್ ಕೋರ್ಸ್‌ಗೆ ಆನ್‌ಲೈನ್/ಆಫ್‌ಲೈನ್, ಮಾರ್ಗದರ್ಶನ ಮತ್ತು ತರಬೇತಿ ನೀಡಲಾಗುತ್ತದೆ.

ಆಸಕ್ತ ಅಭ್ಯರ್ಥಿಗಳು ಸೆಪ್ಟೆಂಬರ್ 30ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ http://www.ksfkarnataka.com/ ಗೆ ಭೇಟಿ ನೀಡಿ ಅಥವಾ 08025 202299/7625000990ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಸಾಹಿತ್ಯ ಸಮ್ಮೇಳನ: ವಿಷಯ ಆಯ್ಕೆಗೆ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಗಳ ವಿಷಯ ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿಯು ಶನಿವಾರ ಬೆಳಿಗ್ಗೆ 11 ಗಂಟೆಗೆ ಪ್ರಥಮ ಸಭೆ ಹಮ್ಮಿಕೊಂಡಿದೆ.

ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ಈ ಸಭೆ ನಡೆಯಲಿದೆ. 2022ರ ನ.11, 12 ಮತ್ತು 13ರಂದು ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಗೋಷ್ಠಿಗಳಿಗೆ ವಿಷಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗೆ ರಚಿಸಲಾದ ಸಮಿತಿಯು ನಿವೃತ್ತ ನ್ಯಾಯಾಧೀಶರು, ಸಾಹಿತಿಗಳು, ಕನ್ನಡ ಪರ ಹೋರಾಟಗಾರರು ಹಾಗೂ ವಿಶ್ವ ವಿದ್ಯಾಲಯಗಳ ಕುಲಪತಿಗಳನ್ನು ಒಳಗೊಂಡಿದೆ.

'ಸಾಹಿತ್ಯ ಸಮ್ಮೇಳನದ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಈ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯದ ಪರಂಪರೆ, ವರ್ತಮಾನದ ಸವಾಲುಗಳು, ಭವಿಷ್ಯದ ಸಾಧ್ಯತೆಗಳು, ಕನ್ನಡಪರ ಚಿಂತನೆಯ ವಿಸ್ತಾರ, ನಾಡು–ನುಡಿಯ ಸಮಸ್ಯೆಗಳು ಮತ್ತು ಪರಿಹಾರ, ಕನ್ನಡ ಶಾಲೆಗಳ ಉಳಿವು, ಕನ್ನಡವನ್ನು ಅನ್ನದ ಭಾಷೆಯನ್ನಾಗಿಸುವ ಪ್ರಯತ್ನಗಳು, 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ' ಅನುಷ್ಠಾನ ಸೇರಿ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ' ಎಂದು ಮಹೇಶ ಜೋಶಿ ತಿಳಿಸಿದ್ದಾರೆ.

'ಸಮ್ಮೇಳನದಲ್ಲಿ ಪ್ರಧಾನ ವೇದಿಕೆ ಮತ್ತು ಸಮಾನಾಂತರ ವೇದಿಕೆಗಳಲ್ಲಿ ನಾನಾ ಗೋಷ್ಠಿಗಳು ಹಾಗೂ ಸಂವಾದಗಳು ನಡೆಯಲಿವೆ. ಈ ಗೋಷ್ಠಿಗಳ ವಿಷಯಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತಿದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಕಷ್ಟಗಳನ್ನು ಮೆಟ್ಟಿ ನಿಲ್ಲುವವನೇ ನಿಜವಾದ ಹೀರೊ'


ಡಾ.ಪಿ. ಶ್ಯಾಮರಾಜು

ಯಲಹಂಕ: 'ನನ್ನ ಜೀವನದಲ್ಲೂ ಕಷ್ಟಗಳು ಬಂದಿವೆ. ಆದರೆ, ನಾನು ಎಂದಿಗೂ ಎದೆಗುಂದದೆ ಅಥವಾ ಸೋಲದೆ ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ. ದೇವರ ಕೃಪೆಯಿಂದ ಅವಕಾಶಗಳು ಬಂದಿದ್ದು, ಸಾಧಿಸಬೇಕಾದುದು ಇನ್ನೂ ಇದೆ ಎಂಬುದನ್ನು ನಾನು ಮರೆಯುವುದಿಲ್ಲ' ಎಂದು ರೇವಾ ವಿಶ್ವ-ವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮರಾಜು ಹೇಳಿದರು.

ರೇವಾ ವಿಶ್ವವಿದ್ಯಾಲಯದ ಬ್ಯುಸಿನೆಸ್ ಸ್ಕೂಲ್ ವತಿಯಿಂದ ಆಯೋಜಿಸಿದ್ದ 'ನಾಯಕತ್ವದ ಗುಣ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಸಾಧಿಸಬೇಕೆಂಬ ಛಲದಿಂದ ಹಳ್ಳಿಯಿಂದ ಬೆಂಗಳೂರಿಗೆ ಬಂದೆ. ಇದು ನನ್ನ ಗುರಿಯ ಒಂದು ಭಾಗವೂ ಆಗಿತ್ತು. ಈ ವೇಳೆ ಸಾಕಷ್ಟು ಸಮಸ್ಯೆಗಳು ಉದ್ಭವಿಸಿದರೂ ಎಲ್ಲವನ್ನೂ ಮೆಟ್ಟಿನಿಲ್ಲಲು ಮುಂದಾದೆ. ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ತಮ್ಮತನ ಮತ್ತು ಸಾಧಿಸುವ ಛಲ ಕಡಿಮೆಯಾಗಬಾರದು. ಆಗಮಾತ್ರ ನಾವು ಸಾಧನೆ ಮಾಡಲು ಸಾಧ್ಯವಾಗುತ್ತದೆ' ಎಂದರು.

'ಯಶಸ್ಸು ಸುಲಭವಾಗಿ ಅಥವಾ ನೇರವಾಗಿ ಸಿಗುವುದಿಲ್ಲ. ಅದರ ಹಿಂದೆ ಕಠಿಣ ಪರಿಶ್ರಮವಿರಬೇಕಾಗುತ್ತದೆ' ಎಂದು ತಿಳಿಸಿದರು.

ಅಪಘಾತದಿಂದ ಸುಟ್ಟ ಲಾರಿ–ಬೈಕ್

ಅಪಘಾತದ ನೆಪದಲ್ಲಿ ಸುಲಿಗೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ದೇಶಪೂರ್ವಕವಾಗಿ ಅಪಘಾತವನ್ನುಂಟು ಮಾಡಿ ಸಾರ್ವಜನಿಕರ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶಿವಾಜಿನಗರ ನೆಹರುಪುರದ ಮುಜುಮಿಲ್ ಹುಸೇನ್ ಅಲಿಯಾಸ್ ಚೋರ್ ಮುಜ್ಜು (27) ಹಾಗೂ ಜೆ.ಸಿ. ನಗರ ಮಾರಪ್ಪ ಗಾರ್ಡನ್‌ನ ಫೈಜ್ ಹುಸೇನ್ (25) ಬಂಧಿತರು. ಇವರಿಂದ ₹ 2.50 ಲಕ್ಷ ಮೌಲ್ಯದ ದ್ವಿಚಕ್ರ ವಾಹನ ಹಾಗೂ 11 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ನಿತ್ಯವೂ ಬೈಕ್‌ನಲ್ಲಿ ಸುತ್ತಾಡುತ್ತಿದ್ದರು. ರಸ್ತೆಯಲ್ಲಿ ಹೋಗುವ ಸಾರ್ವಜನಿಕರ ಬೈಕ್‌ಗಳಿಗೆ ಉದ್ದೇಶಪೂರ್ವಕವಾಗಿ ತಮ್ಮ ಬೈಕ್ ಗುದ್ದಿಸಿ ಅಪಘಾತವನ್ನುಂಟು ಮಾಡುತ್ತಿದ್ದರು. ತಮ್ಮ ಬೈಕ್ ಜಖಂಗೊಂಡಿರುವುದಾಗಿ ಹೇಳಿ, ಜಗಳ ತೆಗೆಯುತ್ತಿದ್ದರು. ನಂತರ, ಚಾಕು ತೋರಿಸಿ ಬೆದರಿಸಿ ನಗದು ಹಾಗೂ ಬೆಲೆ ಬಾಳುವ ವಸ್ತುಗಳನ್ನು ಕಿತ್ತುಕೊಂಡು ಪರಾರಿಯಾಗುತ್ತಿದ್ದರು’ ಎಂದು ತಿಳಿಸಿದರು.

‘ರಸ್ತೆಯಲ್ಲಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನೂ ಬೆದರಿಸಿ ಆರೋಪಿಗಳು ಸುಲಿಗೆ ಮಾಡುತ್ತಿದ್ದರು. ಈ ಬಗ್ಗೆ ಹಲವು ಪ್ರಕರಣಗಳು ದಾಖಲಾಗಿದ್ದವು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಬಳಿ ಅಪಘಾತ ಸಂಭವಿಸಿ ಬೆಂಕಿ ಹೊತ್ತಿಕೊಂಡಿದ್ದರಿಂದ ಲಾರಿ ಹಾಗೂ ಬೈಕ್ ಸುಟ್ಟಿದ್ದು, ಸವಾರ ಸುಮನ್ ಬಾನಿಕ್ (22) ಎಂಬುವರು ಮೃತಪಟ್ಟಿದ್ದಾರೆ.

‘ಸ್ಥಳೀಯ ಕನಕನಗರದ ನಿವಾಸಿ ಸುಮನ್ ಬಾನಿಕ್, ಶುಕ್ರವಾರ ನಸುಕಿನ 3.45 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಹೊರಟಿದ್ದಾಗ ಅಪಘಾತ ಸಂಭವಿಸಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಸದಾಶಿವನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

‘ಬಳ್ಳಾರಿ ರಸ್ತೆಯಲ್ಲಿ ಹೆಬ್ಬಾಳ ಕಡೆಯಿಂದ ಮೇಖ್ರಿ ವೃತ್ತದತ್ತ ಏಕಮುಖ ರಸ್ತೆಯಲ್ಲಿ ಲಾರಿ (ಎಪಿ 04 ಯುಬಿ 1189) ಹೊರಟಿತ್ತು. ಅದೇ ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಸುಮನ್ ಬೈಕ್ ಚಲಾಯಿಸಿಕೊಂಡು ತೆರಳುತ್ತಿದ್ದರು. ಇದೇ ವೇಳೆ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು.’

‘ಸುಮನ್ ಸಮೇತವಾಗಿ ಬೈಕ್‌ನ್ನು 100 ಮೀಟರ್‌ವರೆಗೂ ಲಾರಿ ಉಜ್ಜಿಕೊಂಡು ಹೋಗಿತ್ತು. ಈ ಅಪಘಾತದಿಂದಾಗಿ ಲಾರಿಯ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಉರಿಯಲಾರಂಭಿಸಿತ್ತು. ಕೆಲ ನಿಮಿಷಗಳಲ್ಲೇ ಬೈಕ್, ಸಂಪೂರ್ಣ ಸುಟ್ಟುಹೋಯಿತು. ಲಾರಿ ಸಹ ಭಾಗಶಃ ಸುಟ್ಟಿತು. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಹೋಗಿ ಅಗ್ನಿಶಾಮಕದ ದಳದ ಸಿಬ್ಬಂದಿ ಜೊತೆ ಬೆಂಕಿ ನಂದಿಸಿದರು’ ಎಂದು ಹೇಳಿದರು.

‘ತೀವ್ರ ಗಾಯಗೊಂಡಿದ್ದ ಸುಮನ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ. ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಬೈಕ್ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ತಿಳಿಸಿದರು.



ಹೆಬ್ಬಾಳ ಬಳಿ ಶುಕ್ರವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಿಂದಾಗಿ ಲಾರಿ ಭಾಗಶಃ ಸುಟ್ಟಿರುವುದು

ಚಾಕು ತೋರಿಸಿ ಲೈಂಗಿಕ ದೌರ್ಜನ್ಯ

ಬೆಂಗಳೂರು: ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿ ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶಾಂತಲಾನಗರದಲ್ಲಿ ಸೆ. 10ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಮಹಿಳೆ ತಡವಾಗಿ ದೂರು ನೀಡಿದ್ದಾರೆ. ಆರೋಪಿ ವಿಲಿಯಂ ಎಂಬಾತ ತಲೆಮರೆಸಿಕೊಂಡಿದ್ದು, ತನಿಖೆ ಮುಂದುವರಿದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಮಹಿಳೆಯು ರಾತ್ರಿ ಚರ್ಚ್‌ನ ವಿದ್ಯುದ್ದೀಪ ಆರಿಸಲು ಹೋಗಿದ್ದರು. ಇದೇ ವೇಳೆ ಮಹಿಳೆಯನ್ನು ಹಿಂದಿನಿಂದ ತಬ್ಬಿಕೊಂಡಿದ್ದ ಆರೋಪಿ, ಚಾಕು ತೋರಿಸಿ ಬೆದರಿಸಿದ್ದ. ಮೈ-ಕೈ ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಹಿಳೆ ಚೀರಾಡುತ್ತಿದ್ದಂತೆ ಆರೋಪಿ ಪರಾರಿಯಾಗಿದ್ದಾನೆ’ ಎಂದು ತಿಳಿಸಿವೆ.

ಪ್ರತ್ಯೇಕ ಅಪಘಾತ ಇಬ್ಬರ ಸಾವು

ಬೆಂಗಳೂರು: ಮಡಿವಾಳ ಹಾಗೂ ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

ಪ್ರಸನ್ನ (23) ಹಾಗೂ ನಾರಾಯಣಪ್ಪ (67) ಮೃತರು. ಅಪಘಾತದ ಬಗ್ಗೆ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ‘ಇಸ್ತ್ರೀ ಅಂಗಡಿ ನಡೆಸುತ್ತಿದ್ದ ಪ್ರಸನ್ನ, ಗುರುವಾರ ರಾತ್ರಿ ಮನೆಯತ್ತ ಹೊರಟಿದ್ದರು. ಬೇಗೂರು ಮುಖ್ಯ ರಸ್ತೆಯಲ್ಲಿ ಪ್ರಸನ್ನ ಅವರಿಗೆ ಮಿನಿ ಬಸ್ ಗುದ್ದಿತ್ತು. ತೀವ್ರ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಮಡಿವಾಳ ಸಂಚಾರ ಪೊಲೀಸರು ಹೇಳಿದರು.

‘ಮಿನಿ ಬಸ್ ಚಾಲಕನ ಅತಿ ವೇಗದ ಚಾಲನೆ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆ. ಮಿನಿ ಬಸ್ ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದ ಚಾಲಕ ಮಹಾದೇವ್ ಎಂಬಾತನನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ಬೈಕ್ ಗುದ್ದಿ ವೃದ್ಧ ಸಾವು: ನಾಗರಬಾವಿ ಹೊರವರ್ತುಲ ರಸ್ತೆಯ ದೀಪಾ ಕಾಂಪ್ಲೆಕ್ಸ್ ಬಳಿ ಬೈಕ್ ಗುದ್ದಿದ್ದರಿಂದಾಗಿ ನಾರಾಯಣಪ್ಪ (67) ಮೃತಪಟ್ಟಿದ್ದಾರೆ.

‘ಸ್ಥಳೀಯ ನಿವಾಸಿ ನಾರಾಯಣಪ್ಪ, ಪತ್ನಿ ಜೊತೆ ಕೆಲಸ ನಿಮಿತ್ತ ಸ್ವಂತ ಊರಾದ ದಾಬಸ್‌ಪೇಟೆಗೆ ಹೋಗಿದ್ದರು. ಅಲ್ಲಿಂದ ಗುರುವಾರ ರಾತ್ರಿ ಬಸ್‌ನಲ್ಲಿ ವಾಪಸು ಬಂದು ದೀಪಾ ಕಾಂಪ್ಲೆಕ್ಸ್ ಬಳಿ ಇಳಿದುಕೊಂಡಿದ್ದರು. ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ಹೊರಟಿದ್ದರು. ಇದೇ ವೇಳೆಯೇ ನಾರಾಯಣಪ್ಪ ಅವರಿಗೆ ಬೈಕ್ ಗುದ್ದಿತ್ತು’ ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

‘ತೀವ್ರ ಗಾಯಗೊಂಡಿದ್ದ ನಾರಾಯಣಪ್ಪ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ. ಬೈಕ್ ಸವಾರ ಶಶಿ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದ್ದು, ಈತನ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ತಿಳಿಸಿದರು.

928 ಮೊಬೈಲ್ ಜಪ್ತಿ, 105 ಮಂದಿ ಸೆರೆ

ಬೆಂಗಳೂರು: ಕಳ್ಳತನ ಹಾಗೂ ಸುಲಿಗೆ ಪ್ರಕರಣ ಭೇದಿಸಲು ಒಂದು ತಿಂಗಳು ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು, ₹ 86 ಲಕ್ಷ ಮೌಲ್ಯದ 928 ಮೊಬೈಲ್ ಜಪ್ತಿ ಮಾಡಿದ್ದಾರೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಮಿಷನರ್ ಪ್ರತಾಪ್ ರೆಡ್ಡಿ, ‘ಕಾರ್ಯಾಚರಣೆಯಲ್ಲಿ 105 ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು. ‘ಪಶ್ಚಿಮ, ಉತ್ತರ, ದಕ್ಷಿಣ ಹಾಗೂ ಕೇಂದ್ರ ವಿಭಾಗ ವ್ಯಾಪ್ತಿಯ ಪೊಲೀಸರು ಪ್ರತ್ಯೇಕ ತಂಡಗಳನ್ನು ರಚಿಸಿಕೊಂಡು ಕಾರ್ಯಾಚರಣೆ ನಡೆಸಿದ್ದರು’ ಎಂದರು.

ಸುದ್ದಿ 2 ನಿಮಿಷ

ತೆರಿಗೆ ವಂಚನೆಯ ತನಿಖೆ: ಸಿಐಡಿಗೆ ವಹಿಸಲು ಕ್ರಮ

ಬೆಂಗಳೂರು: ‘ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆ ವಂಚನೆ ಪ್ರಕರಣಗಳ ಬಗ್ಗೆ ಮಹಾಲೇಖಪಾಲರ ಲೆಕ್ಕಪರಿಶೋಧನೆಯ ವರದಿ ಪಡೆದ ಬಳಿಕ ಸಿಐಡಿ ತನಿಖೆಗೆ ವಹಿಸಲಾಗುವುದು ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಸಿ.ಎನ್. ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಜೀವಿತಾವಧಿ ತೆರಿಗೆ ವಂಚಿಸಿರುವ ಒಟ್ಟು 226 ಪ್ರಕರಣಗಳು ದಾಖಲಾಗಿವೆ’ ಎಂದು ತಿಳಿಸಿದರು.

‘ವಂಚನೆ ಪ್ರಕರಣಗಳನ್ನು ಪರಿಶೀಲಿಸಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ. ಈ ಪ್ರಕರಣಗಳ ಹೆಚ್ಚಿನ ತನಿಖೆಯನ್ನು ಸಿಐಡಿ ಅಥವಾ ಲೋಕಾಯುಕ್ತಕ್ಕೆ ನೀಡಬಹುದು ಎಂದು ಸಾರಿಗೆ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಿದ್ದಾರೆ. ಹೀಗಾಗಿ, ಲೆಕ್ಕಪರಿಶೋಧನೆ ನಡೆಸಿ ವರದಿ ನೀಡುವಂತೆ ಮಹಾಲೇಖಪಾಲರನ್ನು ಕೋರಲಾಗಿದೆ’ ಎಂದರು.

ಮಂಜೇಗೌಡ ಪ್ರತಿಕ್ರಿಯಿಸಿ, ‘₹110 ಕೋಟಿಗೂ ಹೆಚ್ಚು ವಂಚನೆ ಮಾಡಲಾಗಿದೆ. ಆರು ತಿಂಗಳ ಹಿಂದೆಯೂ ಸಾರಿಗೆ ಸಚಿವರು ಇದೇ ರೀತಿ ಉತ್ತರ ನೀಡಿದ್ದರು. ತನಿಖೆಗೆ ಹಿಂದೇಟು ಏಕೆ’ ಎಂದರು.

ಸಾಂಬಾರ್ ಪಾತ್ರೆಗೆ ಹಲ್ಲಿ: 29 ಮಕ್ಕಳಿಗೆ ಚಿಕಿತ್ಸೆ



ಭಾರತೀನಗರ (ಮಂಡ್ಯ): ಸಾಂಬಾರ್ ಪಾತ್ರೆಗೆ ಹಲ್ಲಿ ಬಿದ್ದಿರುವುದನ್ನು ಗಮನಿಸದೆ, ಇಲ್ಲಿನ ಅಂಬರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ಬಡಿಸಿದ ಬಿಸಿಯೂಟ ಸೇವಿಸಿದ 29 ಮಕ್ಕಳು ಅಸ್ವಸ್ಥರಾಗಿ ಮಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಕ್ಕಳು ವಾಂತಿ ಮಾಡಿಕೊಂಡ ಕೂಡಲೇ ಮುಖ್ಯಶಿಕ್ಷಕರು ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು ನಗರದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ದಾಖಲಿಸಿದರು.

‘ಸಾಂಬಾರಿಗೆ ಹಲ್ಲಿ ಬಿದ್ದಿರುವುದು ಅರಿವಿಗೆ ಬರದೆ ಘಟನೆ ಜರುಗಿದೆ. ಮಕ್ಕಳು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆಂದು ವೈದ್ಯರು ಮಾಹಿತಿ ನೀಡಿದ್ದಾರೆ’ ಎಂದು ಶಿಕ್ಷಕ ಮಹೇಶ್ ಹೇಳಿದರು.

ಪ್ರಿಯಕರನಿಂದ ನವ ವಿವಾಹಿತೆ ಕೊಲೆ

ವಿಜಯಪುರ (ಬೆಂ.ಗ್ರಾಮಾಂತರ):- ಮದುವೆಯಾಗಲು ನಿರಾಕರಿಸಿದ್ದ ನವ ವಿವಾಹಿತೆಯನ್ನು ಪ್ರಿಯಕರ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ದೇವನಹಳ್ಳಿ ತಾಲ್ಲೂಕಿನ ಆವತಿ ಗ್ರಾಮದಲ್ಲಿ ನಡೆದಿದೆ.

ಸೌಮ್ಯ (23) ಕೊಲೆಯಾದವರು. ದೊಡ್ಡಬಳ್ಳಾಪುರ ತಾಲ್ಲೂಕಿನ ನಾಗಶೆಟ್ಟಿಹಳ್ಳಿಯ ಸುಬ್ರಮಣಿ ಎಂಬಾತ ಈ ಕೃತ್ಯ ಎಸಗಿದ ಬಳಿಕ ವಿಷ ಸೇವಿಸಿದ್ದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಸೌಮ್ಯ ಮತ್ತು ಸುಬ್ರಮಣಿ ಬೆಂಗಳೂರಿನ ನಾಗವಾರದ ಕಾಫಿ ಡೇನಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಇಬ್ಬರ ನಡುವಿನ ಸ್ನೇಹ ಪ್ರೀತಿಗೆ ತಿರುಗಿತ್ತು. ಬಳಿಕ ಆಕೆ ಮದುವೆಗೆ ಒಪ್ಪಿರಲಿಲ್ಲ.

ಕೊಲೆ ಸಂಬಂಧ ವಿಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಭಾಂಗಣದ ಕುರ್ಚಿ ಭಸ್ಮ: ಗೋಡೆಗಳು ಜಖಂ

ಬೂದಿಬೆಟ್ಟ ಗ್ರಾ.ಪಂ ಕಚೇರಿಯಲ್ಲಿ ಸ್ಫೋಟ

ಪ್ರಜಾವಾಣಿ ವಾರ್ತೆ

ವೈ.ಎನ್. ಹೊಸಕೋಟೆ (ಪಾವಗಡ ತಾಲ್ಲೂಕು): ಹೋಬಳಿಯ ಬೂದಿಬೆಟ್ಟ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಗುರುವಾರ ರಾತ್ರಿ ಸ್ಫೋಟ ಸಂಭವಿಸಿದ್ದು, ಗೋಡೆಗಳು ಜಖಂಗೊಂಡಿವೆ.

ಕಚೇರಿಯ ಹಿಂಭಾಗದ ಕಿಟಕಿಯನ್ನು ಕಿತ್ತು ಒಳ ನುಸುಳಿರುವ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ. ಸಭಾಂಗಣದ ಮೂಲೆಯಲ್ಲಿನ ಕುರ್ಚಿ ಮೇಲೆ ಸ್ಫೋಟ ನಡೆಸಿದಂತೆ ಕಂಡುಬಂದಿದ್ದು, ಕುರ್ಚಿಗಳು ಸುಟ್ಟು ಹೋಗಿವೆ.

ರಾತ್ರಿ ಭಾರಿ ಸ್ಫೋಟದ ಶಬ್ದ ಕೇಳಿಬಂದಿದೆ. ಗಾಬರಿಗೊಂಡ ಜನರು ಹೋಗಿ ನೋಡಿದಾಗ ಪಂಚಾಯಿತಿ ಕಚೇರಿಯಲ್ಲಿ ಬೆಂಕಿ ಉರಿಯುತ್ತಿರುವುದು ಕಾಣಿಸಿದೆ. ಸ್ಫೋಟಕ್ಕೆ ಸ್ಪಷ್ಟ ಆಧಾರ ದೊರೆತಿಲ್ಲ. ಆದರೆ, ಹಿಂದೆ ಈ ಪ್ರದೇಶ ನಕ್ಸಲರ ಅಡಗುತಾಣವಾಗಿದ್ದು, ಮತ್ತೆ ಅವರ ಚಟುವಟಿಕೆಗಳು ಗರಿಗೆದರಿವೆಯೇ ಎಂಬ ಸಂಶಯ ಜನರಿಗೆ ಕಾಡುತ್ತಿದೆ.

‘ಹಲವು ತಿಂಗಳುಗಳಿಂದ ಗ್ರಾಮ ಪಂಚಾಯಿತಿಯಲ್ಲಿ ನಿವೇಶನದ ಖಾತೆ ವಿಚಾರವಾಗಿ ಅಧಿಕಾರಿಗಳು ಮತ್ತು ಬಲಾಢ್ಯರ ನಡುವೆ ಸಂಘರ್ಷ ನಡೆಯುತ್ತಿದೆ. ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಕಚೇರಿವರೆಗೆ ದೂರುಗಳು ಸಲ್ಲಿಕೆಯಾಗಿವೆ. ಆದರೆ ಯಾವುದೇ ಪ್ರಯೋಜನ ಆಗಿಲ್ಲ. ಇದರಿಂದ ಕಚೇರಿಯಲ್ಲಿನ ದಾಖಲೆ ನಾಶ ಮಾಡಲು ಈ ರೀತಿ ಕೃತ್ಯ ನಡೆದಿರಬಹುದು’ ಎಂದು ಸ್ಥಳೀಯರಾದ ಗಂಗಣ್ಣ ಹೇಳಿದರು.

> **ಗ್ರಾಮ ಪಂಚಾಯಿತಿಯಲ್ಲಿ ರಾತ್ರಿ ಸ್ಫೋಟ ನಡೆದಿದೆ. ಈ ಸಂಬಂಧ ವೈ.ಎನ್.ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದೆ. ಯಾವುದೇ ಕಡತಗಳ ಕಳವು ಅಥವಾ ನಾಶ ಆಗಿಲ್ಲ**
> **ಮುದ್ದುರಾಜ್**
> ಪಿಡಿಒ, ಬೂದಿಬೆಟ್ಟ ಗ್ರಾ.ಪಂ

> **ಬೂದಿಬೆಟ್ಟದಲ್ಲಿ ಸ್ಫೋಟವಾದ ಸುದ್ದಿ ತಿಳಿದಿದೆ. ಪೊಲೀಸ್ ಇಲಾಖೆ ಪರಿಶೀಲನೆ ನಡೆಸುತ್ತಿದೆ. ಸ್ಫೋಟಕ ತಜ್ಞರನ್ನು ಸ್ಥಳಕ್ಕೆ ಕಳುಹಿಸಲಾಗಿದೆ. ಶೀಘ್ರ ಸ್ಫೋಟಕ್ಕೆ ಕಾರಣ ತಿಳಿಯಲಿದೆ**
> **ವೆಂಕಟೇಶ್ ನಾಯ್ಡು,** ಡಿಎಸ್‌ಪಿ



ಬೂದಿಬೆಟ್ಟ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಸಂಭವಿಸಿದ ಸ್ಫೋಟದಿಂದ ಜಖಂಗೊಂಡಿರುವ ಗೋಡೆ

ಯಾವುದೇ ಆಧಾರವಿಲ್ಲ

ಗ್ರಾಮ ಪಂಚಾಯಿತಿಯಲ್ಲಿ ಸ್ಫೋಟ ನಡೆದಿರುವುದು ಸತ್ಯ. ಆದರೆ ಯಾವ ರೀತಿ ನಡೆಸಿದ್ದಾರೆ? ಏಕೆ ನಡೆಸಿದ್ದಾರೆ ಎನ್ನುವುದಕ್ಕೆ ಯಾವುದೇ ಆಧಾರ ದೊರೆತಿಲ್ಲ. ಸ್ಫೋಟ ನಡೆದ ಸ್ಥಳದಲ್ಲಿ ಜಿಲೆಟಿನ್ ಕಡ್ಡಿ, ಪೌಡರ್ ಇನ್ನಿತರೆ ಯಾವುದೇ ಸ್ಫೋಟಕ ವಸ್ತುಗಳ ಚೂರುಗಳೂ ಕಂಡುಬಂದಿಲ್ಲ. ಕೇವಲ ಮೂರು-ನಾಲ್ಕು ಕುರ್ಚಿಗಳು ಸುಟ್ಟಿವೆ. ಗೋಡೆಗಳು ಒಡೆದಿವೆ. ತಜ್ಞರು ಬರಲಿದ್ದು, ಪರಿಶೀಲನೆ ನಂತರ ಸ್ಪಷ್ಟ ಮಾಹಿತಿ ಲಭ್ಯವಾಗುತ್ತದೆ.

ಕಾಂತರೆಡ್ಡಿ, ಸಿಪಿಐ, ಪಾವಗಡ ಗ್ರಾಮಾಂತರ ವೃತ್ತ

ಗೃಹ ಪೀಠೋಪಕರಣ ಗೋದಾಮಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹೊರಮಾವು ಸಮೀಪದ ಬಂಜಾರ ಬಡಾವಣೆಯ ಪ್ಲಾನ್ ಶೆ ಗೋದಾಮಿಗೆ ಆಕಸ್ಮಿಕ ಬೆಂಕಿ ಬಿದ್ದು, ಗೃಹ ಪೀಠೋಪಕರಣ ತಯಾರಿಸುವ ಕಚ್ಚಾ ವಸ್ತುಗಳು ಭಸ್ಮವಾಗಿವೆ.

ಲೀನಾ ಎಂಬುವವರಿಗೆ ಸೇರಿದ ಪ್ಲಾನ್ ಶೆ ಗೋದಾಮಿನಲ್ಲಿ ಬೆಳಿಗ್ಗೆ ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಈ ಅವಘಡ ಸಂಭವಿಸಿದೆ. ಲಕ್ಷಾಂತರ ರೂಪಾಯಿ ಮೌಲ್ಯದ ಪ್ಲೈವುಡ್, ಪ್ಲೋರ್ ಮ್ಯಾಟ್, ಹಾರ್ಡ್ ವೇರ್ ಉತ್ಪನ್ನಗಳು ಬೆಂಕಿಯ ಕೆನ್ನಾಲಿಗೆಗೆ ಸುಟ್ಟು ಕರಕಲಾಗಿವೆ. ಗೋದಾಮಿನಲ್ಲಿ ಯಾರೂ ಇರಲಿಲ್ಲ. ಬೆಂಕಿ ಕಾಣಿಸಿಕೊಂಡ ಬೆನ್ನಲ್ಲೇ ಸ್ಥಳೀಯರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಐದು ಅಗ್ನಿಶಾಮಕ ವಾಹನಗಳು ಹಾಗೂ ಸಿಬ್ಬಂದಿ ಸತತ ಐದು ಗಂಟೆಗಳ ಕಾರ್ಯಾಚರಣೆ ನಡೆಸಿ ಬೆಂಕಿ ನಿಯಂತ್ರಣಕ್ಕೆ ತಂದರು.



ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುತ್ತಿರುವುದು

ಮಗುವಿಗೆ ಮತ್ತು ಬರಿಸಿ ಭಿಕ್ಷಾಟನೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂರು ತಿಂಗಳಲ್ಲಿ ಭಿಕ್ಷಾಟನೆ ನಿಯಂತ್ರಿಸಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ್ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ವೇಳೆಯಲ್ಲಿ ಅ. ದೇವೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಮಕ್ಕಳನ್ನು ಕಂಕುಳಲ್ಲಿ ಕೂರಿಸಿಕೊಂಡು ಭಿಕ್ಷೆ ಬೇಡುತ್ತಿರುವುದು ಸಾಮಾನ್ಯವಾಗಿದೆ. ಆದರೆ, ಇವರು ಯಾರದೋ ಮಕ್ಕಳನ್ನು ತಂದು ಈ ರೀತಿ ಭಿಕ್ಷೆ ಬೇಡುತ್ತಿರುವುದು ಗಮನಕ್ಕೆ ಬಂದಿದೆ. ಈ ಮಕ್ಕಳಿಗೆ ಮತ್ತು ಬರಿಸುವ ಔಷಧಗಳನ್ನು ಹಾಕುತ್ತಾರೆ’ ಎಂದು ವಿವರಿಸಿದರು.

‘ತಾಯಿ ಮತ್ತು ಮಗು ಹೆಸರಿನಲ್ಲಿ ಭಿಕ್ಷೆ ಬೇಡುವುದನ್ನು ಮೊದಲು ನಿಯಂತ್ರಿಸಬೇಕಾಗಿದೆ. ಭಿಕ್ಷುಕರ ಹಾವಳಿ ಬಗ್ಗೆ ಕಾರ್ಮಿಕ ಇಲಾಖೆ, ಗೃಹ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರ ಜತೆಯೂ ಸಭೆ ನಡೆಸಲಾಗಿದೆ’ ಎಂದು ತಿಳಿಸಿದರು.

ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ, ಮುಖ್ಯ ಹಾಗೂ ವಾರ್ಡ್ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಬಿಬಿಎಂಪಿ ಆರಂಭಿಸಿದೆ.

‘ಅತಿಯಾದ ಮಳೆಯಿಂದ ಬಹುತೇಕ ಎಲ್ಲ ರಸ್ತೆಗಳಲ್ಲಿ ಗುಂಡಿಬಿದ್ದಿವೆ. ಈ ವಾರ ಮಳೆ ಸಾಕಷ್ಟು ಬಿಡುವು ನೀಡಿದೆ. ಎರಡು ದಿನಗಳಿಂದ ಮಳೆ ಇಲ್ಲ. ಇಂತಹ ಪರಿಸ್ಥಿತಿಯೇ ಮುಂದುವರಿದರೆ ಕೆಲವು ದಿನಗಳಲ್ಲಿ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತದೆ. ನಾಲ್ಕು ಘಟಕಗಳಿಂದ ಮಿಶ್ರಣ ತಯಾರಾಗಿದ್ದು, ಕಾಮಗಾರಿ ಚುರುಕುಗೊಳಿಸಲಾಗಿದೆ. ಹಗಲು–ರಾತ್ರಿಯೂ ಗುಂಡಿ ಮುಚ್ಚುವ ಕೆಲಸ ಮಾಡಲಿದ್ದೇವೆ’ ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯದ ಮೇಲ್ವಿಚಾರಣೆ ಹೊಂದಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ವಾರ್ಡ್ ರಸ್ತೆಗಳಲ್ಲೂ ಗುಂಡಿಗಳನ್ನು ಮುಚ್ಚಲು ವಲಯ ಎಂಜಿನಿಯರ್‌ಗಳಿಗೆ ಸೂಚನೆ ನೀಡಲಾಗಿದೆ ಎಂದರು.

‘ಅಮೃತ ನಗರೋತ್ಥಾನ ಯೋಜನೆಯಲ್ಲಿ ರಸ್ತೆ ಮೂಲಸೌಕರ್ಯ ಯೋಜನೆಗಳಿಗೆ ₹700 ಕೋಟಿ ಒದಗಿಸಲಾಗಿದೆ. 227 ರಸ್ತೆ ಕಾಮಗಾರಿಗಳಿಗೆ ಅನುಮೋದನೆ ದೊರೆತಿದ್ದು, ಬಹುತೇಕ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಮಳೆ ಪೂರ್ಣ ಬಿಡುವು ನೀಡಿದರೆ, ಹವಾಮಾನ ಮುನ್ಸೂಚನೆಯನ್ನು ಪರಿಗಣಿಸಿ ಈ ರಸ್ತೆ ಕಾಮಗಾರಿಗಳನ್ನು ಆರಂಭಿಸಲು ಯೋಚಿಸಲಾಗುತ್ತಿದೆ’ ಎಂದರು.

153 ಗ್ರಾಂ ಚಿನ್ನ ಕಳ್ಳತನ: ಬಂಧನ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಜಯಂತಿ ಅಲಿಯಾಸ್ ಕುಟ್ಟಿಯಮ್ಮ (31) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

‘ಥಣಿಸಂದ್ರದ ಅಪಾರ್ಟ್‌ಮೆಂಟ್ ರಸ್ತೆಯ ನಿವಾಸಿ ಜಯಂತಿ, ಹಲವು ಮನೆಗಳಲ್ಲಿ ಕಳ್ಳತನ ಮಾಡಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ಸದ್ಯ ಇವರಿಂದ ₹ 7.50 ಲಕ್ಷ ಮೌಲ್ಯದ 153 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕುಡಿಯುವ ನೀರು ಕೇಳುವ ಹಾಗೂ ಬಾಡಿಗೆ ಮನೆ ವಿಚಾರಿಸುವ ಸೋಗಿನಲ್ಲಿ ಜಯಂತಿ ಸುತ್ತಾಡುತ್ತಿದ್ದರು. ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ನಂತರ, ಬೀಗ ಮುರಿದು ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು. ಕೋರಮಂಗಲ, ಡಿ.ಜೆ.ಹಳ್ಳಿ, ಅಶೋಕನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದರು.

ಅರ್ಜಿ ಆಹ್ವಾನ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯದ ವತಿಯಿಂದ ನವೆಂಬರ್ 3ರಿಂದ 6ರ ವರೆಗೆ ಜಿಕೆವಿಕೆಯಲ್ಲಿ ಹಮ್ಮಿಕೊಂಡಿರುವ ಕೃಷಿ ಮೇಳದಲ್ಲಿ ಮಳಿಗೆ ತೆರೆಯಲು ಅರ್ಜಿ ಆಹ್ವಾನಿಸಲಾಗಿದೆ.

ಮೇಳದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸರ್ಕಾರಿ ಸಂಸ್ಥೆಗಳು, ಸಂಶೋ ಧನಾ ಸಂಸ್ಥೆಗಳು, ಬಿತ್ತನೆ ಬೀಜ, ಕೃಷಿ ಉಪಕರಣ ತಯಾರಕರು ಪಶು ಸಂಗೋಪನಾ ಸಂಸ್ಥೆಗಳು ಭಾಗವಹಿಸಲಿವೆ.

ಕೃಷಿ ವಸ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಸಂಸ್ಥೆ ಮತ್ತು ಉದ್ದಿಮೆದಾರರು ಮಳಿಗೆ ತೆರೆ ಯಲು ಅ. 22ರೊಳಗೆ ಕಾಯ್ದಿರಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 9449986817/9945254640ಗೆ ಸಂಪರ್ಕಿಸಿ.

ಸಂತ್ರಸ್ತರಿಗೆ ಸ್ಪಂದಿಸದ ಅಸಮರ್ಥ ಸರ್ಕಾರ: ಎಸ್‌. ರವಿ

ಬೆಂಗಳೂರು: ‘ಪ್ರವಾಹ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ವಿಳಂಬ ಮಾಡಲಾಗುತ್ತಿದೆ. ಇದು ಅಸಮರ್ಥ ಸರ್ಕಾರ’ ಎಂದು ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್ ಸದಸ್ಯ ಎಸ್. ರವಿ ಕಿಡಿಕಾರಿದರು.

ನಿಯಮ 68ರ ಅಡಿಯಲ್ಲಿ ರಾಜ್ಯದಲ್ಲಿನ ಪ್ರವಾಹ ಪರಿಸ್ಥಿತಿ ಕುರಿತು ಮಾತನಾಡಿದ ಅವರು, ರಾಮನಗರದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹದಿಂದ ಜನರು ಎದುರಿಸಿದ ಸಂಕಷ್ಟಗಳನ್ನು ಎಳೆಎಳೆಯಾಗಿ ವಿವರಿಸಿದರು.

‘ರಾಮನಗರದಲ್ಲಿ ಪ್ರವಾಹದಿಂದಾಗಿ ಹಲವರು ಬದುಕು ಸರ್ವನಾಶವಾಗಿದೆ. ಆದರೆ, ಕಲ್ಲು ಹೃದಯದ ಅಧಿಕಾರಿಗಳು ಪರಿಹಾರಕ್ಕೆ ದಾಖಲೆಗಳನ್ನು ಕೇಳುತ್ತಿದ್ದಾರೆ. ನೀರಿನ ಕೆಸರಿನಲ್ಲಿ ದಾಖಲೆಗಳು, ಬಟ್ಟೆ, ಒಡವೆಗಳು ಎಲ್ಲವೂ ಕೊಚ್ಚಿಹೋಗಿರುವಾಗ ಎಲ್ಲಿಂದ ತಂದು ಕೊಡುವುದು? ಡಬಲ್ ಎಂಜಿನ್ ಸರ್ಕಾರ ಎಂದು ಹೇಳುತ್ತೀರಿ. ಆದರೆ, ಪರಿಹಾರ ಎಲ್ಲಿದೆ’ ಎಂದು ಕಟುವಾಗಿ ಪ್ರಶ್ನಿಸಿದರು.

‘ಜಿಲ್ಲಾ ಉಸ್ತುವಾರಿ ಸಚಿವರು ಆವಾಜ್ ಹಾಕಿದರೆ ಆಗುವುದಿಲ್ಲ. ಅಧಿಕಾರಿಗಳ ಕಿವಿ ಹಿಂಡಿ ಸಂತ್ರಸ್ತರ ನೆರವಿಗೆ ಧಾವಿಸುವಂತೆ ಸೂಚಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರು ರಾಮನಗರ ಸ್ವಚ್ಛ ಮಾಡುವುದಾಗಿ ಹೇಳಿದ್ದರು. ಈಗ ಅವರಿಗೆ ಅಂತಹ ಅವಕಾಶ ಒದಗಿ ಬಂದಿದೆ’ ಎಂದು ವ್ಯಂಗ್ಯವಾಡಿದರು.

‘ಮುಖ್ಯಮಂತ್ರಿ, ಸಚಿವರು ಸ್ಥಳಕ್ಕೆ ಭೇಟಿ ನೀಡಿದ್ದು ಶ್ಲಾಘನೀಯ ಕಾರ್ಯ. ಪ್ರವಾಹದ ಗಂಭೀರತೆಯನ್ನು ಅರಿತುಕೊಂಡಿದ್ದರೆ ಯುದ್ಧೋಪಾದಿಯಲ್ಲಿ ಪರಿಹಾರ ಕೈಗೊಳ್ಳಬೇಕಾಗಿತ್ತು. ಆದರೆ, ನಿರೀಕ್ಷಿತ ಮಟ್ಟದಲ್ಲಿ ನಡೆಯಲಿಲ್ಲ. ಹಾಗಿದ್ದರೆ, ಸರ್ಕಾರ ಸ್ಪಂದಿಸಿರುವುದು ಕೇವಲ ತೋರಿಕೆಯ ಅಥವಾ ಬೂಟಾಟಿಕೆಯೇ’ ಎಂದು ಪ್ರಶ್ನಿಸಿದರು.

‘ಪರಿಹಾರ ನೀಡುವಲ್ಲಿ ಏನೂ ತಪ್ಪುಗಳು ನಡೆದಿಲ್ಲ. ಏಕೆಂದರೆ, ಯಾವುದೇ ಕೆಲಸಗಳೇ ನಡೆದಿಲ್ಲ. ನೋ ವರ್ಕ್, ನೋ ಮಿಸ್ಟೇಕ್. ಕೃಷಿಕರಿಗೆ ಈ ಬಾರಿ ಬಿತ್ತನೆಗೂ ಅವಕಾಶ ಇಲ್ಲದಂತಾಗಿದೆ. ರೈತರ ಬದುಕು ಸಹ ಸಂಕಷ್ಟದಲ್ಲಿದೆ. ಸಹಕಾರ ಸಂಘಗಳಿಂದ ಸಂತ್ರಸ್ತರಿಗೆ ಲಾಭಾಂಶದಲ್ಲಿ ನೆರವು ಒದಗಿಸಲು ಸರ್ಕಾರ ಅವಕಾಶ ನೀಡಬೇಕು. ಇದಕ್ಕೂ ಸರ್ಕಾರದ ಅನುಮತಿ ಕೇಳುವ ಪರಿಸ್ಥಿತಿ ಇದೆ’ ಎಂದರು.

ದಾಸರಹಳ್ಳಿ, ಯಲಹಂಕ ವಲಯದಲ್ಲಿ ಮುಂದುವರಿದ ಒತ್ತುವರಿ ತೆರವು ಕಾರ್ಯಾಚರಣೆ

ಮಹದೇವಪುರ: ತೆರವು ಕಾರ್ಯಾಚರಣೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಮಳೆಯಿಂದ ರಾಜಕಾಲುವೆಗಳು ಉಕ್ಕಿಹರಿದು ಜಲಾವೃತವಾಗಿದ್ದ ಮಹದೇಪುರದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಸ್ಥಗಿತಗೊಂಡಿದ್ದು, ಒತ್ತುವರಿ ಸರ್ವೆ, ಮಾರ್ಕಿಂಗ್‌ಗೆ ಇಲ್ಲಿನ ಕೆಲಸ ಸೀಮಿತಗೊಂಡಿದೆ. ದಾಸರಹಳ್ಳಿ ಹಾಗೂ ಯಲಹಂಕ ವಲಯದಲ್ಲಿ ಗುರುವಾರ ಆರಂಭಿಸಿದ್ದ ತೆರವು ಕಾರ್ಯಾಚರಣೆಯನ್ನು ಪೂರ್ಣಗೊಳಿಸಲಾಗಿದೆ. ಯಾವ ಪ್ರದೇಶದಲ್ಲೂ ಹೊಸದಾಗಿ ಕಾರ್ಯಾಚರಣೆಯನ್ನು ಶುಕ್ರವಾರ ಆರಂಭಿಸಿಲ್ಲ.

ದಾಸರಹಳ್ಳಿಯ ನೆಲಗದರನಹಳ್ಳಿ ರಸ್ತೆ ರುಕ್ಮಿಣಿ ನಗರದಲ್ಲಿ ತೆರವು ಕಾರ್ಯಾಚರಣೆಯನ್ನು ಮುಂದುವರಿಸಿ, ಬಾಕಿ ಕೆಲಸ ಪೂರ್ಣಗೊಳಿಸಲಾಗಿದೆ. ಯಲಹಂಕ ವಲಯ ಕುವೆಂಪುನಗರ ವಾರ್ಡ್ ಸಿಂಗಾಪುರ ಲೇಔಟ್‌ನಲ್ಲಿ ಒತ್ತುವರಿಯಾಗಿದ್ದ ಲ್ಯಾಂಡ್ ಮಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ ಬಾಕಿಯಿದ್ದ ಕೆಲಸವನ್ನು ಪೂರ್ಣಗೊಳಿಸಲಾಗಿದೆ.



ಮಹದೇವಪುರ ವಲಯದಲ್ಲಿ ರಾಜಕಾಲುವೆ ಒತ್ತುವರಿ ಪ್ರದೇಶದಲ್ಲಿ ಬಿಬಿಎಂಪಿ, ಕಂದಾಯ ಇಲಾಖೆ ಅಧಿಕಾರಿಗಳು ಶುಕ್ರವಾರ ಮಾರ್ಕಿಂಗ್ ಮಾಡಿದರು

ಸರ್ವೆ ಕಾರ್ಯ ಚುರುಕು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಯ ತಹಶೀಲ್ದಾರ್ ನೇತೃತ್ವದಲ್ಲಿ ವಾಗ್ದೇವಿ ಮುನ್ನೇಕೊಳಾಲು, ಕಸವನಹಳ್ಳಿ ಗ್ರಾಮ, ದೊಡ್ಡಕನ್ನಹಳ್ಳಿಯ ಎ.ಬಿ.ಕೆ ವಿಲೇಜ್, ಪ್ರೆಸ್ಟೀಜ್ ಟೆಕ್ ಪಾರ್ಕ್, ವಿಪ್ರೋ, ಸನ್ನಿ ಬ್ರೂಕ್ಸ್, ಬೆಳತ್ತೂರು ಗ್ರಾಮ, ಸಾದರಮಂಗಲ ಗ್ರಾಮ, ಬಿಲ್ಲಿನೇನಿ ಸಾಸ ಅಪಾರ್ಟ್‌ಮೆಂಟ್ ಒಳ ಪ್ರದೇಶ, ಸಾಯಿ ಗಾರ್ಡನ್ ಬಡಾವಣೆ, ವರ್ತೂರಿನಿಂದ ಶೀಲವಂತನ ಕೆರೆ ಸೇರಿ ಇನ್ನಿತರೆ ಕಡೆ ಸರ್ವೆ ಕಾರ್ಯ ನಡೆಸಿ ಮಾರ್ಕಿಂಗ್ ಮಾಡಲಾಗುತ್ತಿದೆ ಎಂದು ವಲಯ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದ್ದಾರೆ.



ದಾಸರಹಳ್ಳಿಯಲ್ಲಿ ಕಾಲುವೆ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ಸರ್ವೆ ಮಾಡಿ ಮಾರ್ಕ್ ಮಾಡಿದ ನಂತರ ಖಾಲಿ ಜಾಗ, ಕಾಂಪೌಂಡ್ ಇದ್ದಲ್ಲಿ ಕೂಡಲೇ ತೆರವು ಕಾರ್ಯಾಚರಣೆ ನಡೆಸಲಾಗುವುದು. ರಾಜಕಾಲುವೆಗಳ ಮೇಲೆ ಜನರು ವಾಸಿಸುವ ಮನೆಗಳಿದ್ದಲ್ಲಿ ಸಂಬಂಧಪಟ್ಟವರಿಗೆ ಕಂದಾಯ ಇಲಾಖೆಯ ತಹಶಿಲ್ದಾರರಿಂದ ನೋಟಿಸ್ ನೀಡಿ ಮೂರು ದಿನ ಅವಕಾಶ ನೀಡಲಾಗುತ್ತದೆ. ಒತ್ತುವರಿ ತೆರವು ಕಾರ್ಯಾಚರಣೆ ಅದಾದ ಬಳಿಕ ನಿಯಮಾನುಸಾರ ನಡೆಸಲಾಗುವುದು ಎಂದಿದ್ದಾರೆ.

ರಾಜಕಾಲುವೆ: ಬಿಬಿಎಂಪಿಗೆ ಗಡುವು

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿಗೆ ಸಂಬಂಧಿಸಿದಂತೆ ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಉಲ್ಲೇಖಿಸಲಾಗಿರುವ ಅಂಶಗಳ ಕುರಿತು ಮಾಹಿತಿ ಒದಗಿಸಲು ಬಿಬಿಎಂಪಿಗೆ ಹೈಕೋರ್ಟ್ ಇದೇ 19ರ ವರೆಗೆ ಕಾಲಾವಕಾಶ ನೀಡಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರು ಪಾಲಿಕೆ ಪರ ವಕೀಲರಿಗೆ, ‘ರಾಜಕಾಲುವೆ ಒತ್ತುವರಿಗೆ ಸಂಬಂಧಿಸಿದ ಸಿಎಜಿ ವರದಿ ಎಲ್ಲಿ’ ಎಂದು ಪ್ರಶ್ನಿಸಿದರು. ಇದಕ್ಕೆ ಬಿಬಿಎಂಪಿ ವಕೀಲರು, ‘ಸಿಎಜಿ ವರದಿ ಸಲ್ಲಿಕೆಗೆ ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಮುಂದಿನ ವಿಚಾರಣೆ ವೇಳೆಗೆ ರಾಜಕಾಲುವೆ ಒತ್ತುವರಿಗೆ ಸಂಬಂಧಿಸಿದ ಸಿಎಜಿ ವರದಿ ಹಾಗೂ ರಸ್ತೆಗುಂಡಿ ಮುಚ್ಚುವ ಕಾಮಗಾರಿಗೆ ಸಂಬಂಧಿಸಿದ ಸಮಗ್ರ ವರದಿಗಳನ್ನೂ ಸಲ್ಲಿಸಬೇಕು’ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

‘ಕರ್ನಾಟಕ ಭೂಕಂದಾಯ ಮಸೂದೆ 2022’ಕ್ಕೆ ಅಂಗೀಕಾರ

ಬಗರ್‌ಹುಕುಂ: ಅರ್ಜಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜಮೀನಿನ ಸಕ್ರಮಕ್ಕೆ ನಮೂನೆ 57 ರಡಿ ಅರ್ಜಿ ಸಲ್ಲಿಸಲು ಇನ್ನೂ ಒಂದು ವರ್ಷ ಅವಧಿ ವಿಸ್ತರಿಸುವ ಉದ್ದೇಶದ ‘ಕರ್ನಾಟಕ ಭೂಕಂದಾಯ (ತಿದ್ದುಪಡಿ) ಮಸೂದೆ 2022’ ಅನ್ನು ವಿಧಾನಸಭೆ ಶುಕ್ರವಾರ ಅಂಗೀಕರಿಸಿತು.

ರಾಜ್ಯ ಸರ್ಕಾರ ಮೇ 26 ರಂದು ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಿತ್ತು. ಒಂದು ವರ್ಷದ ಅವಧಿ ವಿಸ್ತರಣೆಯ ಕ್ರಮವನ್ನು ವಿಧಾನಸಭೆಯಲ್ಲಿ ಎಲ್ಲ ಪಕ್ಷಗಳ ಸದಸ್ಯರು ಸ್ವಾಗತಿಸಿದರು.

2005 ರ ಜನವರಿ 1 ಕ್ಕೂ ಹಿಂದಿನಿಂದ ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿರುವವರು ಸಕ್ರಮಕ್ಕೆ ಅರ್ಜಿ ಸಲ್ಲಿಸಲು 2018ರ ಮಾರ್ಚ್ 17 ರಿಂದ 2019ರ ಮಾರ್ಚ್ 16 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಆಗ ಲೋಕಸಭೆಯ ಚುನಾವಣೆ ಘೋಷಣೆಯಾಗಿದ್ದರಿಂದಾಗಿ 2019 ರ ಮಾರ್ಚ್ 10 ರಿಂದ ಅರ್ಜಿ ಸ್ವೀಕರಿಸಿರಲಿಲ್ಲ. ಅವಧಿಯನ್ನು ವಿಸ್ತರಿಸುವಂತೆ ಶಾಸಕರೂ ಮತ್ತು ಸಾರ್ವಜನಿಕರು ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಮತ್ತೆ ಅವಧಿ ವಿಸ್ತರಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ವಿವರಿಸಿದರು.

ಗ್ರಾಮಾಂತರ ಮಟ್ಟದಲ್ಲಿ ಎಲ್ಲರಿಗೂ ಈ ಮಾಹಿತಿ ತಿಳಿಸಲು ತಹಶೀಲ್ದಾರ್ ಕಚೇರಿಗಳ ಬಳಿ ಜಾಹೀರಾತು ಫಲಕಗಳನ್ನು ಹಾಕಲಾಗುವುದು ಎಂದು ಅವರು ಭರವಸೆ ನೀಡಿದರು.


ಗೋಮಾಳ ಒತ್ತುವರಿ ಸಕ್ರಮಕ್ಕೆ ಶಾಸಕರ ಪಟ್ಟು

ಬೆಂಗಳೂರು: ಗೋಮಾಳ ಜಮೀನಿನಲ್ಲಿ ರೈತರು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮ ಮಾಡಿಕೊಡಬೇಕು ಎಂದು ಪಕ್ಷ ಭೇದ ಮರೆತ ಶಾಸಕರು ಸರ್ಕಾರವನ್ನು ಒತ್ತಾಯಿಸಿದರು.

ಗೋಮಾಳವನ್ನು ಮಠಗಳಿಗೆ ಮತ್ತು ಸರ್ಕಾರದ ವಿವಿಧ ಉದ್ದೇಶಗಳಿಗಾಗಿ ನೀಡಲಾಗುತ್ತಿದೆ. ಅಕ್ರಮ ಸಾಗುವಳಿ ನಡೆಸುತ್ತಿರುವ ರೈತರಿಗೆ ಏಕೆ ಕೊಡಬಾರದು ಎಂದು ಕಾಂಗ್ರೆಸ್ ಯತೀಂದ್ರ ಸಿದ್ದರಾಮಯ್ಯ, ಪುಟ್ಟರಂಗಶೆಟ್ಟಿ, ಬಿಜೆಪಿಯ ಗೂಳಿಹಟ್ಟಿ ಶೇಖರ್, ಮಾಡಾಳ್ ವಿರೂಪಾಕ್ಷಪ್ಪ, ಕುಮಾರ್ ಬಂಗಾರಪ್ಪ, ಜೆಡಿಎಸ್‌ನ ಕೃಷ್ಣಾರೆಡ್ಡಿ ಒತ್ತಾಯಿಸಿದರು.

ನಗರಪಾಲಿಕೆ ವ್ಯಾಪ್ತಿಯಿಂದ 10 ಕಿ.ಮೀ ದೂರದಲ್ಲಿರುವ ಸರ್ಕಾರಿ ಜಮೀನು ವಿವಿಧ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಳ್ಳುವಾಗ 50– 60 ವರ್ಷಗಳಿಂದ ಉಳುಮೆ ಮಾಡುತ್ತಿರುವ ರೈತರಿಗೆ ಎಕ್ಸ್‌ಗ್ರೇಷಿಯಾ ಅಥವಾ ಸೂಕ್ತ ಪರಿಹಾರ ಕೊಡಬೇಕು. ಪರಿಹಾರ ನೀಡದೇ ಇದ್ದರೆ, ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಗರ್‌ಹುಕುಂ ಸಕ್ರಮ ಮಾಡುವ ಸಂದರ್ಭದಲ್ಲಿ ಶ್ರೀಮಂತರೇ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸುತ್ತಾರೆ. ಇದರಿಂದಾಗಿ ಬಡವರಿಗೆ ಲಾಭ ಸಿಗುತ್ತಿಲ್ಲ. ಬಡವರು ಹೆಚ್ಚು ಭೂಮಿ ಒತ್ತುವರಿ ಮಾಡುವುದಿಲ್ಲ. ಹಣವಂತರೇ ಹೆಚ್ಚು ಪ್ರಮಾಣದಲ್ಲಿ ಒತ್ತುವರಿ ಮಾಡುತ್ತಾರೆ ಇದಕ್ಕೊಂದು ಮಾರ್ಗಸೂಚಿ ರೂಪಿಸುವ ಅಗತ್ಯವಿದೆ. ಇಲ್ಲವಾದರೆ ಶ್ರೀಮಂತರು ಭೂಮಿಯನ್ನು ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ ಎಂದು ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಎಚ್ಚರಿಸಿದರು.



ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಮಸೂದೆಗೆ ಒಪ್ಪಿಗೆ

ಹಣಕಾಸು ಸಂಸ್ಥೆಗಳು ಠೇವಣಿದಾರರಿಗೆ ವಂಚನೆ ಮಾಡಿದ ಅಪರಾಧವನ್ನು ಸಂಜ್ಞೇಯ ಮತ್ತು ಜಾಮೀನುರಹಿತ ಎಂದು ಪರಿಗಣಿಸಲು, ಎಲ್ಲ ಎಫ್‌ಐಆರ್‌ಗಳನ್ನು ವಿಲೀನಗೊಳಿಸಿ ಆರೋಪಿತ ಅಥವಾ ಅದೇ ಹಣಕಾಸು ಸಂಸ್ಥೆಯ ವಿರುದ್ಧ ಒಂದೇ ಪ್ರಕರಣ ದಾಖಲಿಸುವ ಉದ್ದೇಶದಿಂದ ‘ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಮಸೂದೆ’ಗೆ ಒಪ್ಪಿಗೆ ನೀಡಲಾಯಿತು. ಅಲ್ಲದೆ, ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲು ವಿಶೇಷ ನ್ಯಾಯಾಲಯಗಳಿಗೆ ಅಧಿಕಾರವೂ ಸಿಗಲಿದೆ. ಈ ಮಸೂದೆಯು ಸುಗ್ರೀವಾಜ್ಞೆಗೆ ಬದಲಿಯಾಗಿ ತಂದ ಮಸೂದೆಯಾಗಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ವಿವರಿಸಿದರು.

ಮತಾಂತರ ನಿಷೇಧ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ

ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಾಂತರ ನಿಷೇಧ ಮಸೂದೆ ಅಂಗೀಕಾರವಾದರೆ ಸಂವಿಧಾನ ನೀಡಿದ ಧಾರ್ಮಿಕ ಸ್ವಾತಂತ್ರ್ಯ, ಧರ್ಮದ ಆಚರಣೆ, ಪ್ರಚಾರದ ಹಕ್ಕಿಗೆ ಚ್ಯುತಿಯಾಗಲಿದೆ ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಆತಂಕ ವ್ಯಕ್ತಪಡಿಸಿದರು.

ಮತಾಂತರ ನಿಷೇಧ ಮಸೂದೆ ಅಸಂವಿಧಾನಿಕ. ಸಂವಿಧಾನ ಪರಿಚ್ಛೇದ 25ರಿಂದ 28ರವರೆಗಿನ ಧರ್ಮದ ಆಚರಣೆ ಮತ್ತು ಪ್ರಚಾರದ ಹಕ್ಕಿಗೆ ವಿರುದ್ಧವಾಗಿದೆ. ‘ಈಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಆಮಿಷ, ಒತ್ತಾಯ, ವಂಚನೆಗಳ ಮೂಲಕ ಮತಾಂತರಗಳು ಹೆಚ್ಚಾಗಿವೆ. ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಮಾಡಿವೆ. ಇಂತಹ ಮತಾಂತರ ತಡೆಗಟ್ಟಲು, ಮತಾಂತರಿಗಳನ್ನು ಶಿಕ್ಷಿಸಲು ರಾಜ್ಯದಲ್ಲಿ ಯಾವ ಶಾಸನವೂ ಇಲ್ಲ. ಹಾಗಾಗಿ, ಹೊಸ ಕಾಯ್ದೆ ರೂಪಿಸಲಾಗುತ್ತಿದೆ’ ಎಂದು ಮಸೂದೆಯ ಉದ್ದೇಶದಲ್ಲಿ ವಿವರಿಸಿದ್ದಾರೆ. ಆದರೆ, ಬಲವಂತದ ಮತಾಂತರ ಪ್ರಕರಣದ ಸಂಖ್ಯೆಯನ್ನೇ ನಮೂದಿಸಿಲ್ಲ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಹೊಸದುರ್ಗದಲ್ಲಿ ತಮ್ಮ ತಾಯಿಯನ್ನು ಒತ್ತಾಯ ಪೂರ್ವಕವಾಗಿ ಮತಾತಂತರ ಮಾಡಲಾಗಿದೆ ಎಂದು ಶಾಸಕ ಗೂಳಿಹಟ್ಟಿ ಶೇಖರ್ ಹೇಳಿಕೆ ನೀಡಿದ್ದರು. ಆದರೆ, ಆರೋಪ ನಿರಾಕರಿಸಿದ್ದ ತಹಶೀಲ್ದಾರ್ ಅವರನ್ನೇ ಸರ್ಕಾರ ವರ್ಗಾವಣೆ ಮಾಡಿತು. 6 ತಿಂಗಳ ಹಿಂದೆ ಗೋವಿಂದ ಕಾರಜೋಳ ಅವರು ಮತಾಂತರಗೊಂಡವರ ಮಾಹಿತಿ ಇಲ್ಲ ಎಂದು ಹೇಳಿಕೆ ನೀಡಿದ್ದರು. ಮಸೂದೆ ರಚನೆಗೆ ಸರ್ಕಾರ ನೀಡುತ್ತಿರುವ ಸಮರ್ಥನೆಯ ಕುರಿತು ಸಂಶಯವಿದೆ’ ಎಂದರು.

ಈ ಕಾಯ್ದೆ ಗುಜರಾತಿನಲ್ಲಿ ಜಾರಿಯಲ್ಲಿದೆ. ಅದನ್ನೇ ಇಲ್ಲಿ ಹಾಕಿದ್ದೇವೆ ಎಂದು ಕಾನೂನು ಸಚಿವರು ಹೇಳಿದ್ದಾರೆ. ಗುಜರಾತ್‌ನ ಈ ಕಾಯ್ದೆ ಅಂತರ್‌ಜಾತಿ ವಿವಾಹಕ್ಕೆ ಅಡ್ಡಿಯಾಗಲಿದೆ ಎಂದು ಕೋರ್ಟ್ 2021ರಲ್ಲಿ ತಡೆಯಾಜ್ಞೆ ನೀಡಿದೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ’ ಎಂದು ಪ್ರಶ್ನಿಸಿದರು.

‘ಮತಾಂತರ ನಿಷೇಧ: ಜಾತಿ ವ್ಯವಸ್ಥೆ ರಕ್ಷಣೆಯ ತಂತ್ರ’

ಬೆಂಗಳೂರು: ‘ಜಾತಿ ವ್ಯವಸ್ಥೆಯನ್ನು ಕಾಪಿಟ್ಟುಕೊಳ್ಳುವ ತಂತ್ರದ ಭಾಗವಾಗಿ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರಲಾಗುತ್ತಿದೆ’ ಎಂದು ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್.ಭಾಸ್ಕರ್ ಪ್ರಸಾದ್ ಹೇಳಿದ್ದಾರೆ.

‘ಜಾತಿ ಹೆಸರಿನಲ್ಲಿ ಕ್ರೌರ್ಯ ಮೆರೆಯುವುದು ಮನುವಾದಿಗಳ ಹಕ್ಕು ಎಂಬುದನ್ನು ಘೋಷಿಸಿಕೊಳ್ಳುವುದೇ ಈ ಕಾಯ್ದೆಯ ಉದ್ದೇಶ. ಇದು ಸಂವಿಧಾನದ ಪರಿಚ್ಛೇದ 25ರ ಸ್ಪಷ್ಟ ಉಲ್ಲಂಘನೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೇರಲ್ಪಟ್ಟಿರುವ ಧರ್ಮದಿಂದ ಬೇರ್ಪಟ್ಟು ಬೇರೊಂದು ಧರ್ಮ ಸ್ವೀಕರಿಸುವುದು ಜಗತ್ತಿನಾದ್ಯಂತ ನಡೆದುಕೊಂಡು ಬಂದಿದೆ. ಅದರಲ್ಲೂ ಜಾತಿ ವ್ಯವಸ್ಥೆ ರೀತಿಯ ನೀಚ ಪದ್ಧತಿ ಇರುವ ಧರ್ಮದಿಂದ ದಲಿತರು, ಅದರಲ್ಲೂ ಅಸ್ಪೃಶ್ಯರು ಹೊರ ನಡೆಯಬೇಕು ಎನ್ನುವುದು ಅಂಬೇಡ್ಕರ್ ಅವರ ಆಶಯ. ಅದು ನಮ್ಮ ಸಂವಿಧಾನಬದ್ಧ ಹಕ್ಕು ಕೂಡ. ಆದರೆ, ಮನುವಾದಿ ಬಿಜೆಪಿ ಸರ್ಕಾರ ಈ ಹಕ್ಕನ್ನು ದಲಿತರಿಂದ ಕಸಿಯುವ ಉದ್ದೇಶದಿಂದ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತಂದಿದೆ’ ಎಂದು ಆರೋಪಿಸಿದ್ದಾರೆ.

‘ಬಲವಂತದ ಮತಾಂತರ ನಡೆಯುತ್ತಿದೆ ಎಂದು ಹೇಳಲು ಸರ್ಕಾರದ ಬಳಿ ಯಾವ ಅಂಕಿ–ಅಂಶವೂ ಇಲ್ಲ. ವೀರಾವೇಶದಿಂದ ಮಾತನಾಡಿ ಕಾಯ್ದೆಯ ಪ್ರತಿಗಳನ್ನು ಸದನದಲ್ಲಿ ಹರಿದು ಹಾಕಿ ಕಾಂಗ್ರೆಸ್ ಕೂಡ ನಾಟಕ ವಾಡುತ್ತಿದೆ. ಈ ಕಾಯ್ದೆಯ ಹುಟ್ಟಿಗೆ ಕಾಂಗ್ರೆಸ್ ಪಕ್ಷವೇ ಕಾರಣ. 2013ರಲ್ಲಿ ಈ ಕಾಯ್ದೆಗೆ ಅಡಿಗಲ್ಲು ಹಾಕಿದ್ದೇ ಕಾಂಗ್ರೆಸ್’ ಎಂದು ಹೇಳಿದರು.

‘ಈ ಕಾಯ್ದೆಗೆ ನ್ಯಾಯಾಲಯದಲ್ಲಿ ಹಿನ್ನಡೆ ಆಗುವುದು ಸರ್ಕಾರಕ್ಕೂ ಗೊತ್ತಿದೆ. ಆದರೆ, ಹಿಂದುತ್ವದ ಹೆಸರಿನಲ್ಲಿ ಮತಗಳನ್ನು ಸೆಳೆಯುವ ಉದ್ದೇಶದಿಂದ ಈ ಕಾಯ್ದೆಗೆ ಜಾರಿಗೆ ತರಲಾಗುತ್ತಿದೆ’ ಎಂದು ಭಾಸ್ಕರ್ ಪ್ರಸಾದ್ ದೂರಿದರು.

ಮತಾಂತರ ನಿಷೇಧ: ಕಾನೂನಿನ ಮೊರೆಗೆ ಚಿಂತನೆ

ಬೆಂಗಳೂರು: ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ (ಮತಾಂತರ ನಿಷೇಧ) ಪ್ರಶ್ನಿಸಿ ಕಾನೂನಿನ ಮೊರೆ ಹೋಗಲು ಕ್ರೈಸ್ತ ಸಮುದಾಯ ಆಲೋಚನೆ ನಡೆಸಿದೆ.

ಎರಡೂ ಸದನಗಳಲ್ಲಿ ಒಪ್ಪಿಗೆ ದೊರೆತಿರುವುದು ರಾಜ್ಯದ ಕ್ರೈಸ್ತ ಸಮುದಾಯಕ್ಕೆ ಅತೀವ ನೋವು ತರಿಸಿದೆ. ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ನಿಸ್ವಾರ್ಥ ಸೇವೆಗೆ ಬಗೆದ ದ್ರೋಹ ಇದಾಗಿದೆ ಎಂದು ಬೆಂಗಳೂರು ಆರ್ಚ್ ಡಯೋಸಿಸ್ ಮಾಧ್ಯಮ ವಕ್ತಾರ ಜೆ.ಎ.ಕಾಂತರಾಜ್ ತಿಳಿಸಿದ್ದಾರೆ.

ಮೆಟ್ರೊ ಪಾಲಿಟನ್ ಆರ್ಚ್ ಬಿಷಪ್ ಪೀಟರ್ ಮಚಾದೊ, ‘ರಾಜ್ಯದ ಎಲ್ಲಾ ಬಿಷಪ್‌ಗಳು ಮತ್ತು ಕ್ರಿಶ್ಚಿಯನ್ ನಾಯಕರು ಈ ಬಗ್ಗೆ ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಿದ್ದಾರೆ. ಮಸೂದೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇದೆ. ಆದ್ದರಿಂದ ಹೆಚ್ಚಿನ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಮರಳು ತೆಗೆದರಷ್ಟೇ ನದಿ ಉಳಿವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನದಿಗಳ ಪಾತ್ರದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಬೇಕು. ಮರಳು ತೆಗೆದರೆ ಮಾತ್ರ ನದಿಗಳಲ್ಲಿ ನೀರು ಸರಾಗವಾಗಿ ಹರಿಯುತ್ತದೆ. ಇಲ್ಲವಾದರೆ ಹೂಳು ತುಂಬಿಕೊಳ್ಳುತ್ತದೆ’ ಎಂದು ಜೆಡಿಎಸ್ ಶಾಸಕ ಕೆ.ಅನ್ನದಾನಿ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ‘ನದಿ ನೀರಿನಲ್ಲಿ ಮರಳು ತೆಗೆಯಬಾರದೆಂದು ಯಾವುದೋ ರಾಜ್ಯಕ್ಕೆ ಸಂಬಂಧಿಸಿದಂತೆ ಸುಪ್ರಿಂಕೋರ್ಟ್ ತೀರ್ಪು ಕೊಟ್ಟರೆ, ನಮ್ಮ ರಾಜ್ಯದಲ್ಲಿ ಏಕೆ ಅನ್ವಯ ಮಾಡಬೇಕು’ ಎಂದು ಪ್ರಶ್ನಿಸಿದರು.

‘ನದಿಯಿಂದ ಕಾಲಕಾಲಕ್ಕೆ ಮರಳು ತೆಗೆದರೆ ನದಿಗೆ ಹಾನಿ ಆಗುವುದಿಲ್ಲ. ಮರಳು ತೆಗೆಯದೇ ಇದ್ದರೆ ನೀರು ಸರಾಗವಾಗಿ ಹರಿಯಲಾಗದೇ ಪ್ರವಾಹ ಬರುತ್ತದೆ. ಯಾರದ್ದೋ ಸಲಹೆಗಳನ್ನು ಕೇಳಿ ಮರಳು ಗಣಿಗಾರಿಕೆಗೆ ಅವಕಾಶ ನೀಡದಿರುವುದು ಸರಿಯಲ್ಲ’ ಎಂದೂ ಅನ್ನದಾನಿ ಹೇಳಿದರು.

‘ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ ಸರ್ಕಾರಕ್ಕೂ ಹೆಚ್ಚು ಆದಾಯ ಬರುತ್ತದೆ. ಇಲ್ಲವಾದರೆ ಅನಧಿಕೃತವಾಗಿ ಗಣಿಗಾರಿಕೆ ನಡೆಸುತ್ತಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ನದಿಯಿಂದ ಮರಳು ಗಣಿಗಾರಿಕೆ ಮಾಡುವುದನ್ನು ನಿಷೇಧಿಸಲಾಗಿದೆ. ಈ ರೀತಿ ಗಣಿಗಾರಿಕೆ ಮಾಡಿದರೆ ನದಿಯ ಅಸ್ತಿತ್ವಕ್ಕೇ ತೊಂದರೆ ಆಗುತ್ತದೆ ಎಂದು ಪರಿಸರ ಮತ್ತು ಅರಣ್ಯ ಇಲಾಖೆ ಹೇಳಿದೆ. ಇದಕ್ಕಾಗಿ ಕೆಲವು ಕಡೆಗಳಲ್ಲಿ ಮಾತ್ರ ಮರಳು ಗಣಿಗಾರಿಕೆಗೆ ಬ್ಲಾಕ್‌ಗಳನ್ನು ಗುರುತಿಸಲಾಗುತ್ತದೆ. ಅಲ್ಲಿಂದ ಮರಳನ್ನು ತೆಗೆಯಬಹುದು’ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ಆಸ್ಪತ್ರೆಗೆ ಭೇಟಿ ನೀಡಿದ್ದ ಡಾ.ಸ್ಮಿತಾ ನೇತೃತ್ವದ ಸಮಿತಿ

ವಿಮ್ಸ್ ವೈದ್ಯರು, ಸಿಬ್ಬಂದಿ ಸಮಗ್ರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಇಲ್ಲಿನ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ವಿಮ್ಸ್) ತೀವ್ರ ನಿಗಾ ಘಟಕದಲ್ಲಿ (ಐಸಿಯು) ವಿದ್ಯುತ್ ಸ್ಥಗಿತಗೊಂಡು ಸಂಭವಿಸಿದೆ ಎನ್ನಲಾದ ಸಾವುಗಳ ಕುರಿತು ಬೆಂಗಳೂರು ಬಿಎಂಸಿಯ ಪ್ರಾಧ್ಯಾಪಕಿ ಡಾ.ಸ್ಮಿತಾ ನೇತೃತ್ವದ ಸಮಿತಿ ಶುಕ್ರವಾರ ಸಮಗ್ರ ವಿಚಾರಣೆ ನಡೆಸಿತು.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಜಂಟಿ ನಿರ್ದೇಶಕ ಡಾ.ಸಿದ್ದಿಕಿ ಅಹಮದ್, ಬಿಎಂಸಿ ಮತ್ತು ಆರ್‌ಐ ಜನರಲ್ ಮೆಡಿಸಿನ್ ವಿಭಾಗದ ಪ್ರಾಧ್ಯಾಪಕ ಡಾ.ದಿವಾಕರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಯೋಗೇಶ್ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಆಡಳಿತಾಧಿಕಾರಿ ಉಮಾ ಕೆ.ಎ. ಸಮಿತಿಯಲ್ಲಿದ್ದಾರೆ.

ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ವಿಮ್ಸ್ ನಿರ್ದೇಶಕ ಡಾ.ಗಂಗಾಧರಗೌಡ ಅವರ ಕಚೇರಿಗೆ ಆಗಮಿಸಿ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು. ವಿಮ್ಸ್ ವೈದ್ಯಕೀಯ ಅಧೀಕ್ಷಕ ಯೋಗೇಶ್, ಟ್ರಾಮಾ ಕೇರ್ ಅಧೀಕ್ಷಕ ಶಿವು ನಾಯಕ್, ಆರ್‌ಎಂಒ ಖಾಜಾ ಮೊಹಿದ್ದೀನ್, ನರ್ಸಿಂಗ್ ಸೂಪರಿಂಟೆಂಡೆಂಟ್ ನಾಗರತ್ನ, ಮೆಡಿಸಿನ್ ವಿಭಾಗದ ಡಾ. ಮಲ್ಲಿಕಾರ್ಜುನರೆಡ್ಡಿ ಸೇರಿ ವಿವಿಧ ವೈದ್ಯಾಧಿಕಾರಿಗಳ ವಿಚಾರಣೆ ನಡೆಸಿದರು.

> **ವಿಮ್ಸ್‌ನಲ್ಲಿ ಸಂಭವಿಸಿದ ಸಾವುಗಳಿಗೆ ಕಾರಣ ಪತ್ತೆ ಹಚ್ಚಲು ಬಂದಿದ್ದೇವೆ.ಆದಷ್ಟು ಶೀಘ್ರವಾಗಿ ವರದಿ ಕೊಡಲಾಗುವುದು**
>
> **ಡಾ. ಸ್ಮಿತಾ,** ವಿಚಾರಣಾ ಸಮಿತಿ ಅಧ್ಯಕ್ಷೆ

ಆ ನಂತರ ಎಂಐಸಿಯು, ಆರ್‌ಐಸಿಯು ವಿಭಾಗಕ್ಕೆ ತೆರಳಿ ವಿದ್ಯುತ್ ಪೂರೈಕೆ ಸ್ಥಿತಿಗತಿ ಪರಿಶೀಲಿಸಿದರು. ವಿದ್ಯುತ್ ವಾಹಕಗಳ ತಪಾಸಣೆ ಮಾಡಿದರು. ‘ಭೂಮಿಯೊಳಗೆ ಅಳವಡಿಸಿದ್ದ ಕೇಬಲ್ ಸ್ಫೋಟಿಸಿದ ಸದ್ದು ಕೇಳಿತೆ? ಸದ್ದು ಕೇಳಿಸಿಕೊಂಡವರು ಯಾರು? ಈ ವಿಷಯವನ್ನು ಯಾರ ಗಮನಕ್ಕೆ ತರಲಾಯಿತು?’ ಎಂಬ ಪ್ರಶ್ನೆಗಳನ್ನು ಕೇಳಿದರು.

ಜಂಕ್ಷನ್ ಬಾಕ್ಸ್‌ಗಳನ್ನು ತೆರೆದು ಸಿ.ಟಿ ಸ್ಕ್ಯಾನ್ ಉಪಕರಣಕ್ಕೆ ಎಲ್ಲಿಂದ ಸಂಪರ್ಕ ಕಲ್ಪಿಸಲಾಗಿದೆ? ದೀಪಗಳಿಗೆ ಯಾವ ಕೇಬಲ್ ಮೂಲಕ ಸಂಪರ್ಕ ಕೊಡಲಾಗಿದೆ? ಐಸಿಯು ವಿಭಾಗಕ್ಕೆ ಹೋಗಿರುವ ಕೇಬಲ್ ಯಾವುದು? ಎಂಬ ಪ್ರಶ್ನೆಗಳಿಗೆ ಎಲೆಕ್ಟ್ರಿಕಲ್ ವಿಭಾಗದ ಸಿಬ್ಬಂದಿಯಿಂದ ಮಾಹಿತಿ ಪಡೆದರು. ಬಳಿಕ ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿದ್ದ ಐಸಿಯು ವಿಭಾಗಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ತೀವ್ರ ನಿಗಾ ಘಟಕದಲ್ಲಿ ದಾಖಲಾಗಿರುವ ರೋಗಿಗಳಿಂದಲೂ ಮಾಹಿತಿ ಪಡೆದರು. ನರ್ಸಿಂಗ್ ವಿಭಾಗದ ಅಧೀಕ್ಷಕಿ ನಾಗರತ್ನ, ಘಟನೆ ನಡೆದ ವೇಳೆ ಐಸಿಯುನಲ್ಲಿ ಕರ್ತವ್ಯದಲ್ಲಿದ್ದ ವೈದ್ಯರು ಹಾಗೂ ನರ್ಸ್‌ಗಳಿಂದ ಸಮಿತಿ ಮಾಹಿತಿ ಪಡೆಯಿತು. ಪೂರಕ ದಾಖಲೆಗಳನ್ನು ಸಂಗ್ರಹಿಸಿದರು.

ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನದ ಕೊರತೆ: ಸಚಿವೆ ಶೋಭಾ ಕರಂದ್ಲಾಜೆ



ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವೀಕ್ಷಿಸಿದರು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ದೇಶದ ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ ಕೊರತೆ ಇದೆ. ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬೇಕಿದೆ. ಹೆಚ್ಚಿನ ಅವಿಷ್ಕಾರಗಳಿಗೆ ಒತ್ತು ನೀಡಲಾಗುತ್ತಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಮೈದಾನದಲ್ಲಿ ಲಘು ಉದ್ಯೋಗ ಭಾರತಿ ಕರ್ನಾಟಕ ಶಾಖೆ ಹಾಗೂ ಐಎಂಎಸ್ ಫೌಂಡೇಷನ್ ಆಶ್ರಯದಲ್ಲಿ ಆಯೋಜಿಸಿದ್ದ ಮೂರು ದಿನಗಳ ‘ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಶೋ’ ವೀಕ್ಷಿಸಿ ಅವರು ಮಾತನಾಡಿದರು.

‘ಆಧುನಿಕ ಯಂತ್ರೋಪಕರಣ, ತಂತ್ರಜ್ಞಾನದ ಮೂಲಕ ರೈತರನ್ನು ಆತ್ಮನಿರ್ಭರ ಮಾಡಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಯೋಜನೆ ರೂಪಿಸಿದ್ದಾರೆ. ಅದು ಕೇವಲ ಬಾಯಿಮಾತಿನಿಂದಲ್ಲ. ಅದಕ್ಕಾಗಿ ಬಜೆಟ್ ನೀಡಲಾಗಿದೆ. ಆರ್ಥಿಕವಾಗಿ ಕೃಷಿಕರಿಗೆ ನೆರವಾಗಲು ಕೇಂದ್ರ ಸರ್ಕಾರ ಬದ್ಧವಾಗಿದೆ’ ಎಂದರು.

‘ಡ್ರೋನ್ ಮೂಲಕ ಔಷಧಿ ಸಿಂಪಡಣೆ, ಭೂಮಿಯನ್ನು ಅಳತೆ ಮಾಡುವುದು ಸೇರಿ ಕೆಲವು ಪರಿಣಾಮಕಾರಿ ತಂತ್ರಜ್ಞಾನವನ್ನು ಕೃಷಿ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲು ಸರ್ಕಾರ ನಿರ್ಧರಿದೆ' ಎಂದು ಹೇಳಿದರು.

ಲಘು ಉದ್ಯೋಗ ಭಾರತಿ ಕರ್ನಾಟಕ ಶಾಖೆ ಅಧ್ಯಕ್ಷ ಸಚಿನ್ ಸಬ್ನೀಸ್, ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಅಶ್ವಥ್ ನಾರಾಯಣ್ ಹಾಜರಿದ್ದರು.

ಕೆಜಿಎಫ್: ಕೈಗಾರಿಕಾ ಇಲಾಖೆಗೆ ಶೀಘ್ರವೇ ಜಮೀನು ಹಸ್ತಾಂತರ

ಬೆಂಗಳೂರು: ಕೆಜಿಎಫ್‌ನಲ್ಲಿ ಬಿಇಎಂಎಲ್ ಕಾರ್ಖಾನೆಯಿಂದ ಹಿಂದಕ್ಕೆ ಪಡೆದಿರುವ 973 ಎಕರೆ ಜಮೀನನ್ನು ಕಂದಾಯ ಇಲಾಖೆಯಿಂದ ಕೈಗಾರಿಕಾ ಇಲಾಖೆಗೆ ಹಸ್ತಾಂತರಿಸಿ ಕೈಗಾರಿಕಾ ಟೌನ್‌ಶಿಪ್ ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಎಂ.ರೂಪಕಲಾ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ವಿಷಯವನ್ನು ಈಗಾಗಲೇ ಬಜೆಟ್ ಭಾಷಣದಲ್ಲೂ ಪ್ರಸ್ತಾಪಿಸಲಾಗಿದೆ. ಬೆಂಗಳೂರಿನಲ್ಲಿ ಈಗ ಭೂಮಿ ಬೆಲೆ ದುಬಾರಿ ಆಗಿದ್ದು, ಕೈಗಾರಿಕೆಗಳಿಗೆ ಸಮಸ್ಯೆ ಆಗಿದೆ. ಕೆಜಿಎಫ್‌ನಲ್ಲಿ ಬೆಂಗಳೂರಿಗೆ ಹತ್ತಿರ ಇರುವುದರಿಂದ ಅಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲವಾಗಲಿದೆ. ಈ ಬಗ್ಗೆ ಶೀಘ್ರವೇ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

‘ಭೂಮಿಯನ್ನು ಹಸ್ತಾಂತರಿಸುವಂತೆ ಕಂದಾಯ ಇಲಾಖೆಗೆ ಪತ್ರ ಬರೆದಿದ್ದೇವೆ. ಹಸ್ತಾಂತರವಾದ ತಕ್ಷಣವೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಟೌನ್‌ಶಿಪ್ ಅಭಿವೃದ್ಧಿಪಡಿಸಲಾಗುವುದು. ಕೆಜಿಎಫ್ ಪ್ರದೇಶದಲ್ಲಿ ಕೈಗಾರಿಕಾ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಇದೆ’ ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದರು.

ಕೆಜಿಎಫ್‌ನಲ್ಲಿ ಚಿನ್ನದ ಗಣಿಗಾರಿಕೆ ನಿಂತ ಬಳಿಕ ಜನರಿಗೆ ಉದ್ಯೋಗ ಇಲ್ಲವಾಗಿದೆ. ಸರ್ಕಾರ ಇಲ್ಲಿ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸಬೇಕು ಎಂದು ಶಾಸಕಿ ರೂಪಕಲಾ ಒತ್ತಾಯಿಸಿದರು.

ಮುಳುಗುತ್ತಿದ್ದ ಹಡಗಿನಿಂದ 19 ಮಂದಿ ರಕ್ಷಣೆ

ಕಾರವಾರ: ಮಹಾರಾಷ್ಟ್ರದ ರತ್ನಗಿರಿ ಕಡಲತೀರದಿಂದ 41 ಮೈಲು ದೂರದಲ್ಲಿ ಮುಳುಗುವ ಹಂತಕ್ಕೆ ತಲುಪಿದ್ದ ಹಡಗಿನಿಂದ, 19 ಮಂದಿ ಸಿಬ್ಬಂದಿಯನ್ನು ಭಾರತೀಯ ಕೋಸ್ಟ್ ಗಾರ್ಡ್ ಸಿಬ್ಬಂದಿ ಶುಕ್ರವಾರ ರಕ್ಷಿಸಿದ್ದಾರೆ.

ಹಡಗು, ಸಂಯುಕ್ತ ಅರಬ್ ರಾಷ್ಟ್ರದ ಖೋರ್ ಫಕ್ಕಾನ್ ಬಂದರಿನಿಂದ ನವ ಮಂಗಳೂರು ಬಂದರಿಗೆ ಡಾಂಬರು ತರುತ್ತಿತ್ತು. ಅದರಲ್ಲಿ 18 ಮಂದಿ ಭಾರತೀಯ ಸಿಬ್ಬಂದಿ ಹಾಗೂ ಒಬ್ಬರು ಇಥಿಯೋಪಿಯಾ ದೇಶದ ಮಾಸ್ಟರ್ ಇದ್ದರು. ಹಡಗಿನ ತಳಭಾಗದಲ್ಲಿರುವ ಟ್ಯಾಂಕ್‌ನ ಒಳಗೆ (ಬಾಲಸ್ಟ್ ಟ್ಯಾಂಕ್) ನೀರು ಸೇರಿಕೊಂಡು ಅಪಾಯಕ್ಕೀಡಾಗಿತ್ತು. ತಮ್ಮ ರಕ್ಷಣೆಗೆ ಧಾವಿಸುವಂತೆ ಅದರ ಸಿಬ್ಬಂದಿ ಮೊರೆಯಿಟ್ಟಿದ್ದರು.

ಕಲ್ಲು ಕ್ವಾರಿಗಳಲ್ಲಿ ಉತ್ಪತ್ತಿಯಾಗುವ ದ್ರವ ಕೆರೆಗೆ ● ಸ್ಥಳೀಯರ ಆತಂಕ

ಕಣ್ಣೂರು ಕೆರೆಯ ಒಡಲಿಗೆ ಕಲುಷಿತ ನೀರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಿಟ್ಟಗಾನಹಳ್ಳಿ ಸಮೀಪ ಕಲ್ಲು ಕ್ವಾರಿಗಳಲ್ಲಿ ಉತ್ಪತ್ತಿಯಾಗುವ ದ್ರವ (ಲಿಚೆಟ್) ಕಣ್ಣೂರು ಕೆರೆಗೆ ಸೇರ್ಪಡೆಗೊಂಡು ಕೆರೆ ನೀರು ಕಲುಷಿತಗೊಳ್ಳುತ್ತಿದೆ. ಜಲಚರಗಳ ಪ್ರಾಣಕ್ಕೆ ಕುತ್ತು ಉಂಟಾಗುತ್ತಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ₹13 ಕೋಟಿ ಅನುದಾನದಲ್ಲಿ ತ್ಯಾಜ್ಯ ಘಟಕಕ್ಕೆ ಹೊಂದಿಕೊಂಡಿರುವ ಕಣ್ಣೂರು ಕೆರೆಯಲ್ಲಿ ಹೂಳು ತೆಗೆದು ಅಭಿವೃದ್ಧಿ ಪಡಿಸಲಾಗಿತ್ತು. ಕೆರೆಗೆ ರಾಸಾಯನಿಕ ಮಿಶ್ರಿತ ಲಿಚೆಟ್ ನೀರು ಸೇರ್ಪಡೆಗೊಂಡು ಕೆರೆ ಮಲಿನವಾಗಿದೆ.



ಕಣ್ಣೂರು ಕೆರೆ ಕಲುಷಿತ ನೀರಿನಿಂದ ಮಲಿನಗೊಂಡಿರುವುದು.

ಘನ ತ್ಯಾಜ್ಯದಿಂದ ಉತ್ಪಾದನೆ ಆಗುವ ಲಿಚೆಟ್ ನೀರನ್ನು ಶುದ್ಧೀಕರಿಸಿ ನಂತರ ಕೆರೆಗೆ ಸೇರ್ಪಡೆಯಾಗದಂತೆ ಪ್ರತ್ಯೇಕ ಕಾಲುವೆಯ ಮೂಲಕ ಬಿಡಬೇಕು. ಅದರೆ, ತ್ಯಾಜ್ಯ ಘಟಕದಲ್ಲಿ ಶುದ್ಧೀಕರಣ ನಡೆಯುತ್ತಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.



ಕಣ್ಣೂರು ಕೆರೆಗೆ ಕಲುಷಿತ ನೀರು ಸೇರುತ್ತಿರುವುದು

’ಕಣ್ಣೂರು, ಹೊಸೂರುಬಂಡೆ, ಕಾಡು ಸೊಣ್ಣಪ್ಪನಹಳ್ಳಿ, ಮಿಟ್ಟಗಾನಹಳ್ಳಿ ಗ್ರಾಮಗಳಲ್ಲಿ ಅಂತರ್ಜಲ ಕಲುಷಿತಗೊಂಡು ಸಾರ್ವಜನಿಕರು ನಾನಾ ಕಾಯಿಲೆಗಳಿಗೆ ತುತ್ತಾಗಿದ್ದಾರೆ. ಗ್ರಾಮ ಪಂಚಾಯಿತಿ ಬಿಬಿಎಂಪಿಗೆ ಪತ್ರ ಬರೆಯಲಾಗಿದೆ. ತಿಂಗಳಲ್ಲಿ ತ್ಯಾಜ್ಯ ವಿಲೇವಾರಿ ನಿಲ್ಲಿಸದೇ ಇದ್ದಲಿ ಸುತ್ತಮುತ್ತಲಿನ ಗ್ರಾಮಸ್ಥರೆಲ್ಲರೂ ಸೇರಿ ತೀವ್ರ ಹೋರಾಟ ನಡೆಸುತ್ತೇವೆ‘ ಎಂದು ಗ್ರಾಮ ಪಂಚಾಯಿತಿ ಸದಸ್ಯ ನಂಜೇಗೌಡ ಎಚ್ಚರಿಕೆ ನೀಡಿದರು.

ಅವೈಜ್ಞಾನಿಕ ತ್ಯಾಜ್ಯ ಘಟಕವನ್ನು ಸ್ಥಗಿತಗೊಳಿಸಿ ಪರಿಸರ ಸಂರಕ್ಷಣೆ ಮಾಡಬೇಕು. ಜನರ ಜೀವನದ ಜೊತೆ ಚೆಲ್ಲಾಟ ಆಡುತ್ತಿರುವ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಸರ್ಕಾರವು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಮಧು ಒತ್ತಾಯಿಸಿದರು.

ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ನಾಳೆ

ಹುಬ್ಬಳ್ಳಿ: ‘ಬೆಂಗಳೂರಿನ ರಾಜ್ಯ ದೇವಾಂಗ ಸಂಘ ಹಾಗೂ ಹುಬ್ಬಳ್ಳಿಯ ದೇವಾಂಗ ಕೇಂದ್ರೀಯ ಸಮಿತಿ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಹಾಗೂ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ನಗರದ ಗೋಕುಲ ರಸ್ತೆಯ ಚವ್ಹಾಣ್ ಗ್ರೀನ್ ಗಾರ್ಡನ್‌ನಲ್ಲಿ ಸೆ. 18ರಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ’ ಎಂದು ಸಮಿತಿ ಅಧ್ಯಕ್ಷ ನಾಗೇಶ ಬಾಪರೆ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರು ರೇಸ್

ತೈಮೂರ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ತೈಮೂರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಪಿರಿಚ್ಯುಯಲ್ ರಾಕ್ 5, ಟರ್ಮರಿಕ್ ಟವರ್ 7, ಝುಕಾಪ 8
2ನೇ ರೇಸ್: ಔಟ್‌ಲ್ಯಾಂಡರ್ 3, ಪವರ್ ಆಫ್ ಬ್ಲೆಸಿಂಗ್ಸ್ 6, ರೆಡ್ ಕಾರ್ನೇಷನ್ 1
3ನೇ ರೇಸ್: ತೈಮೂರ್ 1, ವಿಕ್ಟೋರಿಯಸ್ ಸರ್ಮನ್ 4, ಸನ್‌ರೈಸ್ ರೂಬಿ 5
4ನೇ ರೇಸ್: ಕ್ವೀನ್ ಓ ವಾರ್ 2, ಫ್ಲೇಮಿಂಗ್ ಲಂಬೋರ್ಗಿನಿ 3, ಮಿಸ್ಟಿಕಲ್ ರೋಸ್ 4
5ನೇ ರೇಸ್: ಸೂಪ್ ಆ್ಯಂಡ್ ಸ್ಯಾಂಡ್‌ವಿಚ್ 1, ಪಿಡಾಟೊ 6, ಅಲ್ಮಾಸ್ 2
6ನೇ ರೇಸ್: ಬ್ರೇವ್ ಬ್ಯೂಟಿ 5, ಗಿಮ್ಮಿ 2, ಕೀಫರ್ 7
7ನೇ ರೇಸ್: ಜ್ಯಾಕ್ ಬಾಅರ್ 1, ರೆಮ್ಮಿ ರೆಡ್ 10, ಅನೌಶ್ಕ 8

ಉತ್ತಮ ಬೆಟ್: ಔಟ್‌ಲ್ಯಾಂಡರ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಸದನದಲ್ಲಿ ಕೇಳಿಸಿದ್ದು...

- ಶೇ 40 ಕಮಿಷನ್‌ಗೆ ಸರ್ಕಾರ ಸಾಕ್ಷ್ಯಾಧಾರಗಳನ್ನು ಕೇಳುತ್ತದೆ. ಜೀವಿತಾವಧಿ ತೆರಿಗೆ ವಂಚನೆ ಪ್ರಕರಣದಲ್ಲಿ ಸಾಕ್ಷ್ಯಾಧಾರಗಳಿದ್ದರೂ ತನಿಖೆಗೆ ಮುಂದಾಗುತ್ತಿಲ್ಲ.
  ಸಿ.ಎನ್. ಮಂಜೇಗೌಡ, ಜೆಡಿಎಸ್ ಸದಸ್ಯ
- ಸರ್ಕಾರ ಹೃದಯವಂತಿಕೆ ತೋರಬೇಕು. ಆಗ ಮಾತ್ರ ಸಂಸ್ಥೆಗಳ ಸಂಕಷ್ಟಗಳಿಗೆ ಸ್ಪಂದಿಸಲು ಸಾಧ್ಯ.
  ಎಸ್. ರವಿ, ಕಾಂಗ್ರೆಸ್ ಸದಸ್ಯ
- ಮಾಗಡಿ ತಾಲ್ಲೂಕಿನ ಇರುಳಿಗರ ಸಮುದಾಯದ ಅಭಿವೃದ್ಧಿಗೆ ಕಳೆದ ಮೂರು ವರ್ಷಗಳಿಂದ ಯಾವುದೇ ಕೆಲಸಗಳು ಆಗಿಲ್ಲ. 2017ರಿಂದ 19ರವರೆಗೆ ಮಾತ್ರ ₹3.3 ಕೋಟಿ ನೀಡಲಾಗಿತ್ತು.
  ಬಿ. ಶ್ರೀರಾಮುಲು, ಸಚಿವ

ಮಳೆ ಮತ್ತು ಪ್ರವಾಹದ ಕುರಿತ ಚರ್ಚೆ ವೇಳೆ ಎಚ್‌.ಕೆ.ಪಾಟೀಲ ಒತ್ತಾಯ

‘ಕೃಷಿ ಭೂಮಿಗೂ ಪರಿಹಾರ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಮತ್ತು ಪ್ರವಾಹದಿಂದ ಫಲವತ್ತತೆ ಕಳೆದುಕೊಂಡಿರುವ ಕೃಷಿ ಭೂಮಿಯ ಪುನರ್ ನಿರ್ಮಾಣಕ್ಕೆ ಎಕರೆಗೆ ತಲಾ ₹3 ಲಕ್ಷ ನೀಡುವುದರ ಜತೆಗೆ ಬೆಳೆ ಸಾಲ ಮನ್ನಾ ಮಾಡುವಂತೆ ಕಾಂಗ್ರೆಸ್ ಶಾಸಕ ಎಚ್‌.ಕೆ.ಪಾಟೀಲ ವಿಧಾನಸಭೆಯಲ್ಲಿ ಒತ್ತಾಯಿಸಿದರು.

ಮಳೆ ಮತ್ತು ಪ್ರವಾಹದ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 2 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಭೂಮಿ ಸಮಪಾತಳಿ ಕಳೆದುಕೊಂಡಿದೆ. ಫಲವತ್ತಾದ ಮಣ್ಣು ಕೊಚ್ಚಿ ಹೋಗಿದೆ’ ಎಂದು ಹೇಳಿದರು.

‘ಅಷ್ಟೇ ಅಲ್ಲ, ಬೆಳೆ ವಿಮೆ ಮಾಡಿಸಿದ ರೈತರಿಗೆ ಕ್ಲೈಮ್ ಹಣ ಪಾವತಿಸುವಲ್ಲಿಯೂ ಮೋಸ ಆಗಿದೆ. 2019–20 ರ ಸಾಲಿನಲ್ಲಿ ರಾಜ್ಯದಲ್ಲಿ ರೈತರು ₹2,276 ಕೋಟಿ ಪ್ರೀಮಿಯಂ ಪಾವತಿಸಿದ್ದಾರೆ. ₹1,357 ಕೋಟಿಗೆ ಕ್ಲೈಮ್ ಮಾಡಲಾಗಿದ್ದು, ₹1,215 ಕೋಟಿ ವಿಮೆ ಪಾವತಿಸಲಾಗಿದೆ. ಇದು ವಿಮಾ ಕಂಪನಿಗಳನ್ನು ಶ್ರೀಮಂತಗೊಳಿಸುವ ಯೋಜನೆ’ ಎಂದು ಪಾಟೀಲ ಟೀಕಿಸಿದರು.

‘ನಮ್ಮ ಕ್ಷೇತ್ರದ ಪ್ರಸಿದ್ಧ ಹರ್ತಿ ಬಸವೇಶ್ವರ ದೇವಸ್ಥಾನದ ಕಾಂಪೌಂಡ್ ಗೋಡೆ ಕುಸಿದು ಹೋಗಿದೆ. ಇದರಿಂದ ಜನ ಭಯಭೀತರಾಗಿದ್ದಾರೆ. ಇದರ ದುರಸ್ತಿ ಕಾರ್ಯಕ್ಕೆ ₹2 ಕೋಟಿ ಬಿಡುಗಡೆ ಮಾಡಬೇಕು’ ಎಂದೂ ಅವರು ಒತ್ತಾಯಿಸಿದರು.

ಸಿದ್ದರಾಮಯ್ಯ ಗರಂ: ಎಚ್‌.ಕೆ.ಪಾಟೀಲ ಮಾತು ಮುಗಿಸಿದ ಬಳಿಕ ಕಂದಾಯ ಸಚಿವ ಆರ್.ಅಶೋಕ ಹೊರಗೆ ಹೋದರು. ಅದೇ ಸಂದರ್ಭದಲ್ಲಿ ಒಳಗೆ ಪ್ರವೇಶಿಸಿದ ಸಿದ್ದರಾಮಯ್ಯ ಅವರು ಅಶೋಕ ಇಲ್ಲದಿರುವುದನ್ನು ನೋಡಿ ಗರಂ ಆಗಿ ತರಾಟೆಗೆ ತೆಗೆದುಕೊಂಡರು.

‘ಕಂದಾಯ ಸಚಿವರು ಇಲ್ಲ. ಅಧಿಕಾರಿಗಳೂ ಇಲ್ಲ. ಸರ್ಕಾರಕ್ಕೆ ಗಂಭೀರತೆಯೇ ಇಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು. ಸಭಾಧ್ಯಕ್ಷ ಸ್ಥಾನದಲ್ಲಿದ್ದ ಕುಮಾರ್ ಬಂಗಾರಪ್ಪ ಅವರು, ‘ಅಶೋಕ ಇಷ್ಟು ಹೊತ್ತು ಇದ್ದರು. ಕೆಲಕ್ಷಣ ಹೊರಗೆ ಹೋಗಿದ್ದಾರೆ’ ಎಂದು ಹೇಳಿದರು. ಆದರೆ, ಸಿದ್ದರಾಮಯ್ಯ ಅವರು ಸಮಾಧಾನಗೊಳ್ಳಲಿಲ್ಲ.

ಪ್ರಭಾವಿಗಳ ಮೇಲೂ ಕ್ರಮ ಜರುಗಿಸಿ: ರಾಮಸ್ವಾಮಿ

ಬೆಂಗಳೂರಿನಲ್ಲಿ ರಾಜಕಾಲುವೆ ಒತ್ತುವರಿ ತೆರವುಗೊಳಿಸುವ ಸಂದರ್ಭದಲ್ಲಿ ಪ್ರಭಾವಿಗಳನ್ನು ಬಿಡಬಾರದು. ಯಾವುದೇ ಒತ್ತಡಕ್ಕೆ ಮಣಿಯದೇ ಕ್ರಮ ತೆಗೆದುಕೊಳ್ಳಬೇಕು ಎಂದು ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಒತ್ತಾಯಿಸಿದರು.

ಇತ್ತೀಚಿನ ಮಳೆಯಲ್ಲಿ ಹಳೇ ಬೆಂಗಳೂರು ಭಾಗ ಜಲಾವೃತವಾಗಲಿಲ್ಲ. ಹೊಸ ಬಡಾವಣೆಗಳು ಮಾತ್ರ ಜಲಾವೃತವಾಗಿವೆ. ನೈಸರ್ಗಿಕ ಹರಿವಿಗೆ ಧಕ್ಕೆ ಆಗಿರುವುದೇ ಇದಕ್ಕೆ ಮುಖ್ಯ ಕಾರಣ. ಕೊಳಚೆ ನೀರು ರಾಜಕಾಲುವೆ ಸೇರುತ್ತಿದ್ದು ಈ ನೀರು ಕೆರೆಗೆ ಸೇರುತ್ತಿದೆ ಎಂದರು.

ಒತ್ತುವರಿ ತೆರವು ಕಾರ್ಯವನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬೇಡಿ. ಬಡವರಿಗೊಂದು ನ್ಯಾಯ, ಶ್ರೀಮಂತರಿಗೊಂದು ನ್ಯಾಯ ಬೇಡ. ಮುಲಾಜಿಲ್ಲದೇ ಒತ್ತುವರಿ ತೆರವು ಮಾಡಬೇಕು ಎಂದು ಒತ್ತಾಯಿಸಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ, ‘ಬಡವರು ಶ್ರೀಮಂತರು ಎಂದು ನೋಡದೇ ಒತ್ತುವರಿ ತೆರವು ಮಾಡುತ್ತಿದ್ದೇವೆ. ತಾರತಮ್ಯ ಮಾಡುತ್ತಿಲ್ಲ. ಆದರೆ, ಕಾಂಗ್ರೆಸ್‌ನವರ ಐಟಿ-ಬಿಟಿ ಕಂಪನಿಗಳ ತಂಟೆಗೆ ಹೋಗಬೇಡಿ ಎನ್ನುತ್ತಿದ್ದಾರೆ’ ಎಂದು ದೂರಿದರು.

ಸುದ್ದಿ 2 ನಿಮಿಷ

ರಾಷ್ಟ್ರಪತಿಗೆ ಹುಬ್ಬಳ್ಳಿಯಲ್ಲಿ ಪೌರ ಸನ್ಮಾನ ಸೆ. 26ಕ್ಕೆ

ಹುಬ್ಬಳ್ಳಿ: ‘ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆ.26ರಂದು ಹುಬ್ಬಳ್ಳಿಗೆ ಭೇಟಿ ನೀಡಲಿದ್ದು, ಹುಬ್ಬಳ್ಳಿ–ಧಾರವಾಡ ಜನತೆಯ ಪರವಾಗಿ ಮಹಾನಗರ ಪಾಲಿಕೆ ವತಿಯಿಂದ ಪೌರ ಸನ್ಮಾನ ನೀಡಲಾಗುತ್ತದೆ.

ಐತಿಹಾಸಿಕ ದಸರಾ ಉದ್ಘಾಟನೆಗಾಗಿ ಸಾಂಸ್ಕೃತಿಕ ನಗರಿ ಮೈಸೂರಿಗೆ 26ರಂದು ಭೇಟಿ ನೀಡಲಿರುವ ಅವರು, ಆ ನಂತರ ಹುಬ್ಬಳ್ಳಿಗೆ ಬರಲಿದ್ದಾರೆ.

ಪೌರ ಸನ್ಮಾನ ನಡೆಯಲಿರುವ ಇಲ್ಲಿನ ಜಿಮ್ಖಾನ ಮೈದಾನಕ್ಕೆ ಶುಕ್ರವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮೇಯರ್ ಈರೇಶ ಅಂಚಟಗೇರಿ, ಪೊಲೀಸ್ ಆಯುಕ್ತ ಲಾಭೂ ರಾಮ್ ಭೇಟಿ ನೀಡಿ ಪರಿಶೀಲಿಸಿದರು. ಸಿದ್ಧತೆ ಕುರಿತು ಚರ್ಚಿಸಿದರು.

‘ಪೌರ ಸನ್ಮಾನ ಸ್ವೀಕರಿಸಲು ಕೋರಿ ಪತ್ರ ಬರೆಯಲಾಗಿತ್ತು. ಅದಕ್ಕೆ ಅವರು ಸಮ್ಮತಿಸಿದ್ದಾರೆ. ಇದೇ ಮೊದಲ ಬಾರಿಗೆ ಪಾಲಿಕೆಯಿಂದ ರಾಷ್ಟ್ರಪತಿಗೆ ಪೌರ ಸನ್ಮಾನ ಹಮ್ಮಿಕೊಳ್ಳಲಾಗಿದೆ’ ಎಂದು ಮೇಯರ್ ಈರೇಶ ಅಂಚಟಗೇರಿ ತಿಳಿಸಿದ್ದಾರೆ.



ಸಭಾಪತಿ ಚುನಾವಣೆ ಸದ್ಯಕ್ಕೆ ಇಲ್ಲ?

ಬೆಂಗಳೂರು: ವಿಧಾನಪರಿಷತ್ ಸಭಾಪತಿ ಚುನಾವಣೆ ಇದೇ ಅಧಿವೇಶನದಲ್ಲಿ ನಡೆಯುವ ಸಾಧ್ಯತೆ ಇಲ್ಲ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕಳೆದ ಸಚಿವ ಸಂಪುಟ ಸಭೆಯಲ್ಲಿ ಸಭಾಪತಿ ಚುನಾವಣೆಯ ಬಗ್ಗೆ ಚರ್ಚಿಸಲಾಗಿತ್ತು. ಈ ಸಂಬಂಧ ಅಧಿಸೂಚನೆ ಹೊರಡಿಸುವಂತೆ ರಾಜ್ಯಪಾಲರ ಕಚೇರಿಗೆ ಪತ್ರ ಬರೆಯಬೇಕಿತ್ತು. ಆದರೆ, ಶುಕ್ರವಾರದವರೆಗೂ ಪತ್ರ ಬರೆದಿಲ್ಲ ಎಂದು ಮೂಲಗಳು ಹೇಳಿವೆ.

ಯಾರನ್ನು ಸಭಾಪತಿ ಹುದ್ದೆಗೆ ಆಯ್ಕೆ ಮಾಡಬೇಕು ಎಂಬ ಬಗ್ಗೆ ಪಕ್ಷದಲ್ಲಿ ಗಂಭೀರ ಚರ್ಚೆ ನಡೆದಿಲ್ಲ. ಬಸವರಾಜ ಹೊರಟ್ಟಿ ಮತ್ತು ಆಯನೂರು ಮಂಜುನಾಥ್ ಅವರ ಹೆಸರು ಮುಂಚೂಣಿಯಲ್ಲಿತ್ತು. ಅಭ್ಯರ್ಥಿಗೆ ವರಿಷ್ಠರ ಒಪ್ಪಿಗೆಯೂ ಸಿಗಬೇಕಿದ್ದು, ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಇದೇ 21ಕ್ಕೆ ಚುನಾವಣೆ ನಡೆಯಬೇಕಿತ್ತು. ಈ ಬಾರಿ ಸಾಧ್ಯತೆ ಇಲ್ಲ ಎಂದು ಬಿಜೆಪಿಯ ನಾಯಕರೊಬ್ಬರು ತಿಳಿಸಿದ್ದಾರೆ.



‘ಸಾರಿಗೆ ನೌಕರರ ವೇತನ ಪರಿಷ್ಕರಣೆಗೆ ಬದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಬದ್ಧ. ಈ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಶೀಘ್ರ ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಡಿ.ಎಸ್. ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ನಾಲ್ಕು ವರ್ಷಗಳಿಂದ ನೌಕರರ ವೇತನ ಪರಿಷ್ಕರಣೆಯಾಗಿಲ್ಲ. ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನಾಲ್ಕು ಸಾರಿಗೆ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರನ್ನೊಳಗೊಂಡ ಸಮಿತಿಯು ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ’ ಎಂದು ತಿಳಿಸಿದರು.

‘ಡೀಸೆಲ್ ಮತ್ತು ಇತರ ವಸ್ತುಗಳ ಬೆಲೆ ಹೆಚ್ಚಾಗಿದ್ದರೂ ಪ್ರಯಾಣ ದರ ಹೆಚ್ಚಿಸಿಲ್ಲ. ನಾಲ್ಕು ನಿಗಮಗಳಿಗೆ ಪ್ರತಿ ದಿನ ₹15 ಕೋಟಿ ಡೀಸೆಲ್ ಖರೀದಿಗೆ ವೆಚ್ಚವಾಗುತ್ತದೆ. ವೇತನ ಪರಿಷ್ಕರಿಸಬೇಕು ಎಂದು ಮುಖ್ಯಮಂತ್ರಿ ಸಹ ಹೇಳಿದ್ದಾರೆ. ಆರ್ಥಿಕ ಇಲಾಖೆ ಜತೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಸರ್ಕಾರ ನಾಲ್ಕು ನಿಗಮಗಳಿಗೆ ₹1,200 ಕೋಟಿ ನೆರವು ನೀಡಿದೆ. ಈ ಅನುದಾನವನ್ನು ಇಂಧನ ವೆಚ್ಚ ಮತ್ತು ಭವಿಷ್ಯ ನಿಧಿ ಬಾಕಿ ಪಾವತಿಗಾಗಿ ಒದಗಿಸಲಾಗಿದೆ. ಜತೆಗೆ, 2020–21 ಮತ್ತು 2021–22ನೇ ಸಾಲಿನಲ್ಲಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ’ ಎಂದು ತಿಳಿಸಿದರು.

‘ಸಂಸ್ಥೆಗಳ ನಷ್ಟವನ್ನು ಸರಿದೂಗಿಸುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಬಸ್‌ಗಳ ಕಾರ್ಯಾಚರಣೆ ವೆಚ್ಚವನ್ನು ಕಡಿಮೆ ಮಾಡಲು ಒಬ್ಬರೇ ಸಿಬ್ಬಂದಿ ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ಹೆಚ್ಚಿಸಲಾಗುತ್ತಿದೆ’ ಎಂದು ವಿವರಿಸಿದರು.

13 ಹೊಸ ಶೈತ್ಯಾಗಾರಗಳ ಸ್ಥಾಪನೆ: ಬಿ.ಸಿ. ಪಾಟೀಲ

ಬೆಂಗಳೂರು: ‘ಭೂಚೇತನ ಯೋಜನೆ ಮರುಜಾರಿಗೊಳಿಸುವ ಉದ್ದೇಶ ಇಲ್ಲ’ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ವಿಧಾನ ಪರಿಷತ್‌ನಲ್ಲಿ ಶುಕ್ರವಾರ ತಿಳಿಸಿದರು.



ಜೆಡಿಎಸ್‌ನ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಈ ಯೋಜನೆ ಕೇಂದ್ರ ಸರ್ಕಾರದ್ದು. 2009ರಿಂದ 2018ರವರೆಗೆ ಈ ಯೋಜನೆ ಜಾರಿಯಲ್ಲಿತ್ತು. ಒಟ್ಟು 1.04 ಕೋಟಿ ಫಲಾನುಭವಿಗಳು ಯೋಜನೆ ಪ್ರಯೋಜನ ಪಡೆದಿದ್ದಾರೆ. ಆದರೆ, ಯೋಜನೆಯ ಅವಧಿ ಮುಗಿದಿರುವುದರಿಂದ ಮರುಜಾರಿಯ ಚಿಂತನೆ ಇಲ್ಲ’ ಎಂದು ತಿಳಿಸಿದರು.

‘ಆರ್‌ಐಡಿಎಫ್ ಯೋಜನೆ ಅಡಿಯಲ್ಲಿ ರಾಜ್ಯದ ವಿವಿಧೆಡೆ 2,500 ಟನ್ ಸಾಮರ್ಥ್ಯದ 13 ಶೈತ್ಯಾಗಾರಗಳನ್ನು ಸ್ಥಾಪಿಸಲಾಗುವುದು’ ಎಂದು ಸಚಿವರು ಪ್ರಕಟಿಸಿದರು.

ಬೆಳೆ ವಿಮೆ ಕುರಿತು ಬಿಜೆಪಿಯ ಶಶೀಲ್ ಜಿ.ನಮೋಶಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲೂ ವಿಮಾ ಪ್ರತಿನಿಧಿಗಳಿರುವುದನ್ನು ಕಡ್ಡಾಯಗೊಳಿಸಲಾಗಿದೆ. ರಾಜ್ಯದಲ್ಲಿ ಈ ವರ್ಷ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ 18.50 ಲಕ್ಷ ರೈತರು ಬೆಳೆ ವಿಮೆಗಾಗಿ ನೋಂದಣಿ ಮಾಡಿದ್ದಾರೆ. ಕಳೆದ ವರ್ಷಕ್ಕಿಂತಲೂ ಈ ವರ್ಷ 7 ಲಕ್ಷ ಹೆಚ್ಚು ಮಂದಿ ನೋಂದಣಿ ಮಾಡಿದ್ದಾರೆ. 2022ನೇ ಸಾಲಿನ ಬೆಳೆ ವಿಮೆಯ ಮೊತ್ತವನ್ನು ಡಿಸೆಂಬರ್ ಅಂತ್ಯದ ಒಳಗೆ ಪಾವತಿಸಲಾಗುವುದು’ ಎಂದು ತಿಳಿಸಿದರು.

‘ಸಾಂಕ್ರಾಮಿಕವಲ್ಲದ ಕಾಯಿಲೆ ಪತ್ತೆಗೆ ತಪಾಸಣೆ’

ಸಚಿವ ಡಾ.ಕೆ. ಸುಧಾಕರ್ ಸೂಚನೆ • ಇಂದಿನಿಂದ 15 ದಿನ ವಿಶೇಷ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಸಾಂಕ್ರಾಮಿಕವಲ್ಲದ ಕಾಯಿಲೆಗಳಿಂದಾಗಿ ಹೆಚ್ಚು ಸಾವುಗಳು ಸಂಭವಿಸುತ್ತಿವೆ. ಆದ್ದರಿಂದ ಮಧುಮೇಹ, ಅಧಿಕ ರಕ್ತದೊತ್ತಡ ಮೊದಲಾದ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಪತ್ತೆ ಮಾಡಬೇಕು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನ ಪ್ರಯುಕ್ತ 15 ದಿನಗಳ ಕಾಲ ಜನರ ಆರೋಗ್ಯ ರಕ್ಷಣೆಯ ವಿಶೇಷ ಅಭಿಯಾನವನ್ನು ಇಲಾಖೆ ಹಮ್ಮಿಕೊಂಡಿದೆ. ಈ ಅಭಿಯಾನಕ್ಕೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಬಿಎಂಸಿಆರ್‌ಐ) ಶನಿವಾರ ಚಾಲನೆ ದೊರೆಯಲಿದೆ. ಮುನ್ನಾದಿನವಾದ ಶುಕ್ರವಾರ ಈ ಅಭಿಯಾನದ ಬಗ್ಗೆ ಡಾ.ಕೆ. ಸುಧಾಕರ್ ಅವರು ವಿವಿಧ ಆಸ್ಪತ್ರೆಗಳ ನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದ ಆರೋಗ್ಯಾಧಿಕಾರಿಗಳ ಜತೆಗೆ ಸಭೆ ನಡೆಸಿದರು.

‘ಸಾಂಕ್ರಾಮಿಕವಲ್ಲದ ರೋಗಗಳನ್ನು ಆರೋಗ್ಯ ಉಪಕೇಂದ್ರಗಳ ವ್ಯಾಪ್ತಿಯಲ್ಲಿ ಪತ್ತೆ ಮಾಡಬೇಕು. ಕ್ಯಾನ್ಸರ್ ತಪಾಸಣೆಯನ್ನೂ ನಡೆಸಬೇಕು. ಜಿಲ್ಲಾ ಮಟ್ಟ ಅಥವಾ ತಾಲ್ಲೂಕು ಮಟ್ಟದಲ್ಲಿ ತಪಾಸಣೆ ವ್ಯವಸ್ಥೆ ಮಾಡಿ, ಜನರೇ ಮುಂದೆ ಬಂದು ತಪಾಸಣೆ ಮಾಡಿಸಿಕೊಳ್ಳಲು ಅರಿವು ಮೂಡಿಸಬೇಕು. ಐದು ವರ್ಷಕ್ಕೊಮ್ಮೆ ಇಂತಹ ಕಾರ್ಯಕ್ರಮ ನಡೆಯಬೇಕು. 8, 9 ಹಾಗೂ 10 ವರ್ಷದ ಮಕ್ಕಳಿಗೆ ಕಣ್ಣಿನ ತಪಾಸಣೆ ನಡೆಸಬೇಕು’ ಎಂದು ಸೂಚಿಸಿದರು.

1ಕೋಟಿ ಕಾರ್ಡ್ ಗುರಿ: ‘ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ 35 ಲಕ್ಷ ಜನರಿಗೆ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಇನ್ನೂ 65 ಲಕ್ಷದಷ್ಟು ಕಾರ್ಡ್‌ಗಳನ್ನು ಆದಷ್ಟು ಬೇಗ ನೀಡಿ, 1 ಕೋಟಿಯ ಗುರಿ ತಲುಪಬೇಕು. ದೇಶದಲ್ಲಿಯೇ ಕರ್ನಾಟಕ ಈ ಸಾಧನೆಯನ್ನ ಮೊದಲು ಮಾಡಬೇಕು’ ಎಂದರು.

ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್, ‘ರಾಜ್ಯದಲ್ಲಿ 248 ರಕ್ತನಿಧಿ ಕೇಂದ್ರಗಳಿವೆ. ರಕ್ತ ಸಂಗ್ರಹ ಪ್ರಮಾಣ ಹೆಚ್ಚಿಸಲು ಇವುಗಳಿಗೆ ಸೂಚನೆ ನೀಡಬೇಕು. ಕ್ಷಯ ಮುಕ್ತ ಅಭಿಯಾನದ ಬಗ್ಗೆಯೂ ಅರಿವು ಮೂಡಿಸಬೇಕು’ ಎಂದು ಹೇಳಿದರು.

ಅಭಿಯಾನದಲ್ಲಿನ ಕಾರ್ಯಕ್ರಮಗಳು

ರಕ್ತದಾನ, ಆಯುಷ್ಮಾನ್ ಭಾರತ್ ಕಾರ್ಡ್ ವಿತರಣೆ, ಅಂಗಾಂಗ ದಾನ ಅಭಿಯಾನ, ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ವಿತರಣೆ, ಮಕ್ಕಳ ಆರೋಗ್ಯ ತಪಾಸಣೆ, ಕ್ಯಾನ್ಸರ್ ತಪಾಸಣೆ, ಕಣ್ಣಿನ ತಪಾಸಣೆ ಹಾಗೂ ವೃದ್ಧರು ಮತ್ತು ಶಾಲಾ ಮಕ್ಕಳಿಗೆ ಕನ್ನಡಕ ವಿತರಣೆ, ಮಕ್ಕಳು ಹಾಗೂ ವೃದ್ಧರಿಗೆ ಕಿವಿ ಆರೋಗ್ಯ ತಪಾಸಣೆ, ಗರ್ಭಿಣಿ ಹಾಗೂ ಮಕ್ಕಳಿಗಾಗಿ ಅನೀಮಿಯಾ ತಪಾಸಣೆ. ಸಾಂಕ್ರಾಮಿಕವಲ್ಲದ ರೋಗಗಳು, ಹೃದಯ ಸಂಬಂಧಿ ಹಾಗೂ ಮಧುಮೇಹ ರೋಗಗಳ ತಪಾಸಣೆ, ಆಹಾರ ಸುರಕ್ಷತೆಯಡಿ ಈಟ್ ರೈಟ್ ಅಭಿಯಾನ.

ಜಕ್ಕೂರು: 75 ಎಕರೆ ಖಾಸಗಿಗೆ?

ಒಂದನೇ ಪುಟದಿಂದ

‘ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಕ್ಯಾಡ್ ಸಂಸ್ಥೆ ಯೋಜನಾ ವರದಿ ಸಲ್ಲಿಸಿದೆ. ಈ ಸಂಬಂಧ ನಾಲ್ಕು ಸುತ್ತಿನ ಸಮಾಲೋಚನಾ ಸಭೆಗಳು ನಡೆದಿವೆ. ಪ್ರಸ್ತಾವ ಸರ್ಕಾರದ ಮುಂದಿದೆ. ಅದಕ್ಕೆ ಇನ್ನೂ ಒಪ್ಪಿಗೆ ದೊರೆತಿಲ್ಲ. ಯಾವುದೇ ಜಾಗವನ್ನು ಪಿಪಿಪಿ ಮಾದರಿಯಡಿ ಅಭಿವೃದ್ಧಿಪಡಿಸಬೇಕಾದರೆ ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಒಪ್ಪಿಗೆ ನೀಡಬೇಕು. ಬಳಿಕ ಕಡತವು ಸಚಿವ ಸಂಪುಟದ ಮುಂದೆ ಸಲ್ಲಿಕೆಯಾಗಿ ಅನುಮೋದನೆ ಪಡೆಯಬೇಕು’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ರನ್–ವೇಗೆ ಜಾಗ ಇಲ್ಲ!

ಬಳ್ಳಾರಿ ರಸ್ತೆಯಲ್ಲಿ ಎತ್ತರಿಸಿದ ಮೇಲ್ಸೇತುವೆ ನಿರ್ಮಾಣವಾದ ಬಳಿಕ ರನ್–ವೇ ಉದ್ದ ಕುಗ್ಗಿದ್ದು, ತರಬೇತಿ ವಿಮಾನಗಳ ಹಾರಾಟಕ್ಕೆ ಅಡಚಣೆಯಾಗಿದೆ. ರನ್–ವೇ ಉದ್ದೇಶಕ್ಕೆ ಖಾಸಗಿ ಜಾಗ ಪಡೆಯುವ ಪ್ರಕ್ರಿಯೆಯನ್ನೂ ವೈಮಾನಿಕ ಶಾಲೆ ಕೈಬಿಟ್ಟಿದೆ.

ಮೇಲ್ಸೇತುವೆಯಿಂದಾಗಿ 950 ಮೀಟರ್‌ನಷ್ಟಿದ್ದ ರನ್ ಉದ್ದ 450 ಮೀಟರ್‌ಗೆ ಇಳಿಕೆಯಾಗಿತ್ತು. ಏರೋಡ್ರಂ ಉಳಿಸಿಕೊಳ್ಳುವ ಬಗ್ಗೆ 2014ರಲ್ಲಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಚರ್ಚೆ ನಡೆದಿತ್ತು. ಉಳಿದಿರುವ 450 ಮೀಟರ್ ರನ್ ವೇಯನ್ನು ಪೂರ್ವದ ಕಡೆಗೆ ಮತ್ತೆ 170 ಮೀಟರ್ ಉದ್ದಕ್ಕೆ ವಿಸ್ತರಿಸುವುದಕ್ಕಾಗಿ ಖಾಸಗಿ ಜಮೀನನ್ನು ಸ್ವಾಧೀನಕ್ಕೆ ಪಡೆಯುವ ನಿರ್ಣಯ ಕೈಗೊಳ್ಳಲಾಗಿತ್ತು.

ರನ್–ವೇ ಉದ್ದವನ್ನು ವಿಸ್ತರಿಸಲು 3 ಎಕರೆ 14 ಗುಂಟೆ ಜಮೀನು ಅಗತ್ಯವಿತ್ತು. ಇದಕ್ಕಾಗಿ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಬದಲು, ಏರೋ ಮ್ಯೂಸಿಯಂ ನಿರ್ಮಿಸಲು ಉದ್ದೇಶಿಸಿರುವ ಜಮೀನಿನ ಭಾಗದಲ್ಲಿ ಲಭ್ಯ ಇರುವ ನಿವೇಶನ ವಿನಿಮಯ ಮಾಡಿಕೊಳ್ಳಲು ಶಾಲೆ ಮುಂದಾಗಿತ್ತು. ಆದರೆ, ಖಾಸಗಿಯವರು 10 ಎಕರೆ 23ಗುಂಟೆಯಲ್ಲಿ 3 ಎಕರೆ 14 ಗುಂಟೆ ನೀಡಲಾಗದು. ಪೂರ್ಣ ಜಮೀನು ಪಡೆಯುವುದಾದರೆ ಸಿದ್ಧ ಎಂದು ಪಟ್ಟು ಹಿಡಿದರು. ಈ ವಿಷಯದಲ್ಲಿ ಒಮ್ಮತಕ್ಕೆ ಬಾರದೇ ಇರುವುದರಿಂದ ಇಡೀ ಪ್ರಕ್ರಿಯೆಯನ್ನು ಕೈಬಿಡಲಾಗಿದೆ ಎಂದು 2019ರ ನವೆಂಬರ್ 19ರಂದೇ ಶಾಲೆಯ ನಿರ್ದೇಶಕರು ಆದೇಶ ಹೊರಡಿಸಿದ್ದರು.

ವಿಮಾನ ಹಾರಲು–ಇಳಿಯಲು ಅಗತ್ಯವಿರುವ ರನ್–ವೇ ಇಲ್ಲದೇ ಇರುವಾಗ ವೈಮಾನಿಕ ಶಾಲೆಯ ಉನ್ನತೀಕರಣ ಎಂಬುದೇ ಅಸಾಧ್ಯದ ಸಂಗತಿ. ಅದರ ಹೆಸರಿನಲ್ಲಿ ಖಾಸಗಿಯವರಿಗೆ ಅನುಕೂಲ ಮಾಡಿಕೊಡುವ ಯತ್ನ ನಡೆದಿದೆ ಎಂದೂ ದೂರಲಾಗಿದೆ.

ಸಿಐಡಿ ಭಯ: ಸಹ ಶಿಕ್ಷಕರು ನಾಪತ್ತೆ

ಒಂದನೇ ಪುಟದಿಂದ

‘ಪ್ರಕರಣ ದಾಖಲಾಗುತ್ತಿದ್ದಂತೆ ಈ ಜಿಲ್ಲೆಗಳ ಕೆಲ ಸಹ ಶಿಕ್ಷಕರು, ವೈದ್ಯಕೀಯ ಹಾಗೂ ಇತರೆ ಕಾರಣಗಳನ್ನು ನೀಡಿ ಏಕಾಏಕಿ ಸುದೀರ್ಘ ರಜೆ ಪಡೆದುಕೊಂಡಿದ್ದಾರೆ. ಈ ಪೈಕಿ ಬಹುತೇಕರು ನಾಪತ್ತೆಯಾಗಿದ್ದಾರೆ. ಅವರ್‍ಯಾರೂ ಶಾಲೆಗಳ ಮುಖ್ಯ ಶಿಕ್ಷಕರ ಸಂಪರ್ಕದಲ್ಲಿಲ್ಲ’ ಎಂದು ತಿಳಿಸಿವೆ.

‘ಅಕ್ರಮ ಎಸಗಿರುವ ಸಹ ಶಿಕ್ಷಕರ ಸಂಖ್ಯೆ ಹೆಚ್ಚಿರುವ ಅನುಮಾನವಿದ್ದು, ಪ್ರತಿಯೊಂದು ಶಾಲೆಯ ಸಹ ಶಿಕ್ಷಕರ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಅನುಮಾನಾಸ್ಪದ ಸಹ ಶಿಕ್ಷಕರಿಗೆ ದಾಖಲೆ ಹಾಜರುಪಡಿಸುವಂತೆ ನೋಟಿಸ್ ನೀಡಲು ಸಿದ್ಧತೆ ನಡೆದಿದೆ’ ಎಂದು ತಿಳಿಸಿವೆ.

ಶಿಕ್ಷಣ ಇಲಾಖೆಗೆ ಪತ್ರ: ‘ಜಿಲ್ಲಾವಾರು ನಡೆದಿದ್ದ ನೇಮಕಾತಿಯ ದಾಖಲೆಗಳು ಉಪನಿರ್ದೇಶಕರ ಕಚೇರಿಯಲ್ಲಿವೆ. ಅಂಥ ದಾಖಲೆಗಳ ಸಂಗ್ರಹ ಹಾಗೂ ಪರಿಶೀಲನೆಗಾಗಿ ವಿಶೇಷ ತಂಡ ರಚಿಸಲಾಗಿದೆ. ತನಿಖೆಗೆ ಅಗತ್ಯವಿರುವ ದಾಖಲೆಗಳನ್ನು ಕಾಲಕಾಲಕ್ಕೆ ಒದಗಿಸುವಂತೆಯೂ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಬಂಧಿಸುವ ಭಯ?

ಸಹ ಶಿಕ್ಷಕರ ಹುದ್ದೆಗೆ ಅಕ್ರಮವಾಗಿ ಆಯ್ಕೆಯಾಗಿದ್ದ 12 ಸಹ ಶಿಕ್ಷಕರನ್ನು ಸಿಐಡಿ ಅಧಿಕಾರಿಗಳು ಶಾಲೆಯಲ್ಲಿ ಬಂಧಿಸಿದ್ದರು. ಇದೇ ಕಾರಣಕ್ಕೆ ಕೆಲ ಸಹ ಶಿಕ್ಷಕರು ಶಾಲೆಗೆ ರಜೆ ಹಾಕಿ ತಲೆಮರೆಸಿಕೊಂಡಿದ್ದಾರೆನ್ನುವುದು ಗೊತ್ತಾಗಿದೆ.



ಮಾತುಕತೆ

ಶುಕ್ರವಾರ ವಿಧಾನಪರಿಷತ್ ಕಲಾಪದಲ್ಲಿ ಸಚಿವೆ ಶಶಿಕಲಾ ಜೊಲ್ಲೆ ಅವರು ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಅವರೊಂದಿಗೆ ಮಾತನಾಡುತ್ತಿರುವುದು –ಪ್ರಜಾವಾಣಿ ಚಿತ್ರ

ಆಳ್ವಾಸ್ ನುಡಿಸಿರಿ ದಿನಾಂಕ ಬದಲು

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಯೋಜಿಸುವ 'ಆಳ್ವಾಸ್ ನುಡಿಸಿರಿ' ಕಾರ್ಯಕ್ರಮವನ್ನು ಡಿಸೆಂಬರ್ 21, 22 ಮತ್ತು 23 ರಂದು ನಡೆಸಲು ನಿರ್ಧರಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದ್ದಾರೆ.

ಈ ಮೊದಲು ಡಿ.16ರಿಂದ ಮೂರು ನಡೆಸಲು ನಿರ್ಧರಿಸಲಾಗಿತ್ತು. ನುಡಿಸಿರಿ ದಿನಾಂಕ ಮೊದಲೇ ನಿಗದಿಯಾಗಿತ್ತು. ಇದೇ ವೇಳೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಆಯೋಜಿಸುವ ಅವಕಾಶ ಒದಗಿ ಬಂದಿದೆ. ಈ ಕಾರಣದಿಂದ ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ಆಳ್ವಾಸ್ ನುಡಿಸಿರಿ ಸಮ್ಮೇಳನದ ದಿನಾಂಕ ಬದಲಿಸಲಾಗಿದೆ‘ ಎಂದು ಹೇಳಿದ್ದಾರೆ.

ಅ.17ರಂದು ಕಾವೇರಿ ತೀರ್ಥೋದ್ಭವ

ಮಡಿಕೇರಿ: ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಅಕ್ಟೋಬರ್ 17ರಂದು ಸಂಜೆ 7.21ಕ್ಕೆ ಮೇಷ ಲಗ್ನದಲ್ಲಿ ಕಾವೇರಿ ತೀರ್ಥೋದ್ಭವವಾಗಲಿದೆ.

ಈವರೆಗೆ ಬೆಳಿಗ್ಗೆ ಆಗುತ್ತಿದ್ದ ತೀರ್ಥೋದ್ಭವ ಈ ಬಾರಿ ಸಂಜೆ ಆಗುತ್ತಿರುವುದು ವಿಶೇಷ.

ಸೆ.27ರಿಂದ ಆರಂಭವಾಗುವ ತುಲಾ ಸಂಕ್ರಮಣದ ಧಾರ್ಮಿಕ ಕಾರ್ಯಕ್ರಮಗಳು ಅ.17ರಂದು ಕೊನೆಗೊಳ್ಳಲಿದೆ. ಮಡಿಕೇರಿ ದಸರಾ ಉತ್ಸವ ಸೆ.26ರಂದು ನಾಲ್ಕು ಶಕ್ತಿ ದೇವತೆಗಳ ಕರಗದ ಮೆರವಣಿಗೆ ಮೂಲಕ ಆರಂಭವಾಗಲಿದೆ.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ನೇತೃತ್ವದ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದು ಅನುಮೋದನೆ ನೀಡಲಾಯಿತು.



ಶುಕ್ರವಾರ ವಿಧಾನಪರಿಷತ್ ಕಲಾಪದಲ್ಲಿ ಸಚಿವರಾದ ಶಿವರಾಮ್ ಹೆಬ್ಬಾರ್, ಮುನಿರತ್ನ ಹಾಗೂ ಸಿ.ಸಿ.ಪಾಟೀಲ ಮಾತನಾಡುತ್ತಿರುವುದು –ಪ್ರಜಾವಾಣಿ ಚಿತ್ರ

2013–17ರಲ್ಲೂ ಪಿಎಸ್‌ಐ ನೇಮಕಾತಿ ಅಕ್ರಮ: ಬಿಜೆಪಿ

ಬೆಂಗಳೂರು: 2013ರಲ್ಲಿ ನಡೆದ ಪಿಎಸ್‌ಐ ಮತ್ತು ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ನಡೆದಿದ್ದು, ಇದರ ಬಗ್ಗೆ ಮಾಹಿತಿ ಕಲೆಹಾಕಿದ್ದು, ಅವುಗಳ ತನಿಖೆ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ವಕ್ತಾರ ಹಾಗೂ ಶಾಸಕ ಪಿ.ರಾಜೀವ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ’2013 ರಲ್ಲಿ ಶಿಕ್ಷಕರ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ಪರೀಕ್ಷೆಯನ್ನೇ ಬರೆಯದ ಹಲವರಿಗೆ ನೇಮಕಾತಿ ಆದೇಶ ನೀಡಲಾಗಿದೆ. ಅಂಥವರು ಕರ್ತವ್ಯಕ್ಕೂ ಹಾಜರಾಗಿದ್ದಾರೆ. ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಇದರ ಸುಳಿವು ಪಡೆದು ವರದಿ ಪಡೆದಿದ್ದಾರೆ. ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಿಕ್ಷಕರ ಹುದ್ದೆ ನಿರ್ವಹಿಸುತ್ತಿದ್ದ ಸುಮಾರು 30 ಮಂದಿಯನ್ನು ದಸ್ತಗಿರಿ ಮಾಡಲಾಗಿದೆ‘ ಎಂದು ಹೇಳಿದರು.

‘ಪಿಎಸ್‌ಐ ನೇಮಕಾತಿ ಅಕ್ರಮದ ಕುರಿತು ಪಾರದರ್ಶಕ ತನಿಖೆ ನಡೆಸಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಎಡಿಜಿಪಿ ಹುದ್ದೆಯ ಅಧಿಕಾರಿಯನ್ನು ನಮ್ಮ ಸರ್ಕಾರ ಬಂಧಿಸಿದೆ. ಕಬ್ಬನ್‌ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ದೂರಿನಲ್ಲಿ ಮಂಜುನಾಥ್ ಎಂಬುವರು, 2013 ರಿಂದ 2017 ರವರೆಗೆ ಡಿವೈಎಸ್ಪಿ, ಪಿಎಸ್‌ಐ, ಎಫ್‌ಡಿಸಿ, ಎಸ್‌ಡಿಸಿ ಮತ್ತಿತರ ಹುದ್ದೆಗಳನ್ನು ಕೊಡಿಸುವುದಾಗಿ ಸುಮಾರು ₹18 ಕೋಟಿಯನ್ನು ಸಾರ್ವಜನಿಕರಿಂದ ವಸೂಲಿ ಮಾಡಿದ್ದರು. ಅಕ್ರಮದಲ್ಲಿ ಭಾಗಿಯಾಗಿದ್ದ ಲಕ್ಷ್ಮೀಕಾಂತ್ ಮತ್ತು ಲೋಕೇಶ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕೋರಿದೆ ಎಂದು ತಿಳಿಸಲಾಗಿತ್ತು. ಅಂದಿನ ಕಾಂಗ್ರೆಸ್ ಸರ್ಕಾರ ತನಿಖೆ ಮಾಡಿದ್ದರೆ ಮುಂದಿನ ಹಗರಣವನ್ನು ತಡೆಯಬಹುದಿತ್ತು’ ಎಂದು ರಾಜೀವ್ ದೂರಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, ’2012–13 ನೇ ಸಾಲಿನಲ್ಲಿ ಪ್ರೌಢಶಾಲಾ ಸಹ ಶಿಕ್ಷಕರು, ದೈಹಿಕ ಶಿಕ್ಷಕರು ಸೇರಿ 3,407 ಹುದ್ದೆಗಳು, 2014–15 ರ ಸಾಲಿನಲ್ಲಿ 1,689 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಈ ನೇಮಕಾತಿಯಲ್ಲಿ ಕಡಿಮೆ ಅಂಕ ಪಡೆದವರಿಗೆ ಮತ್ತು ಪರೀಕ್ಷೆ ಬರೆಯದವರನ್ನೂ ಆಯ್ಕೆ ಮಾಡಲಾಗಿತ್ತು. ಈ ಸಂಬಂಧ ಶಿಕ್ಷಣ ಇಲಾಖೆಯ ಒಬ್ಬರು ಮತ್ತು 12 ಶಿಕ್ಷಕರನ್ನು ಬಂಧಿಸಲಾಗಿದೆ‘ ಎಂದರು.

ಫಾಝಿಲ್, ಮಸೂದ್ ಹತ್ಯೆಗಳ ತನಿಖೆ, ಪರಿಹಾರ ವಿತರಣೆಯಲ್ಲಿ ತಾರತಮ್ಯ–ಆರೋಪ

ವಿಧಾನಸೌಧಕ್ಕೆ ಮುತ್ತಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕಾಟಿಪಳ್ಳದ ಮಹಮ್ಮದ್ ಫಾಝಿಲ್ ಹಾಗೂ ಬೆಳ್ಳಾರೆ ಕಳಂಜದ ಮಸೂದ್ ಹತ್ಯೆ ಪ್ರಕರಣಗಳ ತನಿಖೆ ಹಾಗೂ ಈ ಯುವಕರಿಬ್ಬರ ಕುಟುಂಬಗಳಿಗೆ ಪರಿಹಾರ ವಿತರಣೆಯಲ್ಲಿ ಸರ್ಕಾರ ತಾರತಮ್ಯ ಮಾಡಿದೆ ಎಂದು ಆರೋಪಿಸಿ ಮುಸ್ಲಿಂ ಐಕ್ಯತಾ ವೇದಿಕೆ ನೇತೃತ್ವದಲ್ಲಿ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಪ್ರವೀಣ್ ನೆಟ್ಟಾರು, ಮಸೂದ್ ಹಾಗೂ ಮಹಮ್ಮದ್ ಫಾಝಿಲ್ ಹತ್ಯೆಗಳೆಲ್ಲವೂ ಖಂಡನೀಯ. ಪ್ರವೀಣ್ ಹತ್ಯೆ ತನಿಖೆಯನ್ನಷ್ಟೇ ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸಲಾಯಿತು. ಉಳಿದಿಬ್ಬರ ಹತ್ಯೆಗಳ ತನಿಖೆಯನ್ನು ಸ್ಥಳೀಯ ಪೊಲೀಸರಿಗೇ ವಹಿಸಲಾಗಿದೆ. ಈ ಹತ್ಯೆಗಳ ಹಿಂದಿನ ಷಡ್ಯಂತ್ರ ಬಯಲಾಗುವುದು ಬೇಡವೇ’ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರು.

‘ಪ್ರವೀಣ್ ಮನೆಗೆ ತೆರಳಿ ಸಾಂತ್ವನ ಹೇಳಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರ್ಕಾರದಿಂದ ₹25 ಲಕ್ಷ ಪರಿಹಾರವನ್ನೂ ವಿತರಿಸಿದ್ದಾರೆ. ಅಲ್ಲಿಂದ ಕೆಲವೇ ಕಿ.ಮೀ. ದೂರದ ಮಸೂದ್ ಮನೆಗೆ ಭೇಟಿ ನೀಡಲಿಲ್ಲ. ಸಿ.ಎಂ ಮಂಗಳೂರಿನಲ್ಲಿದ್ದಾಗಲೇ ಫಾಝಿಲ್ ಹತ್ಯೆ ನಡೆದಿದ್ದರೂ, ಸಂತ್ರಸ್ತ ಕುಟುಂಬಕ್ಕೆ ಸಾಂತ್ವನವನ್ನೂ ಹೇಳಲಿಲ್ಲ. ಮಸೂದ್ ಹಾಗೂ ಫಾಝಿಲ್ ಕೂಡ ದೇಶದ ಪ್ರಜೆಗಳೇ. ಆದರೂ ಅವರ ಕುಟುಂಬಗಳಿಗೂ ಬಿಡಿಗಾಸಿನ ಪರಿಹಾರ ನೀಡಿಲ್ಲ. ಬೆಂಕಿ ಬಿದ್ದಾಗ ಚಳಿ ಕಾಯಿಸುವ ಕೆಲಸವನ್ನು ಸರ್ಕಾರ ಮಾಡಿದೆ’ ಎಂದು ಆರೋಪಿಸಿದರು.

ಫಾಝಿಲ್ ತಂದೆ ಉಮರ್ ಫಾರೂಕ್, ‘ತನಿಖೆಯಲ್ಲಿ ಸಿಸಿಟಿವಿಯಲ್ಲಿ ಮುಖ ದಾಖಲಾದವರನ್ನು ಮಾತ್ರ ಪೊಲೀಸರು ಬಂಧಿಸಿದ್ದಾರೆ. ಹತ್ಯೆಗೆ ಕಾರು ನೀಡಿದ್ದವರು, ಷಡ್ಯಂತ್ರ ರೂಪಿಸಿದವರನ್ನು ಇನ್ನೂ ಬಂಧಿಸಿಲ್ಲ. ನ್ಯಾಯ ಸಿಗುವ ವಿಶ್ವಾಸ ಉಳಿದಿಲ್ಲ‘ ಎಂದು ಕಣ್ಣೀರಿಟ್ಟರು.

‘ಫಾಝಿಲ್ ಹಾಗೂ ಮಸೂದ್ ಕುಟುಂಬಗಳಿಗೂ ನ್ಯಾಯ ಒದಗಿಸದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ’ ಎಂದು ವೇದಿಕೆಯ ಅಧ್ಯಕ್ಷ ಕೆ.ಅಶ್ರಫ್ ಎಚ್ಚರಿಕೆ ನೀಡಿದರು. ಮುಸ್ಲಿಂ ಸಂಘಟನೆಗಳ ಪ್ರಮುಖರು ಹಾಗೂ ಧರ್ಮಗುರುಗಳು ಮಾತನಾಡಿದರು.



ಮುಸ್ಲಿಂ ಐಕ್ಯತಾ ವೇದಿಕೆ ನೇತೃತ್ವದಲ್ಲಿ ಮಂಗಳೂರಿನಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ಕೋವಿಡ್ ಸಾವು: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಕೋವಿಡ್–19ರ ಕಾರಣದಿಂದಾಗಿ ಸಾವನ್ನಪ್ಪಿರುವ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಕುಟುಂಬದ ಸದಸ್ಯರಿಗೆ ತಲಾ ₹ 30 ಲಕ್ಷ ಪರಿಹಾರ ಒದಗಿಸುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ತಾಹಿರ್ ಹುಸೇನ್ ಮತ್ತು ಅಜೀಜ್ ಪಾಷಾ ಜಾಗೀರದಾರ ಎಂಬುವವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸಾರಿಗೆ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ರಸ್ತೆ ಸಾರಿಗೆ ನಿಗಮ (ಬಿಎಂಟಿಸಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ಮತ್ತು ವಾಯವ್ಯ ರಸ್ತೆ ಸಾರಿಗೆ ನಿಗಮಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲೇನಿದೆ?: ‘ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿಯ ಪ್ರಕಾರ 2020ರ ಮಾರ್ಚ್‌ನಿಂದ 2021ರ ಜೂನ್‌ವರೆಗೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ 351 ನೌಕರರು ಕೋವಿಡ್‌ನಿಂದಾಗಿ ಮೃತಪಟ್ಟಿದ್ದಾರೆ. ಇವರಲ್ಲಿ ಕೇವಲ 11 ನೌಕರರ ಕುಟುಂಬಗಳಿಗೆ ಮಾತ್ರವೇ ಪರಿಹಾರ ನೀಡಲಾಗಿದೆ. ಮೃತ ನೌಕರರ ಕುಟುಂಬದ ಸದಸ್ಯರು ಅಥವಾ ಅವಲಂಬಿತರಿಗೆ ಕೂಡಲೇ ₹ 30 ಲಕ್ಷ ಪರಿಹಾರ ಪಾವತಿಸಲು ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

‘ಬಿಎಂಟಿಸಿಯ 110 ನೌಕರರು 2022ರ ಜನವರಿವರೆಗಿನ ಅವಧಿಯಲ್ಲಿ ಸಾವನ್ನಪ್ಪಿದ್ದರೆ, ಕೇವಲ 4 ನೌಕರರ ಕುಟುಂಬಗಳಿಗೆ ಪರಿಹಾರ ದೊರಕಿದೆ. ಕೆಎಸ್‌ಆರ್‌ಟಿಸಿಯ 97 ನೌಕರರು ಮೃತಪಟ್ಟಿದ್ದು, ಇವರಲ್ಲಿ 7 ನೌಕರರ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ. ಕೆಕೆಆರ್‌ಟಿಸಿಯ 62 ನೌಕರರು ಮೃತಪಟ್ಟಿದ್ದರೆ, ಯಾವ ಮೃತ ನೌಕರನ ಕುಟುಂಬಕ್ಕೂ ಪರಿಹಾರ ದೊರೆತಿಲ್ಲ. ವಾಯವ್ಯ ರಸ್ತೆ ಸಾರಿಗೆ ಸಂಸ್ಥೆಯ 80 ನೌಕರರು ಮೃತಪಟ್ಟಿದ್ದರೆ, ಅವರ ಕುಟುಂಬಗಳಿಗೆ ಪರಿಹಾರ ನೀಡಲು ಹಣವಿಲ್ಲ ಎಂಬ ಕಾರಣ ನೀಡಲಾಗುತ್ತಿದೆ’ ಎಂದು ಆರೋಪಿಸಲಾಗಿದೆ.

ಸಾರಿಗೆ ನೌಕರರು ಕೋವಿಡ್–19ರ ಕಾರಣದಿಂದ ಸಾವನ್ನಪ್ಪಿದ್ದರೆ, ಅವರ ಕುಟುಂಬಕ್ಕೆ ₹ 30 ಲಕ್ಷ ಪರಿಹಾರ ಕಲ್ಪಿಸುವುದಾಗಿ ಇಲಾಖೆ 2021ರ ಫೆ. 10ರಂದು ಸುತ್ತೋಲೆ ಹೊರಡಿಸಿತ್ತು.

'ಕೆಲಸ ಮಾಡದಿದ್ದಲ್ಲಿ ಮುಂದಿನ ಚುನಾವಣೆಯಲ್ಲಿ ವಿಶ್ರಾಂತಿ' ನೀಡುವ ಎಚ್ಚರಿಕೆ

ಯಾತ್ರೆಗೆ ನಾಯಕರ ಅಸಹಕಾರ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ ಒಗ್ಗೂಡಿಸಿ' ಪಾದಯಾತ್ರೆ ಕಾರ್ಯಕ್ರಮದ ಯಶಸ್ಸಿಗೆ ಪಕ್ಷದ ಕೆಲವು ಶಾಸಕರು, ಮುಖಂಡರು ಶ್ರಮಿಸುತ್ತಿಲ್ಲ. ಅಂತಹವರಿಗೆ ವಿಧಾನ ಸಭಾ ಚುನಾವಣೆಯಲ್ಲಿ ವಿಶ್ರಾಂತಿ ನೀಡಬೇಕಾಗುತ್ತದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶುಕ್ರವಾರ ಎಚ್ಚರಿಕೆ ನೀಡಿದರು.

'ಭಾರತ ಒಗ್ಗೂಡಿಸಿ' ಪಾದಯಾತ್ರೆ ಆಯೋಜನೆಗೆ ಸಂಬಂಧಿಸಿದಂತೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಕೆಪಿಸಿಸಿ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ನಮ್ಮಲ್ಲಿ ಕೆಲವು ಶಾಸಕರು ಒಂದು ದಿನ ಬಂದು ಪಾದಯಾತ್ರೆಯ ಕೆಲಸ ಮಾಡುವುದಕ್ಕೂ ಆಗುವುದಿಲ್ಲ ಎಂದರೆ ಏನು ಮಾಡುವುದು' ಎಂದು ಪ್ರಶ್ನಿಸಿದರು.

'ಪ್ರತಿನಿ ಇಬ್ಬರು ಶಾಸಕರು ಪಾದಯಾತ್ರೆಯಲ್ಲಿ ಭಾಗವಹಿಸಬೇಕು. ಅವರೊಂದಿಗೆ ಕ್ಷೇತ್ರದ ಕಾರ್ಯಕರ್ತರು ಪಾಲ್ಗೊಳ್ಳಬೇಕು. ಯಾವ ಶಾಸಕರಿಗೂ ವಿನಾಯಿತಿ ನೀಡಲು ಆಗುವುದಿಲ್ಲ. ಒಂದು ದಿನ ಜನರನ್ನು ಕಳುಹಿಸಿಕೊಡಿ ಎಂದು ಆರ್.ವಿ.ದೇಶಪಾಂಡೆ ಅವರಿಗೆ ಹೇಳಿದ್ದೆ. ಅವರು ಆಗುವುದಿಲ್ಲ ಎಂದರು. ಯಾರು ಮುಂದಿನ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳೋ ಅವರು ಪಾದಯಾತ್ರೆಯಲ್ಲಿ ಭಾಗವಹಿಸಲಿ. ನನ್ನ ಮತ್ತು ಸಿದ್ದರಾಮಯ್ಯ ಅವರ ಫೋಟೋ ಹಾಕದೆ ಕ್ಷೇತ್ರದಲ್ಲಿ ಕೆಲಸ ಮಾಡಿ' ಎಂದರು.

'ಸ್ವಾತಂತ್ರ್ಯ ನಡಿಗೆಗೆ ಕೆಲವರು ಬಂದು ಮುಖ ತೋರಿ ಎಲ್ಲೋ ಹೋಗಿ ಕುಳಿತಿದ್ದರು. ಅದು ನನಗೆ ಗೊತ್ತಿದೆ. ಎಐಸಿಸಿ ನಾಯಕರಿಗೂ ಗೊತ್ತಿದೆ. ಆಗಸ್ಟ್ 3ರಂದು ಸಿದ್ದರಾಮೋತ್ಸವ ಮಾಡಿದರು. ಬಸವರಾಜ ರಾಯರೆಡ್ಡಿ ತಯಾರಿಯಲ್ಲಿದ್ದರು. ಕಾರ್ಯಕ್ರಮಕ್ಕೆ ಜನರು ಬಂದರು. ಆದರೆ, ಸಂಚಾರ ನಿಯಂತ್ರಣ ಸರಿಯಾಗಿ ನಡೆಯಲಿಲ್ಲ. ಅದನ್ನು ನೋಡಿದ ಬಳಿಕ ಸ್ವಾತಂತ್ರ್ಯ ನಡಿಗೆಯಲ್ಲಿ ಸಂಚಾರ ದಟ್ಟಣೆ ಆಗದಂತೆ ನೋಡಿಕೊಂಡೆ. ನಾವು ಮೇಕೆದಾಟು ಪಾದಯಾತ್ರೆ ಮಾಡಿದ್ದು ಸ್ಥಳೀಯ ಹೋರಾಟ ಅಲ್ಲವೇ' ಎಂದು ಅವರು ಕೇಳಿದರು.

ಬದನವಾಳುವಿನಲ್ಲಿ ಗಾಂಧಿ ಜಯಂತಿ: ಪ್ರಾಸ್ತಾವಿಕವಾಗಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ, 'ಅಕ್ಟೋಬರ್ 2ರಂದು ಭಾರತ ಒಗ್ಗೂಡಿಸಿ ಪಾದಯಾತ್ರೆಯು ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಸಾಗಲಿದೆ. ಅಲ್ಲಿಯೇ ಕೆಪಿಸಿಸಿ ವತಿಯಿಂದ ಗಾಂಧಿ ಜಯಂತಿ ಆಚರಿಸಲಾಗುವುದು. ಮಹಾತ್ಮ ಗಾಂಧೀಜಿ ಅವರು 1932ರಲ್ಲಿ ಬದನವಾಳು ಗ್ರಾಮಕ್ಕೆ ಭೇಟಿ ನೀಡಿದ್ದರು' ಎಂದು ಹೇಳಿದರು.

ಮೇಲ್ಮನೆ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಶಾಸಕ ಆರ್.ವಿ. ದೇಶಪಾಂಡೆ, ಬಿ. ರಮಾನಾಥ ರೈ, ಎಚ್. ಆಂಜನೇಯ ಸೇರಿ ಕೆಪಿಸಿಸಿ ಹಲವು ಪದಾಧಿಕಾರಿಗಳು ಸಭೆಯಲ್ಲಿದ್ದರು.

ಡಿಕೆಶಿ ಕೆಲಸಕ್ಕೆ ಮೊಯಿಲಿ ಮೆಚ್ಚುಗೆ

'ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪಕ್ಷದ ಸಂಘಟನೆ ಅತ್ಯುತ್ತಮವಾಗಿ ನಡೆಯುತ್ತಿದೆ. 50 ವರ್ಷಗಳಲ್ಲಿ ಯಾವತ್ತೂ ತಳಮಟ್ಟದಿಂದ ಪಕ್ಷ ಸಂಘಟನೆ ಆಗಿರಲಿಲ್ಲ. ಈಗ ಆ ಕೆಲಸ ಆಗಿದೆ' ಎಂದು ಕೇಂದ್ರದ ಮಾಜಿ ಸಚಿವ ಎಂ.ವೀರಪ್ಪ ಮೊಯಿಲಿ ಶ್ಲಾಘಿಸಿದರು.

'ಕೆಲಸ ಮಾಡುವವರಿಗೆ ಟಿಕೆಟ್'

'ಎಐಸಿಸಿಯಿಂದ ಸುನೀಲ್ ಕನುಗೋಲು ನೇತೃತ್ವದ ಸಮಿತಿ ಬಂದಿದೆ. ಅದು ಎಲ್ಲ ಕ್ಷೇತ್ರಗಳಲ್ಲೂ ವರದಿ ಕಲೆಹಾಕುತ್ತಿದೆ. ಯಾರು? ಏನು? ಕೆಲಸ ಮಾಡುತ್ತಿದ್ದಾರೆ ಎಂದು ಗಮನಿಸುತ್ತಿದೆ. ನಾನು ಏನು ಮಾಡುತ್ತಿದ್ದೇನೆ? ನೀವು ಏನು ಮಾಡುತ್ತಿದ್ದೀರಿ? ಎಂಬುದನ್ನೂ ನೋಡುತ್ತಿದ್ದಾರೆ. ಈ ಬಾರಿ ಹೊಸಬರಿಗೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಾಗಿದೆ' ಎಂದು ಶಿವಕುಮಾರ್ ಹೇಳಿದರು.

ಕೆಪಿಟಿಸಿಎಲ್ ನೇಮಕ ಅಕ್ರಮ ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ, ಎಲೆಕ್ಟ್ರಾನಿಕ್ ಉಪಕರಣ ಬಳಸಿ ಅಕ್ರಮ ಎಸಗಿದ್ದ ಆರೋಪದಡಿ ಮತ್ತೆ ಮೂವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಗೋಕಾಕ ತಾಲ್ಲೂಕು ಅರಭಾವಿಯ ಅಕ್ಷಯ್ ದುಂದಪ್ಪ ಭಂಡಾರಿ (33), ಬೀರಣಗಡ್ಡಿಯ ಬಸವರಾಜ ರುದ್ರಪ್ಪ ದುಂದನಟ್ಟಿ (34) ಹಾಗೂ ರಾಜಾಪುರದ ಶ್ರೀಧರ ಲಕ್ಕಪ್ಪ ಕಟ್ಟಿಕಾರ್ (22) ಬಂಧಿತರು. ಇವರೊಂದಿಗೆ ಬಂಧಿತರ ಸಂಖ್ಯೆ 21ಕ್ಕೆ ಏರಿಕೆಯಾಗಿದೆ.

ಇವರ ಪಾತ್ರವೇನು?: ಬೆಂಗಳೂರಿನ ದೇವಸಂದ್ರದಲ್ಲಿ ಈಚೆಗೆ ಬಂಧಿಸಲಾದ ಎಲೆಕ್ಟ್ರಾನಿಕ್ ಉಪಕರಣ ಹಾಗೂ ಸ್ಮಾರ್ಟ್ ವಾಚ್ ಮಾರಾಟ ಮಾಡುತ್ತಿದ್ದ ಮಹಮ್ಮದ್ ಅಜೀಮುದ್ದೀನ್ ಹಾಗೂ ಅಕ್ಷಯ್ ಮಧ್ಯೆ ಸಂಪರ್ಕವಿತ್ತು. ಅಕ್ಷಯ್ ಬೆಂಗಳೂರಿನಿಂದ ಎಲೆಕ್ಟ್ರಾನಿಕ್ ಪರಿಕರಗಳನ್ನು ತಂದು ಮುಖ್ಯ ಆರೋಪಿ ಸಂಜು ಭಂಡಾರಿಗೆ ಕೊಟ್ಟಿದ್ದ. ಈ ಉಪಕರಣಗಳ ಮಾರಾಟಕ್ಕೆ ನೆರವಾಗಿದ್ದ. ಆರೋಪಿಯಿಂದ ಒಂದು ಮೊಬೈಲ್ ಫೋನ್, 50 ಖಾಲಿ ಎಲೆಕ್ಟ್ರಾನಿಕ್ ಉಪಕರಣಗಳು, 18 ಮಾರಾಟ ಮಾಡಿದ್ದ ಉಪಕರಣಗಳನ್ನು ಜಪ್ತಿ ಮಾಡಲಾಗಿದೆ.

ಆರೋಪಿ ಬಸವರಾಜ ದುಂದನಟ್ಟಿಯು ಹುಕ್ಕೇರಿ ತಾಲ್ಲೂಕಿನ ಶಿರಹಟ್ಟಿಯ ತೋಟದ ಮನೆಯಲ್ಲಿ ಕುಳಿತು ಉತ್ತರಗಳನ್ನು ಡಿವೈಸ್ ಬಳಸಿಕೊಂಡು ಅಭ್ಯರ್ಥಿಗಳಿಗೆ ಹೇಳಿದ್ದ. ಶ್ರೀಧರ್ ಎಂಬ ಆರೋಪಿ ಅಭ್ಯರ್ಥಿಗೆ ಎಲೆಕ್ಟ್ರಾನಿಕ್ ಉಪಕರಣ ಮುಟ್ಟಿಸಿದ್ದ.

ಮಾಸ್ಟರ್ ಕಾರ್ಡ್ ನಂತೆ ವಿನ್ಯಾಸ: ಆರೋಪಿಗಳ ಬಳಿ ಸಿಕ್ಕಿರುವ ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನು ನೋಡಿದ ತಕ್ಷಣ ಅವು ಬ್ಯಾಂಕಿನ ಮಾಸ್ಟರ್ ಕಾರ್ಡ್, ಡೆಬಿಟ್ ಕಾರ್ಡ್‌ನಂತೆಯೇ ಕಾಣಿಸುತ್ತವೆ. ಪ್ರತಿಯೊಂದಕ್ಕೂ ಒಂದೊಂದು ಸಿಮ್ ಇದ್ದು, ಮೊಬೈಲ್ ನಂತೆ ಕೆಲಸ ಮಾಡಬಲ್ಲವು. ಪ್ರತಿ ಯೊಂದಕ್ಕೂ ಒಂದೊಂದು ಪ್ರತ್ಯೇಕ 'ಹಿಯರಿಂಗ್ ಪೀಸ್' ಇದ್ದು ಅದನ್ನು ಕಿವಿಯೊಳಗೆ ಇಟ್ಟುಕೊಂಡರೆ ಸಾಕು; ದೂರದಿಂದ ಉತ್ತರ ರವಾನಿಸಲು ಸುಲಭವಾಗುತ್ತದೆ. ಆರೋಪಿಗಳು ಚಾಣಾಕ್ಷತೆಯಿಂದ ಇವುಗಳನ್ನು ಬಳಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು. ಕೋರ್ಟ್ ಮೂವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ಅವರು ತಿಳಿಸಿದ್ದಾರೆ.



ಸ್ಮಾರ್ಟ್ ಕಾರ್ಡ್‌ಗಳಂತೆ ಮಾರ್ಪಾಡು ಮಾಡಿದ ಎಲೆಕ್ಟ್ರಾನಿಕ್ ಉಪಕರಣಗಳು



ಬಸವರಾಜ ರುದ್ರಪ್ಪ ದುಂದನಟ್ಟಿ



ಅಕ್ಷಯ್ ದುಂದಪ್ಪ ಭಂಡಾರಿ



ಶ್ರೀಧರ್ ಲಕ್ಕಪ್ಪ ಕಟ್ಟಿಕಾರ್

ಜಿಗ್ನೇಶ್ ಸೇರಿ 18 ಮಂದಿಗೆ 6 ತಿಂಗಳು ಜೈಲು ಶಿಕ್ಷೆ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಕಟ್ಟಡಕ್ಕೆ ಡಾ.ಬಿ. ಆರ್. ಅಂಬೇಡ್ಕರ್ ಅವರ ಹೆಸರು ನಾಮಕರಣ ಮಾಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದ ಪ್ರಕರಣದಲ್ಲಿ ಪಕ್ಷೇತರ ಶಾಸಕ ಜಿಗ್ನೇಶ್ ಮೇವಾನಿ ಸೇರಿದಂತೆ 18 ಜನರಿಗೆ ಅಹಮದಾಬಾದ್ ಮೆಟ್ರೊಪಾಲಿಟನ್ ನ್ಯಾಯಾಲಯವು ಶುಕ್ರವಾರ ಆರು ತಿಂಗಳ ಜೈಲುಶಿಕ್ಷೆಯನ್ನು ಘೋಷಿಸಿದೆ

ಮೇವಾನಿ ಮತ್ತು ಇತರರು ಗಲಭೆ, ಕಾನೂನುಬಾಹಿರ ಸಭೆ ಸೇರಿದಂತೆ ಇತರ ಆರೋಪಗಳಲ್ಲಿ ತಪ್ಪಿತಸ್ಥರೆಂದು ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಪಿ.ಎನ್. ಗೋಸ್ವಾಮಿ ತೀರ್ಪು ಪ್ರಕಟಿಸಿದರು.

ನ್ಯಾಯಾಲಯವು ಅವರಿಗೆ ಆರು ತಿಂಗಳ ಜೈಲು ಶಿಕ್ಷೆ ಮತ್ತು ತಲಾ ₹700 ದಂಡ ವಿಧಿಸಿದೆ. ತೀರ್ಪನ್ನು ಪ್ರಶ್ನಿಸಲು ಅಪರಾಧಿಗಳಿಗೆ ಅವಕಾಶ ನೀಡುವ ಆದೇಶವನ್ನು ನ್ಯಾಯಾಲಯವು ಒಂದು ತಿಂಗಳ ಕಾಲ ತಡೆಹಿಡಿಯಿತು. ಅಪರಾಧಿಗಳಲ್ಲಿ ರಾಕೇಶ್ ಮಹೇರಿಯಾ, ಸುಬೋಧ್ ಪರ್ಮಾರ್, ದೀಕ್ಷಿತ್ ಪರ್ಮಾರ್ ಸೇರಿದಂತೆ ಮತ್ತಿತರರು ಇದ್ದಾರೆ.

ಮೇವಾನಿ ಪ್ರತಿಕ್ರಿಯೆ: 'ಗುಜರಾತ್ ಸರ್ಕಾರವು ಎಲ್ಲಾ ಅತ್ಯಾಚಾರಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿದೆ. ಅವರನ್ನು ಅಭಿನಂದಿಸಿ, ಅವರು ಉತ್ತಮ ನಡತೆಯುಳ್ಳವರೆಂದೂ ಹೇಳಿದೆ. ಗುಜರಾತಿನ ಬಿಜೆಪಿ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರ ವಿರುದ್ಧ ಸುಮಾರು 108 ಪ್ರಕರಣಗಳಿವೆ. ಆದರೆ, ಯಾವುದರಲ್ಲೂ ಶಿಕ್ಷೆಯಾಗಿಲ್ಲ. ಕಟ್ಟಡವೊಂದಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರಿಡಬೇಕೆಂದು ರ್‍ಯಾಲಿ ನಡೆಸಿದ ಮಾತ್ರಕ್ಕೆ ಆರು ತಿಂಗಳ ಜೈಲುಶಿಕ್ಷೆ ವಿಧಿಸಲಾಗುತ್ತಿದೆ. ಇದು ಹೋರಾಟಗಾರರ ವಿರುದ್ಧ ದಾಖಲಾಗುತ್ತಿರುವ ಎರಡನೇ ಪ್ರಕರಣ. ನಾವು ಈ ತೀರ್ಪನ್ನು ಸ್ವಾಗತಿಸುತ್ತೇವೆ' ಎಂದು ಮೇವಾನಿ ಪ್ರತಿಕ್ರಿಯಿಸಿದ್ದಾರೆ.

ಬಯಲಾಟ ಅಕಾಡೆಮಿ ಗೌರವ, ವಾರ್ಷಿಕ ಪ್ರಶಸ್ತಿ ಪ್ರಕಟ

ಬಾಗಲಕೋಟೆ: ಕರ್ನಾಟಕ ಬಯಲಾಟ ಅಕಾಡೆಮಿಯು 2021 ಹಾಗೂ 2022 ನೇ ಸಾಲಿನ ಗೌರವ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ಶುಕ್ರವಾರ ಪ್ರಕಟಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಅಜಿತ್ ಬಸಾಪುರ, ಗೌರವ ಪ್ರಶಸ್ತಿ ₹ 50 ಸಾವಿರ ನಗದು, ವಾರ್ಷಿಕ ಪ್ರಶಸ್ತಿ ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಬಾಗಲಕೋಟೆ ಅಥವಾ ಹುಬ್ಬಳ್ಳಿಯಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ' ಎಂದರು.

ಅಕಾಡೆಮಿಗೆ ವಾರ್ಷಿಕ ₹ 30 ಲಕ್ಷ ಅನುದಾನವಿದೆ. ₹1 ಕೋಟಿಗೆ ಹೆಚ್ಚಿಸಬೇಕು ಎಂದು ಅವರು ಮನವಿ ಮಾಡಿದರು.

2021ರ ಗೌರವ ಪ್ರಶಸ್ತಿ: ಅನಸೂಯಾ ವಡ್ಡರ, ಶ್ರೀಕೃಷ್ಣ ಪಾರಿಜಾತ (ವಿಜಯಪುರ), ನರಸಪ್ಪ ಶಿರಗುಪ್ಪಿ, ಬಯಲಾಟ (ಬೆಳಗಾವಿ), ವೀರಪ್ಪ ಬಿಸರಳ್ಳಿ, ದೊಡ್ಡಾಟ (ಕೊಪ್ಪಳ), ಎಸ್.ಎ. ಕೃಷ್ಣಯ್ಯ, ತೊಗಲು ಗೊಂಬೆಯಾಟ (ಉಡುಪಿ), ಗೋವಿಂದಪ್ಪ ತಳವಾರ, ದೊಡ್ಡಾಟ (ಹಾವೇರಿ)

2021ರ ವಾರ್ಷಿಕ ಪ್ರಶಸ್ತಿ: ಸುಂದ್ರವ್ವ ಮೇತ್ರಿ, ಶ್ರೀಕೃಷ್ಣ ಪಾರಿಜಾತ (ಬಾಗಲಕೋಟೆ), ಫಕ್ಕಿರಪ್ಪ ಗೌರಕ್ಕನವರ, ಬಯಲಾಟ (ಹಾವೇರಿ), ಚಂದ್ರಶೇಖರ ಮೇಲಿನಮನಿ, ಶ್ರೀಕೃಷ್ಣ ಪಾರಿಜಾತ (ವಿಜಯಪುರ), ದುಂಡಪ್ಪ ಗುಡ್ಲಾ, ಬಯಲಾಟ (ಕಲಬುರಗಿ), ಚಂದ್ರಶೇಖರ ಗುರಯ್ಯನವರ, ದೊಡ್ಡಾಟ (ಧಾರವಾಡ), ಸುಶೀಲಾ ಮಾದರ, ಸಣ್ಣಾಟ (ಬೆಳಗಾವಿ), ವೆಂಕೋಬ ಗೋನಾವರ, ದೊಡ್ಡಾಟ (ರಾಯಚೂರ), ಎಸ್.ಚಂದ್ರಪ್ಪ, ದೊಡ್ಡಾಟ (ದಾವಣಗೆರೆ), ಎಂ.ಆರ್. ವಿಜಯ, ಸೂತ್ರದ ಗೊಂಬೆಯಾಟ, (ಬೆಂಗಳೂರು), ದಾನಪ್ಪ ಹಡಪದ, ದೊಡ್ಡಾಟ (ಗದಗ).

2022ರ ಗೌರವ ಪ್ರಶಸ್ತಿ: ಕೆ. ಮೌನಾಚಾರಿ, ಬಯಲಾಟ (ಬಳ್ಳಾರಿ), ಸುರೇಂದ್ರ ಹಲ್ಲಂಬಿ, ಸಣ್ಣಾಟ (ಧಾರವಾಡ), ಮಲ್ಲೇಶಯ್ಯ ಶತಕಂಠ, ದೊಡ್ಡಾಟ (ತುಮಕೂರು), ಚಂದ್ರಮ್ಮ, ತೊಗಲು ಗೊಂಬೆಯಾಟ (ಮಂಡ್ಯ), ಅಶೋಕ ಸುತಾರ, ದೊಡ್ಡಾಟ (ಗದಗ)

2022ರ ವಾರ್ಷಿಕ ಪ್ರಶಸ್ತಿ: ಮಲ್ಲಪ್ಪ ಗಣಿ, ಸಣ್ಣಾಟ (ಬಾಗಲಕೋಟೆ), ಫಕ್ಕೀರೇಶ ಬಿಸಟ್ಟಿ, ದೊಡ್ಡಾಟ (ಹಾವೇರಿ), ನಾಗರತ್ನಮ್ಮ, ಬಯಲಾಟ (ವಿಜಯನಗರ), ಕೆಂಪಣ್ಣ ಚೌಗಲಾ, ಶ್ರೀಕೃಷ್ಣ ಪಾರಿಜಾತ (ಬೆಳಗಾವಿ) ರಾಮಚಂದ್ರ ಕಟ್ಟಿಮನಿ, ದೊಡ್ಡಾಟ (ಯಾದಗಿರಿ), ಅಂಬುಜಮ್ಮ ಸುಂಕಣ್ಣ, ಬಯಲಾಟ (ಬಳ್ಳಾರಿ), ಕೆ.ಪಿ. ಭೂತಯ್ಯ, ದೊಡ್ಡಾಟ, (ಚಿತ್ರದುರ್ಗ), ಜಿ. ರಾಮಪ್ರಭು, ಬಯಲಾಟ (ದಾವಣಗೆರೆ), ಬಿ. ರತ್ನಮ್ಮ ಸೋಗಿ, ದೊಡ್ಡಾಟ (ಶಿವಮೊಗ್ಗ), ಫಕ್ಕೀರಪ್ಪ ನರ್ತಿ, ದೊಡ್ಡಾಟ (ಧಾರವಾಡ).

ನೀಟ್ ಸೂಪರ್ ಸ್ಪೆಷಾಲಿಟಿ ಪರೀಕ್ಷೆ ಡಾ.ಆತೀಶ್ ಪ್ರಥಮ

ಕುಂದಾಪುರ (ಉಡುಪಿ): ಗುರುವಾರ ಪ್ರಕಟವಾದ ನೀಟ್ ಸೂಪರ್ ಸ್ಪೆಷಾಲಿಟಿ ಎಂ.ಸಿ.ಎಚ್ ಪ್ರವೇಶ ಪರೀಕ್ಷೆಯಲ್ಲಿ ಕುಂದಾಪುರದ ಡಾ.ಆತೀಶ್ ಬಿ.ಶೆಟ್ಟಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಕುಂದಾಪುರದ ಚಿನ್ಮಯಿ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಬಾಲಕೃಷ್ಣ ಶೆಟ್ಟಿ ಹಾಗೂ ಸುನೀತಾ ಶೆಟ್ಟಿ ದಂಪತಿ ಪುತ್ರರಾಗಿರುವ ಇವರು ಸಿಇಟಿ ಪ್ರವೇಶ ಪರೀಕ್ಷೆಯಲ್ಲಿ 13ನೇ ಸ್ಥಾನ ಪಡೆದಿದ್ದರು.



ಡಾ.ಆತೀಶ್ ಶೆಟ್ಟಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.28	19,661	17,495
ಹಾರಂಗಿ	2,859	2,858.00	1,754	1,800
ಕಬಿನಿ	2284.00	2282.96	4,690	5,000
ಹೇಮಾವತಿ	2,922	2,921.95	7,147	4,850
ಲಿಂಗನಮಕ್ಕಿ	1,819	1,816	10,181	6,314
ಸೂಪಾ (ಮೀ)	564	553.33	1292	-
ಮಾಣಿ	594	589	1,878	-
ತುಂಗಭದ್ರಾ	1,633	1,632.74	47,049	46,620
ಮಲಪ್ರಭಾ	2079.5	2,079.50	8,794	8,794
ಘಟಪ್ರಭಾ	2175	2,174.133	12,859	7,900
ಭದ್ರಾ	186	184	5,703	7,208
ಆಲಮಟ್ಟಿ (ಮೀ)	519.6	519.23	1,26,990	1,50,000
ನಾರಾಯಣಪುರ (ಮೀ)	492.25	491.13	1,30,000	1,33,190

* ನೆಲಮಟ್ಟದಿಂದ

ಶೈಕ್ಷಣಿಕ ಸಂಸ್ಥೆಗಳಲ್ಲಿ ವಸ್ತ್ರಸಂಹಿತೆ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ನೋಂದಾಯಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ವಸ್ತ್ರಸಂಹಿತೆ ಜಾರಿಗೊಳಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಲು ಕೋರಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠವು, 'ಇದು ನ್ಯಾಯಾಲಯ ತೀರ್ಪು ನೀಡುವಂಥ ವಿಚಾರವಲ್ಲ' ಎಂದು ತಿಳಿಸಿದೆ.

ಸಮಾನತೆ, ಭ್ರಾತೃತ್ವ ಮತ್ತು ಭಾವೈಕ್ಯತೆ ಮೂಡಿಸಲು ವಸ್ತ್ರಸಂಹಿತೆ ಜಾರಿ ಮಾಡಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿತ್ತು. ಕರ್ನಾಟಕದಲ್ಲಿ 'ಹಿಜಾಬ್' ವಿವಾದ ಆರಂಭವಾದ ನಂತರ ಈ ಅರ್ಜಿ ಸಲ್ಲಿಸಲಾಗಿತ್ತು.

'ಸೇನಾ ಕಾರ್ಯಾಚರಣೆ ಅಂತ್ಯಕ್ಕೆ ಆತುರವಿಲ್ಲ'

ಸಮರ್‌ಕಂಡ್ (ಎಎಫ್‌ಪಿ): 'ಉಕ್ರೇನ್‌ನಲ್ಲಿ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆ ಕೊನೆಗೊಳಿಸಲು ಆತುರವಿಲ್ಲ. ಡಾನ್‌ಬಾಸ್‌ನಲ್ಲಿ ಆಕ್ರಮಣಕಾರಿ ಕಾರ್ಯಾಚರಣೆ ನಿಲ್ಲದು. ನಮ್ಮ ಸೇನೆ ಹೊಸ ಪ್ರದೇಶಗಳನ್ನು ಆಕ್ರಮಿಸುತ್ತಿದೆ' ಎಂದು ರಷ್ಯಾ ಅಧ್ಯಕ್ಷ ಪುಟಿನ್ ಶುಕ್ರವಾರ ಹೇಳಿದ್ದಾರೆ.

ಉಜ್ಬೇಕಿಸ್ತಾನದ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಪುಟಿನ್ ಸುದ್ದಿಗಾರರೊಂದಿಗೆ ಮಾತನಾಡಿದರು.

ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯಲ್ಲಿ ಮೋದಿ ಪ್ರತಿಪಾದನೆ

ಎಸ್‌ಸಿಒ: ಸುಗಮ ಸಾಗಣೆ ಅಗತ್ಯ

ಸಮರ್‌ಕಂಡ್, ಉಜ್ಬೇಕಿಸ್ತಾನ (ಪಿಟಿಐ): ಕೋವಿಡ್ -19 ಪಿಡುಗು ಹಾಗೂ ಉಕ್ರೇನ್ ಬಿಕ್ಕಟ್ಟಿನಿಂದ ಉಂಟಾದ ಸಂಕಷ್ಟ ನಿವಾರಣೆಗೆ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ನಡುವೆ ಸುಗಮ ಸಾಗಣೆ ವ್ಯವಸ್ಥೆಯ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದರು.

ಉಜ್ಬೇಕಿಸ್ತಾನದ ಸಮರ್‌ಕಂಡ್ ನಗರದಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ವಾರ್ಷಿಕ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

ಕೋವಿಡ್–19 ಪಿಡುಗು ಹಾಗೂ ಉಕ್ರೇನ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳು ಇಂಧನ ಹಾಗೂ ಆಹಾರದ ಸಂಕಷ್ಟ ಎದುರಿಸುತ್ತಿವೆ. ಸಂಘಟನೆಯ ಸದಸ್ಯ ರಾಷ್ಟ್ರಗಳ ನಡುವೆ ಸರಕುಗಳ ಸುಗಮ ಸಾಗಣೆ ವ್ಯವಸ್ಥೆ ಈ ಸಂಕಷ್ಟಕ್ಕೆ ಪರಿಹಾರ ಒದಗಿಸಬಲ್ಲದು ಎಂದು ಅವರು ಹೇಳಿದರು.

ಈ ಪ್ರತಿಪಾದನೆ ಮೂಲಕ ಮೋದಿ ಅವರು, ಸರಕು ವಾಹನಗಳ ಸಂಚಾರ ವ್ಯವಸ್ಥೆಗೆ ಅನುವು ಮಾಡಿಕೊಡುವ ಸಂಬಂಧ ಪಾಕಿಸ್ತಾನದ ಮೇಲೆ ಸೂಚ್ಯವಾಗಿ ಒತ್ತಡ ಹೇರುವ ಪ್ರಯತ್ನ ಮಾಡಿದರು.

ಇರಾನ್‌ಗೆ ಸದಸ್ಯತ್ವ?: ಈ ಶೃಂಗ ಸಭೆಯಲ್ಲಿ, ಇರಾನ್‌ಗೆ ಶಾಂಘೈ ಸಹಕಾರ ಸಂಘಟನೆಯ ಕಾಯಂ ಸದಸ್ಯ ಸ್ಥಾನ ನೀಡುವ ಸಾಧ್ಯತೆಯೂ ಇದೆ.

ಸಭೆ: ಪ್ರಧಾನಿ ನರೇಂದ್ರ ಮೋದಿ ಹಾಗೂ ಟರ್ಕಿಯೆ ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೊಗನ್ ಅವರು ಸಭೆ ನಡೆಸಿ, ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಚರ್ಚಿಸಿದರು.



ಉಜ್ಬೇಕಿಸ್ತಾನದ ಸಮರ್‌ಕಂಡ್ ನಗರದಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸದಸ್ಯ ರಾಷ್ಟ್ರಗಳ ಮುಖಂಡರೊಂದಿಗೆ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ತಡವರಿಸಿದ ಶೆಹಬಾಜ್, ನಕ್ಕ ಪುಟಿನ್

ಉಜ್ಬೇಕಿಸ್ತಾನ: ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಇಯರ್ ಫೋನ್ ಹಾಕಿಕೊಳ್ಳಲು ತಡವರಿಸಿದ್ದನ್ನು ನೋಡಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ನಗುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಎಸ್‌ಸಿಒದ 22ನೇ ಪ್ರಾದೇಶಿಕ ಸಮ್ಮೇಳನದಲ್ಲಿ ಗುರುವಾರ ಉಭಯ ನಾಯಕರು ಭಾಗವಹಿಸಿದ್ದ ಸಂದರ್ಭದಲ್ಲಿ ಈ ಪ್ರಸಂಗ ನಡೆದಿದೆ.

ಸಭೆ ವೇಳೆ ಷರೀಫ್ ಅವರ ಕಿವಿಯಿಂದ ಇಯರ್ ಫೋನ್ ಜಾರಿತು. ಇದು ಪುಟಿನ್ ಅವರಿಗೆ ನಗು ತರಿಸಿತು. ಷರೀಫ್ ಅವರು ಇಯರ್ ಫೋನ್ ಕಿವಿಗೆ ಹಾಕಿಕೊಳ್ಳಲು ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. ಕೊನೆಗೆ ಅಧಿಕಾರಿಗಳ ನೆರವಿನಿಂದ ಇಯರ್‌ಫೋನ್ ಹಾಕಿಕೊಂಡು ಮಾತು ಆರಂಭಿಸಿದರು.

ಇದು ಪಾಕಿಸ್ತಾನಕ್ಕೆ ಮುಜುಗರ ಉಂಟುಮಾಡಿದೆ ಎಂದು ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ ಪಕ್ಷದ ಕಾರ್ಯಕರ್ತರು ಬೇಸರ ವ್ಯಕ್ತಪಡಿಸಿದ್ದಾರೆ.

ಹಸ್ತಾಂತರ

ಸಮರ್‌ಕಂಡ್‌ನಲ್ಲಿ ಶುಕ್ರವಾರ ಉಜ್ಬೇಕಿಸ್ತಾನ ಎಸ್‌ಸಿಒ ಅಧ್ಯಕ್ಷ ಸ್ಥಾನವನ್ನು ಸರದಿ ಪ್ರಕಾರ ಭಾರತಕ್ಕೆ ಹಸ್ತಾಂತರಿಸಿದೆ.

ಉಜ್ಬೇಕಿಸ್ತಾನ ಅಧ್ಯಕ್ಷ ಶವ್ಕತ್ ಮಿರ್ಜಿಯೋವ್ ಅವರು ಸಮರ್‌ಕಂಡ್‌ನಲ್ಲಿ 22ನೇ ಎಸ್‌ಸಿಒ ಶೃಂಗಸಭೆ ಅಧ್ಯಕ್ಷತೆ ವಹಿಸಿದ್ದರು.

'2023ರಲ್ಲಿ ಭಾರತ ಎಸ್‌ಸಿಒ ಶೃಂಗಸಭೆ ಆಯೋಜಿಸುತ್ತದೆ. ಈ ಜವಾಬ್ದಾರಿಯುತ ಕಾರ್ಯಕ್ರಮ ಅನುಷ್ಠಾನದಲ್ಲಿ ಭಾರತಕ್ಕೆ ಸಹಾಯ ಮಾಡಲು ಪ್ರಯತ್ನಿಸುತ್ತೇವೆ' ಎಂದು ಉಜ್ಬೇಕಿಸ್ತಾನ ವಿದೇಶಾಂಗ ಸಚಿವ ವ್ಲಾಡಿಮಿರ್ ನೊರೊವ್ ಟ್ವೀಟ್ ಮಾಡಿದ್ದಾರೆ.

ಉಕ್ರೇನ್‌ನಿಂದ ಮರಳಿದ ವೈದ್ಯ ವಿದ್ಯಾರ್ಥಿಗಳ ನೆರವಿಗೆ ವೆಬ್‌ಪೋರ್ಟಲ್ ರೂಪಿಸಿ:'ಸುಪ್ರೀಂ'

ನವದೆಹಲಿ (ಪಿಟಿಐ): ಯುದ್ಧ ಪೀಡಿತ ಉಕ್ರೇನ್‌ನಿಂದ ದೇಶಕ್ಕೆ ಹಿಂದಿರುಗಿದ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಪೂರ್ಣಗೊಳಿಸಲು ವಿದೇಶಿ ವಿಶ್ವವಿದ್ಯಾಲಯಗಳ ವಿವರಗಳನ್ನು ಒಳಗೊಂಡ ವೆಬ್ ಪೋರ್ಟಲ್ ರಚಿಸುವ ಮೂಲಕ ಸಹಾಯ ಮಾಡುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರಕ್ಕೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು, ವೆಬ್ ಪೋರ್ಟಲ್ ಆರಂಭಿಸಿ, ಶುಲ್ಕದ ಸಂಪೂರ್ಣ ವಿವರ, ಪರ್ಯಾಯ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಸೀಟುಗಳ ಸಂಖ್ಯೆ, ಇತ್ಯಾದಿ ವಿವರಗಳನ್ನು ತಿಳಿಸಬೇಕು ಎಂದು ಹೇಳಿದೆ.

ಪರ್ಯಾಯ ಯೋಜನೆ ಅಡಿ ಬೇರೆ ದೇಶಗಳಿಗೆ ಹೋಗಬೇಕಾದ ಭಾರತೀಯ ವಿದ್ಯಾರ್ಥಿಗಳಿಗೆ ಸರ್ಕಾರ ಸಹಾಯ ಮಾಡಬೇಕು ಮತ್ತು ಹೈಕಮಿಷನರ್‌ಗಳು ವಿದ್ಯಾರ್ಥಿಗಳಿಗೆ ಸಾಧ್ಯವಿರುವ ಎಲ್ಲ ರೀತಿಯಲ್ಲಿ ಸಹಾಯ ಮಾಡಬಹುದು. ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸರ್ಕಾರ ತನ್ನ ಸಂಪನ್ಮೂಲಗಳನ್ನು ಬಳಸಬೇಕು ಎಂದು ನ್ಯಾಯಾಲಯ ಹೇಳಿದೆ.

ಕೇಂದ್ರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಈ ವಿಚಾರವಾಗಿ ತಾವು ಯಾವುದೇ ವಿರೋಧಿ ನಿಲುವು ತಳೆಯುತ್ತಿಲ್ಲ. ಪೀಠದ ಸಲಹೆಗಳ ಕುರಿತು ಸರ್ಕಾರದಿಂದ ಸೂಚನೆ ಪಡೆಯಲು ಕಾಲಾವಕಾಶ ಕೋರಿದರು.

ಮುಂದಿನ ವಿಚಾರಣೆಯನ್ನು ಸೆ. 23ಕ್ಕೆ ಮುಂದೂಡಲಾಯಿತು.

ಭಾರತದಲ್ಲಿ ವೈದ್ಯಕೀಯ ವ್ಯಾಸಂಗ ಮುಂದುವರಿಸಲು ಅವಕಾಶ ಕಲ್ಪಿಸುವಂತೆ ಕೋರಿ ಉಕ್ರೇನ್‌ನಿಂದ ಹಿಂದಿರುಗಿರುವ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು. ವಿಚಾರಣೆ ವೇಳೆ ಹಿರಿಯ ವಕೀಲ ರಾಜೀವ್ ದತ್ತಾ ಅವರು, ಜಿನೀವಾ ಒಪ್ಪಂದದ ಪ್ರಕಾರ ಉಕ್ರೇನ್‌ನಿಂದ ಹಿಂದಿರುಗಿದ 20,000 ವಿದ್ಯಾರ್ಥಿಗಳನ್ನು 'ಯುದ್ಧ ಸಂತ್ರಸ್ತರು' ಎಂದು ಕೇಂದ್ರ ಘೋಷಿಸಿ, ಪರಿಹಾರ ವಿಸ್ತರಿಸಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಹೋಗಿರುವುದರಿಂದ ವಕೀಲರು ಅದನ್ನು ಆ ಮಟ್ಟಕ್ಕೆ ತೆಗೆದುಕೊಳ್ಳಬಾರದು ಎಂದು ಪೀಠವು ಮೌಖಿಕವಾಗಿ ಹೇಳಿತು.

ಉಕ್ರೇನ್‌ನಿಂದ ಭಾರತಕ್ಕೆ ಮರಳಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮುಂದುವರಿಸಲು ಅವಕಾಶ ಕಲ್ಪಿಸಲಾಗದು. ಕಾನೂನಿನಲ್ಲಿ ಈ ಕುರಿತು ಯಾವುದೇ ಅವಕಾಶ ಇಲ್ಲದಿರುವ ಕಾರಣ ಈ ವಿದ್ಯಾರ್ಥಿಗಳನ್ನು ಭಾರತದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ವರ್ಗಾಯಿಸಲು ಸಾಧ್ಯವಿಲ್ಲ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಗುರುವಾರ ಪ್ರಮಾಣ ಸಲ್ಲಿಸಿತ್ತು.

ಮುಖ್ಯಾಂಶಗಳು

- ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸಂಪನ್ಮೂಲ ಬಳಸಲು ಸೂಚನೆ
- ಶುಲ್ಕದ ವಿವರ, ಸೀಟುಗಳ ಸಂಖ್ಯೆ ಬಗ್ಗೆ ಮಾಹಿತಿ ಒದಗಿಸಿ–ಕೋರ್ಟ್ ಸಲಹೆ

ಮಾಹಿತಿ ಬಹಿರಂಗಪಡಿಸಿ: ಇಲಾಖೆಗಳಿಗೆ ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಸರ್ಕಾರಿ ಇಲಾಖೆಗಳು, ತಮ್ಮ ಇಲಾಖೆಗೆ ಸಂಬಂಧಿಸಿದ ಮಾಹಿತಿಗಳನ್ನು ಸ್ವಯಂ ಪ್ರೇರಿತವಾಗಿ ಬಹಿರಂಗಪಡಿಸಬೇಕು ಎಂಬ ಮಾರ್ಗಸೂಚಿ ಇದೆ. ಈ ಮಾರ್ಗಸೂಚಿಯ ಪಾಲನೆ ಆಗುತ್ತಿದೆಯೇ ಇಲ್ಲವೇ ಎನ್ನುವ ಕುರಿತು ಪ್ರತಿ ವರ್ಷ ಮೂರನೇ ವ್ಯಕ್ತಿ/ಸಂಸ್ಥೆಯಿಂದ ಪರಿಶೀಲನೆ ನಡೆಸಬೇಕು ಎಂದು ಕೇಂದ್ರ ಸರ್ಕಾರವು ತನ್ನ ಅಡಿ ಬರುವ ಎಲ್ಲಾ ಇಲಾಖೆಗಳಿಗೆ ಸೂಚಿಸಿದೆ.

ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 4ರ ಅಡಿಯಲ್ಲಿ ಸ್ವಯಂ ಪ್ರೇರಿತವಾಗಿ ಇಲಾಖೆಯ ಕಾರ್ಯವೈಖರಿ, ಕರ್ತವ್ಯಗಳು ಮತ್ತು ಇತರ ಮಾಹಿತಿಗಳನ್ನು ಕಡ್ಡಾಯವಾಗಿ ಸಾರ್ವಜನಿಕರಿಗೆ ನೀಡಬೇಕು ಎಂಬ ಮಾರ್ಗಸೂಚಿಯನ್ನು 2013 ಮತ್ತು 2019ರಲ್ಲಿ ನೀಡಲಾಗಿತ್ತು.

ಆದರೂ, ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ 2,275 ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಕೇವಲ 754 ಪ್ರಾಧಿಕಾರಗಳು ಮಾತ್ರವೇ ಸಾರ್ವಜನಿಕರಿಗೆ ಮಾಹಿತಿಯನ್ನು ಬಹಿರಂಗ ಪಡಿಸಿರುವುದು ಕೇಂದ್ರ ಮಾಹಿತಿ ಆಯೋಗದ 2020–21ರ ವರದಿಯಿಂದ ತಿಳಿದುಬಂದಿದೆ.

ಯಾವುದೇ ಇಲಾಖೆಯು, ತನ್ನ ಇಲಾಖೆಗೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಕಡ್ಡಾಯವಾಗಿ ಬಹಿರಂಗ ಪಡಿಸಬೇಕು ಎಂಬ ಮಾರ್ಗಸೂಚಿ ಇದೆ. ಈ ಕುರಿತೂ ಪರಿಶೀಲನೆ ನಡೆಸಬೇಕು ಮತ್ತು ಪ್ರತಿ ವರ್ಷ ನಡೆಸುವ ಈ ಪರಿಶೀಲನೆಯ ವರದಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಆ ಮೂಲಕ ಕೇಂದ್ರ ಮಾಹಿತಿ ಆಯೋಗಕ್ಕೆ ಮಾಹಿತಿ ರವಾನೆಯಾಗಬೇಕು ಎಂದು ಕೇಂದ್ರವು ಆದೇಶದಲ್ಲಿ ಹೇಳಿದೆ.

ವೈವಾಹಿಕ ಅತ್ಯಾಚಾರ: ಕೇಂದ್ರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಹೆಂಡತಿಯ ಒಪ್ಪಿಗೆ ಇಲ್ಲದೆ ನಡೆಸುವ ಲೈಂಗಿಕ ಕ್ರಿಯೆಯು ಅಪರಾಧ ಎನ್ನುವ ಕುರಿತು ದೆಹಲಿ ಹೈಕೋರ್ಟ್‌ನ ಮೂವರು ನ್ಯಾಯಮೂರ್ತಿಗಳಿದ್ದ ಪೀಠವು ಭಿನ್ನ ನಿಲುವಿನ ತೀರ್ಪು ನೀಡಿತ್ತು. ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ಈ ಅರ್ಜಿಯ ಸಂಬಂಧ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವೂ ಕೇಂದ್ರಕ್ಕೆ ನೋಟಿಸ್ ನೀಡಿತು.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿಕೆ

'ಅಂಬೇಡ್ಕರ್ ಅವರ ನಿಜವಾದ ಅನುಯಾಯಿ ಮೋದಿ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ನಿಜವಾದ ಅನುಯಾಯಿ. ಅವರು ಸಮಾಜ ಸುಧಾರಕರ ದೃಷ್ಟಿಕೋನವನ್ನು ವಾಸ್ತವಕ್ಕೆ ತರುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿದ್ದಾರೆ' ಎಂದು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದ್ದಾರೆ.

ಬ್ಲೂಕ್ರಾಫ್ಟ್ ಡಿಜಿಟಲ್ ಫೌಂಡೇಷನ್ ಪ್ರಕಟಿಸಿರುವ 'ಅಂಬೇಡ್ಕರ್ ಆ್ಯಂಡ್ ಮೋದಿ: ರಿಫಾರ್ಮರ್ಸ್ ಐಡಿಯಾಸ್ ಪರ್ಫಾರ್ಮರ್ಸ್ ಇಂಪ್ಲಿಮೆಂಟೇಷನ್' ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಆದ್ಯತೆ ನೀಡಿರುವ ಶಿಕ್ಷಣ, ಕಾರ್ಮಿಕರ ಹಿತರಕ್ಷಣೆ, ಮಹಿಳಾ ಸಬಲೀಕರಣ, ಸ್ವಾವಲಂಬಿ ದೇಶ ನಿರ್ಮಾಣ ಹಾಗೂ ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನ ರದ್ದು ಮಾಡಿರುವುದು–ಇವೆಲ್ಲ ಅಂಬೇಡ್ಕರ್ ಅವರ ದೃಷ್ಟಿಕೋನವನ್ನು ಹೊಂದಿರುವಂಥದ್ದು' ಎಂದು ಅಭಿಪ್ರಾಯಪಟ್ಟರು.

'ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಅಂಬೇಡ್ಕರ್ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಪ್ರಸ್ತಾಪವನ್ನು ತಿರಸ್ಕರಿಸಿದ್ದರು. ನಂತರದ ಸಂಕೀರ್ಣ ಬೆಳವಣಿಗೆಗಳ ಬಳಿಕ ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಯಿತು. ಆದರೆ, ಅದು ಬಾಬಾ ಸಾಹೇಬರ ಆಶಯಗಳಿಗೆ ವಿರುದ್ಧವಾಗಿತ್ತು. 2019ರಲ್ಲಿ ಮೋದಿ ಸರ್ಕಾರದ ಪ್ರಯತ್ನಗಳ ಫಲವಾಗಿ ವಿಶೇಷ ಸ್ಥಾನಮಾನವನ್ನು ತೆಗೆದುಹಾಕಲಾಯಿತು. ಈ ಆದೇಶವು ಬಾಬಾ ಸಾಹೇಬರ ಆದರ್ಶವನ್ನು ಸಾಕಾರಗೊಳಿಸುವಂಥದ್ದಾಗಿತ್ತು. ಭಾರತದ ರಾಷ್ಟ್ರಪತಿಯಾಗಿ ಈ ಆದೇಶಕ್ಕೆ ಸಹಿ ಹಾಕುವ ಅದೃಷ್ಟ ನನ್ನದಾಗಿತ್ತು' ಎಂದರು.



ನವದೆಹಲಿಯಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ ಅವರು 'ಅಂಬೇಡ್ಕರ್ ಆ್ಯಂಡ್ ಮೋದಿ: ರಿಫಾರ್ಮರ್ಸ್ ಐಡಿಯಾಸ್ ಪರ್ಫಾರ್ಮರ್ಸ್ ಇಪ್ಲಿಮೆಂಟೇಷನ್' ಪುಸ್ತಕವನ್ನು ಬಿಡುಗಡೆ ಮಾಡಿದರು. ಕೇಂದ್ರ ಸಚಿವ ಅನುರಾಗ್ ಠಾಕೂರ್, ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಇದ್ದಾರೆ —ಪಿಟಿಐ ಚಿತ್ರ

ಆನ್‌ಲೈನ್ ಗೇಮ್ ರಾಜ್ಯದ ಮೇಲ್ಮನವಿ ವಿಚಾರಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆನ್‌ಲೈನ್ ಗೇಮ್ ಹೆಸರಲ್ಲಿ ನಡೆಯುವ ಜೂಜಾಟ ನಿಷೇಧಿಸುವ ಕಾನೂನು ರದ್ದು ಮಾಡಿ ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠ ಫೆ.14ರಂದು ನೀಡಿರುವ ಆದೇಶವನ್ನು ಪ್ರಶ್ನಿಸಿ, ಕರ್ನಾಟಕ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ಧರಿಸಿದೆ.

ಈ ಸಂಬಂಧ ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಮತ್ತು ವಿ.ರಾಮಸುಬ್ರಮಣಿಯನ್ ಅವರಿದ್ದ ನ್ಯಾಯಪೀಠ, ಆನ್‌ಲೈನ್ ಗೇಮ್ ಕೈಗಾರಿಕಾ ಒಕ್ಕೂಟ ಅಖಿಲ ಭಾರತ ಗೇಮಿಂಗ್ ಫೆಡರೇಷನ್ ಮತ್ತು ಕೌಶಲ ಆಧಾರಿತ ಗೇಮಿಂಗ್ ಸಂಸ್ಥೆಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ಇಂಥದ್ದೇ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ಆದೇಶದ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿರುವ ಮೇಲ್ಮನವಿಯೊಂದಿಗೆ ಈ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನಿರ್ಧರಿಸಿದೆ.

ದೆಹಲಿ ಅಬಕಾರಿ ನೀತಿ ಪ್ರಕರಣ • ಜೈಲಿನಲ್ಲೇ ಸತ್ಯೇಂದರ್ ಜೈನ್ ವಿಚಾರಣೆ

ದೇಶದ 40 ಕಡೆ ಇ.ಡಿ ಶೋಧ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರವು ಜಾರಿಗೆ ತಂದು, ವಾಪಸ್ ಪಡೆದಿರುವ ನೂತನ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಕರ್ನಾಟಕವೂ ಸೇರಿದಂತೆ ದೇಶದ 40 ಕಡೆಗಳಲ್ಲಿ ಶುಕ್ರವಾರ ಏಕಕಾಲದಲ್ಲಿ ಶೋಧಕಾರ್ಯ ನಡೆಸಿದೆ.

ದೆಹಲಿ, ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡಿನ ಹಲವು ಪ್ರದೇಶಗಳಲ್ಲಿ ಇ.ಡಿ ಕಾರ್ಯಾಚರಣೆ ನಡೆಸಿದೆ. ರಾಜಕಾರಣಿಗಳು, ಅಧಿಕಾರಿಗಳು, ಮದ್ಯ ತಯಾರಿಕಾ ಉದ್ಯಮಿಗಳು ಮತ್ತು ಮದ್ಯ ಸರಬರಾಜು ಉದ್ಯಮಿಗಳ ಮನೆ, ಕಚೇರಿ ಮತ್ತು ಗೋದಾಮುಗಳಲ್ಲಿ ಸ್ಥಳೀಯ ಪೊಲೀಸರು ಮತ್ತು ಅರೆಸೇನಾಪಡೆಯ ಸಿಬ್ಬಂದಿಯ ಭದ್ರತೆಯಲ್ಲಿ ಶೋಧಕಾರ್ಯ ನಡೆದಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈಗಾಗಲೇ ಬಂಧನದಲ್ಲಿರುವ ಎಎಪಿಯ ಸತ್ಯೇಂದರ್ ಜೈನ್ ಅವರನ್ನು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇ.ಡಿ ಅಧಿಕಾರಿಗಳು ಶುಕ್ರವಾರ ತಿಹಾರ್ ಜೈಲಿನಲ್ಲಿಯೇ ವಿಚಾರಣೆಗೆ ಒಳಪಡಿಸಿದ್ದಾರೆ.

ಮದ್ಯ ಸರಬರಾಜು ಉದ್ಯಮದ ನಂಟು ಇರುವ ವೈಎಸ್‌ಆರ್‌ಸಿಪಿ ಸಂಸದ ಶ್ರೀನಿವಾಸಲು ರೆಡ್ಡಿ ಅವರ ದೆಹಲಿ ನಿವಾಸದಲ್ಲೂ ಶೋಧ ಕಾರ್ಯ ನಡೆಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಶ್ರೀನಿವಾಸಲು ಅವರನ್ನು ಸಂಪರ್ಕಿಸಲು ಪಿಟಿಐ ಯತ್ನಿಸಿತು. ಆದರೆ, ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಎಲ್‌ಜಿ ಶಿಫಾರಸಿನಂತೆ ಪ್ರಕರಣ: ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ನಡೆದಿದೆ. ಈ ಸಂಬಂಧ ಪ್ರಕರಣ ದಾಖಲಿಸಿ, ತನಿಖೆ ನಡೆಸಿ ಎಂದು ದೆಹಲಿ ಲೆಫ್ಟಿನೆಂಟ್ ಗವರ್ನರ್ (ಎಲ್‌ಜಿ) ವಿ.ಕೆ. ಸಕ್ಸೇನಾ ಸಿಬಿಐಗೆ ಪತ್ರ ಬರೆದಿದ್ದರು. ಸಿಬಿಐ ಪ್ರಕರಣ ದಾಖಲಿಸಿತ್ತು.

ಮುಖ್ಯಾಂಶಗಳು
- ಸೆಪ್ಟೆಂಬರ್ 6ರಂದೂ 40 ಕಡೆ ನಡೆದಿದ್ದ ಶೋಧಕಾರ್ಯ
- ಆಗಸ್ಟ್ 19ರಂದು ಸಿಬಿಐನಿಂದ 20 ಕಡೆ ಶೋಧ ಕಾರ್ಯ

ಕೇಂದ್ರಕ್ಕೆ ಮಾಡಲು ಯಾವುದೇ ಕೆಲಸಗಳಿಲ್ಲ. ಹೀಗಾಗಿ ಸಿಬಿಐ ಮತ್ತು ಇ.ಡಿ ಮೂಲಕ ತೊಂದರೆ ಕೊಡುತ್ತಿದೆ. ಹೀಗಾದರೆ ದೇಶ ಅಭಿವೃದ್ಧಿಯಾಗುವುದು ಹೇಗೆ?
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ಸಂಚಾಲಕ

'ಹಗರಣವೇ ಅರ್ಥವಾಗುತ್ತಿಲ್ಲ'

ಬಿಜೆಪಿ ನಾಯಕರು ಹೇಳುತ್ತಿರುವ ಅಬಕಾರಿ ಹಗರಣ ಏನು ಎಂಬುದೇ ನನಗೆ ಅರ್ಥವಾಗುತ್ತಿಲ್ಲ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

'ಇದು ₹1.5 ಲಕ್ಷ ಕೋಟಿ ಮೊತ್ತದ ಹಗರಣ ಎಂದು ಬಿಜೆಪಿಯ ಒಬ್ಬ ನಾಯಕರು ಹೇಳುತ್ತಾರೆ. ದೆಹಲಿಯ ವಾರ್ಷಿಕ ಬಜೆಟ್ ₹ 70,000 ಕೋಟಿ ದಾಟುವುದಿಲ್ಲ. ಹೀಗಿದ್ದಾಗ ₹1.5 ಲಕ್ಷ ಕೋಟಿ ಮೊತ್ತದ ಹಗರಣ ಹೇಗೆ ನಡೆಯುತ್ತದೆ' ಎಂದು ಕೇಜ್ರಿವಾಲ್ ಪ್ರಶ್ನಿಸಿದ್ದಾರೆ.

'ಬಿಜೆಪಿಯ ಇನ್ನೊಬ್ಬ ನಾಯಕರು ಇದು ₹8,000 ಕೋಟಿ ಮೊತ್ತದ ಹಗರಣ ಎಂದಿದ್ದಾರೆ. ಸಿಬಿಐಯು ₹1,100 ಕೋಟಿ ಮೊತ್ತದ ಹಗರಣ ಎಂದು ಆರೋಪಿಸಿದ್ದಾರೆ. ಲೆಫ್ಟಿನೆಂಟ್ ಗವರ್ನರ್ 144 ಕೋಟಿಯ ಹಗರಣ ಎಂದಿದ್ದರೆ, ಸಿಬಿಐ ₹1 ಕೋಟಿಯ ಹಗರಣ ಎಂದು ಹೇಳಿದೆ. ಹೀಗಿದ್ದಲ್ಲಿ ಇದು ಯಾವ ಹಗರಣ' ಎಂದು ಅವರು ಪ್ರಶ್ನಿಸಿದ್ದಾರೆ.

ಎಎಪಿ ಶಾಸಕ ಅಮಾನತುಲ್ಲಾ ಬಂಧನ

ವಕ್ಫ್ ಮಂಡಳಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿಯ ಭ್ರಷ್ಟಾಚಾರ ನಿಗ್ರಹ ದಳವು ಶುಕ್ರವಾರ ಆಮ್ ಆದ್ಮಿ ಪಕ್ಷದ ಶಾಸಕ ಅಮಾನತುಲ್ಲಾ ಖಾನ್ ಅವರನ್ನು ಬಂಧಿಸಿದೆ.

ಖಾನ್ ಅವರ ನಿವಾಸ ಮತ್ತು ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಎಸಿಬಿ ಬೆಳಿಗ್ಗೆ ಶೋಧ ಕಾರ್ಯಾಚರಣೆ ನಡೆಸಿದೆ. ದಾಳಿ ವೇಳೆ, ₹24 ಲಕ್ಷ ಹಣ, ಪರವಾನಗಿ ಪಡೆಯದೆ ಇಟ್ಟುಕೊಂಡಿದ್ದ ಎರಡು ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ. ವಕ್ಫ್ ಮಂಡಳಿಗೆ ಸಂಬಂಧಿಸಿದ ನೇಮಕಾತಿ ಅಕ್ರಮದ ಕುರಿತು ಎಸಿಬಿ ತನಿಖೆ ನಡೆಸುತ್ತಿದೆ. 2020ರ ಭ್ರಷ್ಟಾಚಾರ ತಡೆ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಖಾನ್ ಅವರನ್ನು ವಿಚಾರಣೆಗೆ ಕರೆಯಲಾಗಿತ್ತು.

ಸಂಕ್ಷಿಪ್ತ ಸುದ್ದಿ

ನೈಜೀರಿಯಾ ಮಹಿಳೆಗೆ ಮಂಕಿಪಾಕ್ಸ್ ದೃಢ

ನವದೆಹಲಿ (ಪಿಟಿಐ): ದೆಹಲಿಯಲ್ಲಿ 30 ವರ್ಷದ ನೈಜೀರಿಯಾದ ಮಹಿಳೆಯಲ್ಲಿ ಮಂಕಿಪಾಕ್ಸ್ ರೋಗಾಣು ದೃಢಪಟ್ಟಿದ್ದು, ಇಲ್ಲಿನ ಎಲ್‌ಎನ್‌ಜೆಪಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಂಕಿಪಾಕ್ಸ್ ರೋಗದ ಶಂಕಿತ ಲಕ್ಷಣಗಳಿರುವ ಮತ್ತೊಬ್ಬ ವ್ಯಕ್ತಿಯನ್ನು ದೆಹಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಮರಿಂದರ್ ಸಿಂಗ್ ಬಿಜೆಪಿಗೆ

ಚಂಡೀಗಡ: ಪಂಜಾಬ್‌ನ ಮಾಜಿ ಮುಖ್ಯಮಂತ್ರಿ, ಪಂಜಾಬ್ ಲೋಕ ಕಾಂಗ್ರೆಸ್ (ಪಿಎಲ್‌ಸಿ) ಮುಖ್ಯಸ್ಥ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಸೆ.19ರಂದು (ಸೋಮವಾರ) ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂದು ಪಿಎಲ್‌ಸಿಯ ವಕ್ತಾರರು ಶುಕ್ರವಾರ ತಿಳಿಸಿದ್ದಾರೆ.

ಸಿಂಗ್ ಅವರು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಇತರ ನಾಯಕರ ಸಮ್ಮುಖದಲ್ಲಿ ಸೋಮವಾರ ನವದೆಹಲಿಯಲ್ಲಿ ಬಿಜೆಪಿಗೆ ಸೇರಲಿದ್ದಾರೆ. ಸಿಂಗ್ ಅವರು ಹೊಸದಾಗಿ ಸ್ಥಾಪಿಸಿರುವ ಪಿಎಲ್‌ಸಿ ಪಕ್ಷವನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಲಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಪಿಎಲ್‌ಸಿಯನ್ನು ಸೇರಿದ್ದ ಐದು ಮಾಜಿ ಶಾಸಕರು ಹಾಗೂ ಒಬ್ಬ ಸಂಸದರು ಸಿಂಗ್ ಅವರೊಂದಿಗೆ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ. ಬಳಿಕ ಚಂಡೀಗಢದಲ್ಲಿ ನಡೆಯಲಿರುವ ಪ್ರತ್ಯೇಕ ಕಾರ್ಯಕ್ರಮದಲ್ಲಿ ಪಿಎಲ್‌ಸಿ ಜಿಲ್ಲಾ ಅಧ್ಯಕ್ಷರು ಬಿಜೆಪಿಗೆ ಸೇರಲಿದ್ದಾರೆ ಎಂದು ಪಿಎಲ್‌ಸಿ ವಕ್ತಾರ ಪ್ರೀತ್‌ಪಾಲ್ ಸಿಂಗ್ ಬಲಿಯಾವಾಲ್ ತಿಳಿಸಿದ್ದಾರೆ.

ರಾಜಸ್ಥಾನ ಸರ್ಕಾರಕ್ಕೆ ಎನ್‌ಜಿಟಿ ದಂಡ

ನವದೆಹಲಿ: ಘನ ತ್ಯಾಜ್ಯ ಮತ್ತು ಕೊಳಚೆ ನೀರು ಅಸಮರ್ಪಕ ನಿರ್ವಹಣೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ರಾಜಸ್ಥಾನ ಸರ್ಕಾರಕ್ಕೆ ಪರಿಸರ ಪರಿಹಾರವಾಗಿ ₹3,000 ಕೋಟಿ ಪಾವತಿಸಲು ನಿರ್ದೇಶಿಸಿದೆ.

ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್ ಅವರ ನೇತೃತ್ವದ ಎನ್‌ಜಿಟಿಯ ಪ್ರಧಾನ ಪೀಠವು, ಸಾಂವಿಧಾನಿಕ ಕರ್ತವ್ಯಗಳನ್ನು ನಿರ್ವಹಿಸಲು ವಿಫಲವಾಗಿರುವುದಕ್ಕೆ ಮತ್ತು ಮಾಲಿನ್ಯಕ್ಕೆ ಕಾರಣವಾಗಿರುವುದಕ್ಕೆ ರಾಜ್ಯ ಸರ್ಕಾರವನ್ನು ಹೊಣೆಯಾಗಿಸಿ, ದಂಡದ ಮೊತ್ತವನ್ನು ಎರಡು ತಿಂಗಳೊಳಗೆ ಪ್ರತ್ಯೇಕ ಖಾತೆಯಲ್ಲಿ ಠೇವಣಿ ಇರಿಸುವಂತೆ, ಈ ಹಣವನ್ನು ಪರಿಸರ ಪುನಶ್ಚೇತನಕ್ಕೆ ಬಳಸಿಕೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದೆ.



ಭಾರಿ ಮಳೆಯಿಂದಾಗಿ ಶುಕ್ರವಾರ ಲಖನೌದ ಪೈಜುಲ್ಲಾಗಂಜ್ ಪ್ರದೇಶವು ಜಲಾವೃತವಾಗಿದೆ –ಪಿಟಿಐ ಚಿತ್ರ

ಭಾರಿ ಮಳೆ: ಗೋಡೆ ಕುಸಿದು 22 ಜನರ ಸಾವು

ಲಖನೌ/ಉನ್ನಾವ್ (ಪಿಟಿಐ): ಉತ್ತರ ಪ್ರದೇಶದಲ್ಲಿ ಗುರುವಾರ ತಡರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಮೂರು ಪ್ರತ್ಯೇಕ ಸ್ಥಳಗಳಲ್ಲಿ ಗೋಡೆಗಳು ಕುಸಿದು ಒಟ್ಟು 22 ಜನರು ಶುಕ್ರವಾರ ಮೃತಪಟ್ಟಿದ್ದಾರೆ.

ರಾಜಧಾನಿ ಲಖನೌ ಭಾರತೀಯ ಸೇನಾ ಆವರಣದಲ್ಲಿ ನಿರ್ಮಾಣ ಹಂತದ ಗೋಡೆ ಕುಸಿದು, ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದಾರೆ. ಉನ್ನಾವ್ ಜಿಲ್ಲೆಯ ಕಾಂತಾ ಮತ್ತು ಚಾಂದ್‌ಪುರ್ ಝಾಲೋಟಿಕ್ಕ ಗ್ರಾಮಗಳಲ್ಲಿ ಗೋಡೆ ಕುಸಿದು 2 ಮಕ್ಕಳು ಸೇರಿ ಐದು ಮಂದಿ ಅಸುನೀಗಿದ್ದಾರೆ.

ಪ್ರಯಾಗ್‌ರಾಜ್‌ನಲ್ಲಿ ಮಣ್ಣಿನ ಗೋಡೆ ಕುಸಿದು ಇಬ್ಬರು ಮಕ್ಕಳು, ಫತೇಪುರದಲ್ಲಿ ಮೂವರು, ಸೀತಾಪುರ, ರಾಯಬರೇಲಿ ಹಾಗೂ ರೂಸ್ತಿಯಲ್ಲಿ ತಲಾ ಒಬ್ಬರಂತೆ ಮೂವರು ನಾಗರಿಕರು ಗೋಡೆ ಕುಸಿದು ಮೃತಪಟ್ಟಿದ್ದಾರೆ.

'ದಿಲ್‌ಕುಶಾ ಪ್ರದೇಶದಲ್ಲಿನ ಸೇನಾ ಆವರಣದ ನಿರ್ಮಾಣ ಹಂತದಲ್ಲಿದ್ದ ಗೋಡೆಯು ಗುರುವಾರ ರಾತ್ರಿಯಿಡೀ ಸುರಿದ ಭಾರಿ ಮಳೆಗೆ ಕುಸಿದಿದೆ. ಆವರಣದ ಹೊರಗೆ ಗೋಡೆ ಸಮೀಪದಲ್ಲೇ ಕೆಲವು ಕಾರ್ಮಿಕರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಗೋಡೆಯ ಅವಶೇಷಗಳಡಿ ಸಿಲುಕಿದ್ದ ಒಂಬತ್ತು ಕಾರ್ಮಿಕರ ಶವಗಳನ್ನು ಹೊರತೆಗೆಯಲಾಗಿದೆ' ಎಂದು ಜಂಟಿ ಪೊಲೀಸ್ ಕಮಿಷನರ್ (ಕಾನೂನು ಮತ್ತು ಸುವ್ಯವಸ್ಥೆ) ಪಿಯೂಷ್ ಮೊರ್ದಿಯಾ ತಿಳಿಸಿದ್ದಾರೆ.

ವಿವಿ ಪ್ರವೇಶ: ಸಿಯುಇಟಿ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ನಡೆಸಲಾದ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ (ಸಿಯುಇಟಿ) ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಲಾಗಿದೆ.

ಸಿಯುಇಟಿ ಪರೀಕ್ಷೆಗೆ ದೇಶದಾದ್ಯಂತ 14.9 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಣಿ ಮಾಡಿದ್ದು, ಶೇ 60ರಷ್ಟು ಮಂದಿ ಹಾಜರಾಗಿದ್ದರು. ಸಿಯುಇಟಿ-ಯುಜಿ ಅಂಕಪಟ್ಟಿ ಆಧರಿಸಿ ವಿವಿಧ ವಿ.ವಿಗಳು ಪ್ರವೇಶಕ್ಕಾಗಿ ನಡೆಸುವ ಕೌನ್ಸೆಲಿಂಗ್‌ಗೆ ಪ್ರತ್ಯೇಕ ಮೆರಿಟ್ ಪಟ್ಟಿ ಸಿದ್ಧಪಡಿಸಲಿವೆ.

ನಿಗದಿಯಂತೆ ಗುರುವಾರ ಫಲಿತಾಂಶ ಪ್ರಕಟವಾಗಬೇಕಿತ್ತು. ಆದರೆ, ದೊಡ್ಡ ಪ್ರಮಾಣದ ದತ್ತಾಂಶ ಇದ್ದುದರಿಂದ ವಿಳಂಬವಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಹಿರಿಯ ನಿರ್ದೇಶಕ (ಪರೀಕ್ಷೆ) ಸಾಧನಾ ಪರಶರ್ ತಿಳಿಸಿದರು.



ವಿವಿಧ ಕೇಂದ್ರೀಯ ವಿಶ್ವವಿದ್ಯಾಲಯಗಳ ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು ಇದೇ ಮೊದಲ ಬಾರಿಗೆ ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ) ನಡೆಸಲಾಗಿತ್ತು. ಜುಲೈನಲ್ಲಿ ಆರಂಭವಾಗಿದ್ದ ಪರೀಕ್ಷೆ ಪ್ರಕ್ರಿಯೆ ಆ.30ರಂದು ಪೂರ್ಣಗೊಂಡಿತ್ತು. ಸಿಯುಇಟಿ ಅಂಕಗಳನ್ನೇ ಆಧರಿಸಿ ಪ್ರವೇಶ ಪ್ರಕ್ರಿಯೆ ನಡೆಸಲು ಇತರೆ ಕೆಲ ವಿಶ್ವವಿದ್ಯಾಲಯಗಳು ತೀರ್ಮಾನಿಸಿದ್ದವು.

'ಈಕ್ವಿ ಪರ್ಸಂಟೈಲ್' ಕ್ರಮ: ಎನ್‌ಟಿಎ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಗುಂಪುಗಳಿಗೆ ಪ್ರತ್ಯೇಕವಾಗಿ ಪರೀಕ್ಷೆ ನಡೆಸಿದ್ದು, ಪ್ರಶ್ನೆಪತ್ರಿಕೆಗಳು ಭಿನ್ನವಾಗಿದ್ದವು. ಹೀಗಾಗಿ, ಪರೀಕ್ಷೆಯು ಒಂದು ಗುಂಪಿಗೆ ಕ್ಲಿಷ್ಟ ಎನಿಸಿದರೆ, ಮತ್ತೊಂದು ಗುಂಪಿಗೆ ಸುಲಭ ಎನ್ನಿಸಿರಬಹುದು. ಈ ಕಾರಣದಿಂದ ಆಯಾ ಗುಂಪುಗಳಲ್ಲಿ ಅಭ್ಯರ್ಥಿಗಳು ಪಡೆದಿರುವ ಸರಾಸರಿ ಅಂಕ ಅಧರಿಸಿ 'ಈಕ್ವಿ ಪರ್ಸಂಟೈಲ್' ಕ್ರಮ ಆಧರಿಸಿ ಅಂಕನಿಗದಿಪಡಿಸಲಾಗಿದೆ.

ಭಾರತ ಒಗ್ಗೂಡಿಸಿ ಯಾತ್ರೆಗೆ ಹಣ ನೀಡುವಂತೆ ಒತ್ತಾಯ, ಅಮಾನತು

ತಿರುವನಂತಪುರ (ಕೇರಳ): ಭಾರತವನ್ನು ಒಗ್ಗೂಡಿಸಿ ಯಾತ್ರೆಗೆ ನಿಧಿ ಸಂಗ್ರಹದ ವೇಳೆ ₹2,000 ನೀಡುವಂತೆ ತರಕಾರಿ ವ್ಯಾಪಾರಿಯನ್ನು ಒತ್ತಾಯಿಸಿದ ಪಕ್ಷದ ಮೂವರು ಕಾರ್ಯಕರ್ತರನ್ನು ಕಾಂಗ್ರೆಸ್ ಅಮಾನತು ಮಾಡಿದೆ.

ಕಾಂಗ್ರೆಸ್‌ನ ಕಾರ್ಯಕರ್ತರು ತರಕಾರಿ ವ್ಯಾಪಾರಿಯೊಬ್ಬರಿಗೆ ಬೆದರಿಕೆ ಹಾಕುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅದರ ಬೆನ್ನಲ್ಲೇ ಪಕ್ಷವು ಅಮಾನತು ಕ್ರಮ ತೆಗೆದುಕೊಂಡಿದೆ.

ರಾಜ್ಯದ ಕೊಲ್ಲಂ ಜಿಲ್ಲೆಯಲ್ಲಿ ಘಟನೆ ನಡೆದಿದೆ. ಈ ಸಂಬಂಧ ತರಕಾರಿ ವ್ಯಾಪಾರಿ ಎಸ್.ಫವಾಜ್ ಎಂಬುವವರು ಪೊಲೀಸರಿಗೆ ದೂರು ನೀಡಿದ್ದಾರೆ. 'ಕಾಂಗ್ರೆಸ್ ಕಾರ್ಯಕರ್ತರು ಯಾತ್ರೆಗೆ ದೇಣಿಗೆ ನಿಡುವಂತೆ ಕೇಳಿದರು. ನಾನು ₹500 ನೀಡಿದೆ. ಆದರೆ, ₹2,000 ನೀಡುವಂತೆ ಒತ್ತಾಯಿಸಿದರು. ನಾನು ನಿರಾಕರಿಸಿದೆ. ಆಗ ಅಂಗಡಿಯ ತಕ್ಕಡಿಯನ್ನು ಜಖಂ ಮಾಡಿದರು ಮತ್ತು ತರಕಾರಿಗಳನ್ನು ಚೆಲ್ಲಾಡಿದರು. ಅಂಗಡಿಯ ಸಿಬ್ಬಂದಿಯ ಮೇಲೆ ಹಲ್ಲೆಯನ್ನೂ ನಡೆಸಿದ್ದಾರೆ' ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ಈ ಬಗ್ಗೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಕೆ.ಸುಧಾಕರನ್ ಅವರು ಸ್ಪಷ್ಟನೆ ನೀಡಿದ್ದಾರೆ. 'ಬೇರೆ ಪಕ್ಷಗಳು ಕಾರ್ಪೊರೇಟ್ ದೇಣಿಗೆ ಪಡೆದು ಇಂತಹ ಯಾತ್ರೆ ನಡೆಸುತ್ತವೆ. ಇಡೀ ಯಾತ್ರೆಗೆ ನಾವು ಹಣವನ್ನು ಕ್ರೌಡ್‌ಫಂಡಿಂಗ್ ಮೂಲಕ ಸಂಗ್ರಹಿಸುತ್ತಿದ್ದೇವೆ. ಇಂತಹ ವರ್ತನೆಯನ್ನು ಕಾಂಗ್ರೆಸ್ ಸಹಿಸುವುದಿಲ್ಲ. ಕಾರ್ಯಕರ್ತರನ್ನು ಅಮಾನತು ಮಾಡಲಾಗಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ತಿರುಪತಿ: ಮುಕೇಶ್ ಅಂಬಾನಿಯಿಂದ ದಾಖಲೆಯ ₹ 1.5 ಕೋಟಿ ಕಾಣಿಕೆ

ಹೈದರಾಬಾದ್: ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮುಕೇಶ್ ಅಂಬಾನಿ ಅವರು ಶುಕ್ರವಾರ ತಿರುಮಲ ತಿರುಪತಿ ಹುಂಡಿಗೆ ₹ 1.5 ಕೋಟಿ ಕಾಣಿಕೆ ನೀಡಿದ್ದಾರೆ.

ವೆಂಕಟೇಶ್ವರ ದೇವರ ದರ್ಶನ ಪಡೆದ ಅವರು ಬೆಟ್ಟದಲ್ಲಿ ಪೂಜೆ ಸಲ್ಲಿಸಿದ ಬಳಿಕ ತಿರುಮಲದ ಎಸ್.ವಿ. ಗೋಶಾಲೆಗೆ ಭೇಟಿ ನೀಡಿದರು.

ಹುಂಡಿಯಲ್ಲಿ ಆಗಸ್ಟ್‌ನಲ್ಲಿ ₹140.34 ಕೋಟಿ ದಾಖಲೆಯ ಮೊತ್ತ ಸಂಗ್ರಹವಾಗಿದೆ.

ಸ್ವಚ್ಛವಾಹಿನಿ ಶಕ್ತಿ ಮಾನಿನಿ



ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕಸ ಸಂಗ್ರಹಕ್ಕಾಗಿ ನಿಯೋಜಿಸಿರುವ 'ಸ್ವಚ್ಛವಾಹಿನಿ'ಗೆ ಮಹಿಳೆಯರೇ ಸಾರಥಿಯರು. ವಾಹನ ಚಾಲನೆಯಷ್ಟೇ ಅಲ್ಲ, ವಾಹನದ ನಿರ್ವಹಣೆಯ ಜವಾಬ್ದಾರಿಯೂ ಮಹಿಳೆಯರದ್ದೇ.

ಮನೆ ಮನೆಯಿಂದ ಸಂಗ್ರಹಿಸಿದ ಕಸವನ್ನು ಘಟಕದ ಬಳಿ ಅನ್‌ಲೋಡ್ ಮಾಡುತ್ತಿರುವ ಮಹಿಳೆಯರು

ಕಿಶನರಾವ ಕುಲಕರ್ಣಿ

ಗ್ರಾಮೀಣ ಭಾಗದ ತ್ಯಾಜ್ಯದ ಸಮಸ್ಯೆಯು ಬದಲಾಗಿ ನಿಂತೈತ್ರಿ
ಅದರಲ್ಲೂ ಪ್ಲಾಸ್ಟಿಕ್ ತ್ಯಾಜ್ಯವು ಜೀವಕ ಮಾರಕವಾಗೈತ್ರಿ
ತಮ್ಮೆಲ್ಲ ಸಹಕಾರ ನಮಗೀಗ ಅನಿವಾರ್ಯವಾಗೈತ್ರಿ
ಸ್ವಚ್ಛ ಪಂಚಾಯಿತಿ ಮಾಡಲು ನೀವೆಲ್ಲ ಮುಂದೆ ಬರ್ರೀ..ನೀವು ಮುಂದೆ ಬರ್ರೀ..

ನಿತ್ಯ ಬೆಳಿಗ್ಗೆ ಹೀಗೆ 'ಸ್ವಚ್ಛತಾ ವಾಹಿನಿ'ಯ ಧ್ವನಿವರ್ಧಕ ಮೂಲಕ ಹೊರಡುವ ಈ ಹಾಡು ಕೇಳಿದಾಕ್ಷಣ ಗ್ರಾಮಸ್ಥರು ಕಸ ತಂದು ಹಾಕುವುದಷ್ಟೆ ಅಲ್ಲ, ಮೂಗಿನ ಮೇಲೂ ಬೆರಳಿಟ್ಟು ನೋಡುತ್ತಾರೆ. ಏಕೆಂದ್ರೆ, ಕಸ ಸಂಗ್ರಹಿಸುವ ಈ ವಾಹಿನಿಗೆ ಹೆಣ್ಣು ಮಕ್ಕಳೇ ಡ್ರೈವರ್. ಅಷ್ಟೇ ಅಲ್ಲ, ಆ ಚಾಲಕಿಗೆ ಸಹಾಯಕಿಯೂ ಮಹಿಳೆಯೇ !

ಕೊಪ್ಪಳ ಜಿಲ್ಲಾಡಳಿತವು ಜಿಲ್ಲೆಯ ಚಳಗೇರಿ, ಕಂದಕೂರು, ಮುದೇನೂರ ಗ್ರಾಮ ಪಂಚಾಯಿತಿಯ ಸಹಕಾರದಲ್ಲಿ 'ಸಂಜೀವಿನಿ' ಯೋಜನೆ ಗುಂಪಿನಲ್ಲಿರುವ ಮಹಿಳೆಯರಿಗೆ ಗ್ರಾಮ ನೈರ್ಮಲ್ಯ ಕಾರ್ಯದ ಜವಾಬ್ದಾರಿ ನೀಡಿದೆ.

ಪುರುಷರಿಗಿಂತ ನಾವೇನು ಕಡಿಮೆ ಇಲ್ಲ ಎನ್ನುತ್ತಾ ಮಹಿಳೆಯರು ಕೆಲಸ ಆರಂಭಿಸಿರುವ ಮಹಿಳೆಯರು, ಗ್ರಾಮದ ಸ್ವಚ್ಛತೆಗೆ ಟೊಂಕ ಕಟ್ಟಿ ನಿಂತಿದ್ದಾರೆ. ಪಿಯುಸಿವರೆಗೆ ಓದಿರುವ ಇವರಲ್ಲಿ ಬಹುತೇಕರು ಮೂಲತಃ ಕೃಷಿ ಕಾರ್ಮಿಕರು. ಇವರೆಲ್ಲರಿಗೂ ಸದ್ಯ ಉದ್ಯೋಗ ದೊರೆತಿರುವ ಸಂಭ್ರಮ ಒಂದೆಡೆಯಾದರೆ, ಇನ್ನೊಂದೆಡೆ ನಾವು ವಾಹನ ಓಡಿಸುವುದರ ಮೂಲಕ ಗ್ರಾಮ ಸ್ವಚ್ಛತೆಯ ಜವಾಬ್ದಾರಿ ಪಡೆದಿದ್ದೇವೆ ಎಂಬ ಅಭಿಮಾನ. ಈ ಅಭಿಮಾನವೇ ಗ್ರಾಮಗಳ ಸ್ವಚ್ಛತೆಗೆ ಕಾರಣವಾಗಿದೆ. ಜತೆಗೆ ಸ್ಥಳೀಯ ಮಹಿಳೆಯರಿಗೆ ಈ ಕೆಲಸ ನೀಡಿದ್ದು, ಗ್ರಾಮಸ್ಥರ ಸ್ವಚ್ಛತಾ ಕಳಕಳಿ ಇಮ್ಮಡಿಗೊಳ್ಳಲು ಕಾರಣವಾಗಿದೆ.



ಕೊಪ್ಪಳ ಜಿಲ್ಲೆ ಚಳಗೇರಿಯ ಪೂರ್ಣಿಮಾ ವಾಹನ ಓಡಿಸುತ್ತಿರುವುದು. ಸಹಾಯಕಿ ಶಾಂತಮ್ಮ ಜತೆಗಿದ್ದಾರೆ.



ವಾಹನಕ್ಕೆ ಕಸ ತುಂಬುತ್ತಿರುವ ಗ್ರಾಮಸ್ಥರು

ವಾಹನಕ್ಕೆ ಒಬ್ಬ ಚಾಲಕಿ, ಸಹಾಯಕಿ

ಪ್ರತಿ ವಾಹನಗಳಲ್ಲಿ ಚಾಲಕಿಯ ಜತೆಗೆ ಒಬ್ಬ ಸಹಾಯಕಿ ಇದ್ದು, ಗ್ರಾಮಸ್ಥರು ತರುವ ಕಸವನ್ನು ವಾಹನಕ್ಕೆ ಹಾಕುವುದು ಅವರ ಕೆಲಸವಾಗಿದೆ. ಕಸ ತುಂಬಿಕೊಂಡ ವಾಹನ ಗ್ರಾಮದ ಹೊರಭಾಗದಲ್ಲಿರುವ ಕಸ ನಿರ್ವಹಣಾ ಘಟಕಕ್ಕೆ ಸಾಗುತ್ತದೆ. ಅಲ್ಲಿ ಪದ್ಮಾವತಿ ದಾಸರ, ಸಂಗಮ್ಮ, ಸವಿತಾ ಸೇರಿದಂತೆ ನಾಲ್ಕಾರು ಮಹಿಳೆಯರು ತಂದ ಕಸದಲ್ಲಿ ಒಣ ಕಸ ಬೇರ್ಪಡಿಸಿ ಪ್ಲಾಸ್ಟಿಕ್, ಗಾಜು, ರಟ್ಟು, ತಗಡು.. ಹೀಗೆ ವಿಂಗಡಣೆ ಮಾಡುತ್ತಾರೆ.

ಈ ತಂಡದ ಸದಸ್ಯೆ ಚಳಗೇರಿ ಗ್ರಾಮದ ಪೂರ್ಣಿಮಾ ಗುಡುಗುಡಿ ಆರಂಭದಲ್ಲಿ ವಾಹನ ಚಾಲನೆಗೆ ಮುಜುಗರ ತೋರಿದ್ದರು. ಆದರೆ ಗ್ರಾಮಸ್ಥರ ಪ್ರೋತ್ಸಾಹದಿಂದಾಗಿ ಇದೀಗ ನಿರ್ಭೀತಿಯಿಂದಾಗಿ ವಾಹನ ಚಾಲನೆ ಮಾಡುತ್ತಿದ್ದಾರೆ. ಕಿರಿದಾದ ಓಣಿಯಲ್ಲಿ, ಅದೂ ಆಚೀಚೆ ಕಟ್ಟಿದ ದನಕರುಗಳ ಮಧ್ಯೆ ನಾಜೂಕಿನಿಂದ ವಾಹನ ಚಾಲನೆ ಮಾಡುತ್ತಾರೆ. ವಾಹನ ಚಾಲನೆ ಮಾಡಿಕೊಂಡು ಬರುವುದನ್ನು ಕಂಡ ಗ್ರಾಮಸ್ಥರು, ಈಗ ಆಕೆಗೆ ತೊಂದರೆಯಾಗಬಾರದು ಎಂದು ರಸ್ತೆ ವಿಶಾಲಗೊಳಿಸಿ ವಾಹನ ಚಾಲನೆಗೆ ಅನುವು ಮಾಡಿಕೊಟ್ಟಿದ್ದಾರೆ.

> **“ಆರಂಭದಲ್ಲಿ ವಾಹನ ಚಲಾಯಿಸಲು ನನಗೆ ಮುಜುಗರ ಎನಿಸುತ್ತಿತ್ತು. ಗ್ರಾಮಸ್ಥರ ಪ್ರೋತ್ಸಾಹದಿಂದ ಈಗ ಮುಜುಗರ ಮರೆಯಾಗಿದೆ. ಕಸ ಸಂಗ್ರಹಿಸಲು ನಾವು ಹೋಗುವುದು ತಡವಾದರೆ ನಮ್ಮ ಗೆಳತಿಯರು ಹಾಗೂ ಸಾರ್ವಜನಿಕರು ಕರೆ ಮಾಡಿ ಕರೆಯುತ್ತಾರೆ.”**
>
> **ಪೂರ್ಣಿಮಾ ಗುಡುಗುಡಿ**
> ಸ್ವಚ್ಛ ವಾಹಿನಿ ವಾಹನದ ಚಾಲಕಿ

ವಾಹನ ಚಾಲನೆ ಅಷ್ಟೇ ಅಲ್ಲ, ವಾಹನಕ್ಕೆ ನಿತ್ಯ ಗಾಳಿ ತುಂಬುವುದು, ಪಂಕ್ಚರ್ ಹಾಕುವುದು, ಗಾಡಿ ತೊಳೆಯುವಂತಹ ಎಲ್ಲ ಕೆಲಸಗಳನ್ನು ಪೂರ್ಣಿಮಾ ಹಾಗೂ ಸಹಾಯಕಿ ಶಾಂತಮ್ಮ ಮಾಡುತ್ತಿದ್ದಾರೆ, ಅದೂ ಯಾರ ನೆರವಿಲ್ಲದೇ.

ಒಣ ಕಸದ ವಿಲೇವಾರಿಗಾಗಿ ಗ್ರಾಮ ಪಂಚಾಯ್ತಿ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ತಲಾ ₹15.15 ಲಕ್ಷ ವೆಚ್ಚದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಾಣ ಮಾಡಿದೆ. ಇಲ್ಲಿ ಯಶಸ್ವಿಯಾಗಿದ್ದು, ಜಿಲ್ಲೆಯಲ್ಲಿ ಮತ್ತೆ ಐದು ಗ್ರಾ.ಪಂ.ಗಳಲ್ಲಿ ಈ ವ್ಯವಸ್ಥೆ ಅಳವಡಿಸಲಾಗಿದೆ.

34 ಮಹಿಳೆಯರಿಗೆ ಚಾಲನಾ ತರಬೇತಿ

ಸದ್ಯ ಪೂರ್ಣಿಮಾ ಗುಡುಗುಡಿ ಅವರ ಜೊತೆಗೆ, ಮುದೇನೂರಿನ ಸುಧಾ ಈಳಿಗೇರ, ಕಂದಕೂರು ಗ್ರಾಮದ ಸುಮಂಗಲಾ ಹಿರೇಮಠ, ಕುದರಿಮೋತಿಯ ಶಿಲ್ಪಾ ಅವರು ಸ್ವಚ್ಛತಾ ವಾಹನದ ಚಾಲಕಿಯರಾಗಿ ಕಾರ್ಯ ಆರಂಭಿಸಿದ ಮೊದಲ ಮಹಿಳೆಯರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಈಗಾಗಲೇ ಜಿಲ್ಲೆಯಲ್ಲಿ 34 ಮಹಿಳೆಯರಿಗೆ ವಾಹನ ಚಾಲನಾ ತರಬೇತಿ ನೀಡಿದ್ದು, ಅದರಲ್ಲಿ ಎಂಟು ಯುವತಿಯರು ಮಾತ್ರ ವಾಹನ ಚಾಲನೆ ಮಾಡುತ್ತಿದ್ದಾರೆ. ಸಂಬಂಧಪಟ್ಟ ಗ್ರಾ.ಪಂ. ನಿಧಿಯಿಂದ ₹ 6.49 ಲಕ್ಷದಲ್ಲಿ ವಾಹನ ಖರೀದಿಸಿದ್ದಾರೆ.

'ಸರ್ಕಾರದ ಮಾರ್ಗಸೂಚಿಯನ್ವಯ ಸಂಜೀವಿನಿ ಯೋಜನೆಯಡಿಯಲ್ಲಿ ಗ್ರಾ.ಪಂ. ಮಟ್ಟದಲ್ಲಿ ಸಿಬ್ಬಂದಿ ನೇಮಕ ಮಾಡಿಕೊಂಡು ತರಬೇತಿ ನೀಡಲಾಗಿದೆ' ಎನ್ನುತ್ತಾರೆ ಸಂಜೀವಿನಿ ಯೋಜನೆಯ ಮೇಲ್ವಿಚಾರಕ ಮಾದೇಗೌಡ ಪೊಲೀಸ್ ಪಾಟೀಲ.

ಪ್ರತಿ ಗ್ರಾ.ಪಂನಲ್ಲಿ ಘಟಕ

ಪ್ರತಿ ಗ್ರಾ.ಪಂ.ನಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಿ ಕಸವನ್ನು ಸಂಸ್ಕರಣೆ ಮಾಡುವುದು ಈ ಯೋಜನೆ ಉದ್ದೇಶ. ಜಿಲ್ಲೆಯ 8 ಗ್ರಾ.ಪಂ.ನ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪರಸ್ಪರ ಒಡಂಬಡಿಕೆಯಾಗಿದ್ದು, ಐವರು ಸ್ವಸಹಾಯ ಸಂಘದ ಮಹಿಳೆಯರು ಪ್ರತಿನಿತ್ಯ ಕಸವನ್ನು ಪ್ರತ್ಯೇಕಿಸುವ ಕಾರ್ಯ ಮಾಡುತ್ತಿದ್ದಾರೆ. ಬಳಿಕ ಸಂಗ್ರಹವಾದ ಒಣ ಕಸ ಹರಾಜು ಮಾಡಲಾಗುತ್ತದೆ ಎಂದು ಕಸ ವಿಲೇವಾರಿ ಘಟಕ ಕುರಿತು ವಿವರಿಸುತ್ತಾರೆ ಗ್ರಾ.ಪಂ. ಪಿಡಿಒ ಬಸವರಾಜ ಸಂಕನಾಳ ಹಾಗೂ ಅಧ್ಯಕ್ಷ ಬಸವರಾಜ.

'ಸ್ವಚ್ಛ ಭಾರತ ಮಿಷನ್ ಮತ್ತು ನರೇಗಾ ಯೋಜನೆಯಡಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಿಸಲಾಗಿದೆ. ಕಸ ವಿಲೇವಾರಿಗಾಗಿ ಸಂಜೀವಿನಿ ಯೋಜನೆಯಡಿಯಲ್ಲಿ ರಚನೆಯಾಗಿರುವ ಗ್ರಾ.ಪಂ. ಮಟ್ಟದ ಮಹಿಳೆಯರಿಗೆ ಮೊದಲ ಆದ್ಯತೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲ ಗ್ರಾ.ಪಂಗಳಲ್ಲಿ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ಉದ್ದೇಶವಿದೆ' ಎನ್ನುತ್ತಾರೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶಿವಪ್ಪ ಸುಬೇದಾರ.

ಚಿತ್ರಗಳು: ಲೇಖಕರವು

ಏನಾದ್ರೂ ಕೇಳ್ಬೋದು



ವಸಂತ ನಡಹಳ್ಳಿ

ನಾನೇಕೆ ಹೀಗೆ?

- **ಎಂಎಸ್‌ಡಬ್ಲ್ಯು ಪದವಿ ಪಡೆದಿರುವ ಯುವಕ. ನನಗೆ ಯಾವುದೇ ಕೆಲಸ ಮಾಡುವಾಗಲೂ ಹಿಂಜರಿಕೆ. ಕೆಲಸ ಮಾಡುತ್ತಾ ಭಯದಿಂದ ಬೆವರಿ ಎಲ್ಲವನ್ನೂ ಮರೆತು ಗಲಿಬಿಲಿಗೊಳ್ಳುತ್ತೇನೆ. ಕಚೇರಿಯಲ್ಲಿ ಅಪರಿಚಿತರು, ಅಧಿಕಾರಿಗಳು ಪ್ರಶ್ನಿಸಿದರೆ ಉತ್ತರಿಸಲಾಗದೆ ತಡವರಿಸುತ್ತೇನೆ. ಬಾಲ್ಯದಿಂದಲೂ ಓದಿನಲ್ಲಿ ಆಸಕ್ತಿ ಕಡಿಮೆ. ಸರ್ಕಾರಿ ನೌಕರಿಗೆ ಪ್ರಯತ್ನಿಸುವುದಕ್ಕೆ ಆಗುತ್ತಿಲ್ಲ. ನಕಾರಾತ್ಮಕ ಆಲೋಚನೆಯಿಂದಾಗಿ ಸ್ವಂತ ಉದ್ಯಮ ಮಾಡಲು ಬಂಡವಾಳ ಹಾಕಲು ಧೈರ್ಯವಿಲ್ಲದೇ ಕುಗ್ಗಿದ್ದೇನೆ. ಒಂದು ಕೆಲಸವನ್ನೂ ಏಕಾಗ್ರತೆಯಿಂದ ಮಾಡಲಾಗುತ್ತಿಲ್ಲ. ನನ್ನ ಈ ಕೀಳರಿಮೆ ಅಧೈರ್ಯ ನಕಾರಾತ್ಮಕ ಆಲೋಚನೆಯಿಂದ ಹೊರಬರಲು ಪರಿಹಾರ ತಿಳಿಸಿ.**

ಹೆಸರಿಲ್ಲ ಬಾಗಲಕೋಟೆ.

ಪತ್ರದ ಧಾಟಿಯನ್ನು ಗಮನಿಸಿದರೆ ನಿಮ್ಮನ್ನು ನೀವು ಪ್ರಪಂಚದ ಅತ್ಯಂತ ನಿಕೃಷ್ಟ ವ್ಯಕ್ತಿ ಎಂದು ತಿಳಿದುಕೊಂಡಿರುವಂತಿದೆ. ಹುಟ್ಟಬೇಕಾದರೆ ನೀವು ಇಂತಹ ಮನಸ್ಥಿತಿಯಲ್ಲಿ ಇರುವುದು ಸಾಧ್ಯವಿತ್ತೇ? ಇಲ್ಲ ಎಂದಾದರೆ ಬೆಳೆಯುತ್ತಾ ಬಂದಂತೆ ನಿಮ್ಮ ಬಗೆಗೆ ಇಂತಹ ಅಭಿಪ್ರಾಯಗಳು ನಿಮ್ಮೊಳಗೆ ಮೂಡುತ್ತಾ ಹೋಗಿರುತ್ತದೆ ಎಂದಾಯಿತಲ್ಲವೇ?

ಮಿದುಳಿನ ಪೂರ್ಣ ಬೆಳವಣಿಗೆ ಆಗದಿರುವ ಮಗುವಾಗಿರುವಾಗ ಪೋಷಕರ ಮತ್ತು ಸುತ್ತಲಿನ ಜನರ ಅಭಿಪ್ರಾಯಗಳನ್ನೇ ನಮ್ಮದು ಎಂದುಕೊಳ್ಳುವುದು ಸಹಜ. ಆದರೆ ವಯಸ್ಕರಾದ ಮೇಲೂ ಅದೇ ಮನಸ್ಥಿತಿಯಲ್ಲಿ ನಾವು ಇರುವುದು ಹೇಗೆ ಸಾಧ್ಯವಾಗುತ್ತದೆ? ಇದರ ಅರ್ಥವೇನೆಂದರೆ ನಮ್ಮಲ್ಲಿ ಭಾವನಾತ್ಮಕವಾಗಿ ಬೆಳವಣಿಗೆ ಆಗಿಲ್ಲ ಎಂದಲ್ಲವೇ? ಭಾವನಾತ್ಮಕ ಬೆಳವಣಿಗೆ ಆಗಬೇಕೆಂದರೆ ಇವತ್ತಿನ ವಾಸ್ತವವನ್ನು ಗಮನಿಸಿ. ನೀವು ಸ್ನಾತಕೋತ್ತರ ಪದವೀಧರರು. ಆದರೂ ನನಗೆ ಓದಿನಲ್ಲಿ ಆಸಕ್ತಿಯಿಲ್ಲ ಎಂದು ಹೇಗೆ ಒಪ್ಪಿಕೊಳ್ಳುತ್ತೀರಿ? ಈಗಾಗಲೇ ಒಂದು ಖಾಸಗಿ ಉದ್ಯೋಗದಲ್ಲಿದ್ದೀರಿ. ಆದರೂ ನನಗೆ ಸರ್ಕಾರಿ ಉದ್ಯೋಗಕ್ಕೆ ಪ್ರಯತ್ನಿಸಲು ಆಗುತ್ತಿಲ್ಲ ಎಂದು ಹೇಗೆ ನಿರ್ಧರಿಸಿದಿರಿ? ಬಾಲ್ಯದಲ್ಲಿ ಪೋಷಕರು ಗುರುಗಳು ಹೇಳಿದ ಅಭಿಪ್ರಾಯವೇ ನಿಮ್ಮ ಬಗೆಗಿನ ಅಂತಿಮ ಸತ್ಯ ಎಂದುಕೊಂಡು ನೋಯುತ್ತಿದ್ದೀರಲ್ಲವೇ? ಇದನ್ನು ಬದಲಾಯಿಸಬೇಕಾದರೆ ಸಣ್ಣಸಣ್ಣ ಹೊಸ ಪ್ರಯತ್ನ ಮಾಡುತ್ತಾ ಹೋಗಿ. ಸೋಲು ಸಹಜ ಎಂದು ಒಪ್ಪಿಕೊಂಡು ಪ್ರಯತ್ನಗಳನ್ನು ಮುಂದುವರಿಸಿ.

ನಿಮ್ಮ ಕೀಳರಿಮೆ ಹಿಂಜರಿಕೆ ಅಧೈರ್ಯ ಎಲ್ಲರಲ್ಲೂ ಇರುವಂತಹುದೇ. ಇವೆಲ್ಲ ಮನುಷ್ಯರ ಅನಿವಾರ್ಯತೆಗಳು. ಈ ಸ್ಥಿತಿಯಿಂದಲೇ ಎಲ್ಲರೂ ಬೆಳೆಯುತ್ತಾ ಬದಲಾಗುತ್ತಾ ಹೋಗುತ್ತಾರೆ. ಆದರೆ ನೀವು ಅದಕ್ಕೆ ಹುಲಿಯ ವೇಷ ತೊಡಿಸಿದ್ದೀರಿ. ಹಾಗಾಗಿ ನಿಮ್ಮೊಳಗಿರುವ ನೂರಾರು ಅದ್ಭುತ ಅಂಶಗಳು ನಿಮ್ಮ ಗಮನಕ್ಕೆ ಬರುತ್ತಿಲ್ಲ.

ದೀರ್ಘವಾಗಿ ಉಸಿರಾಡುತ್ತಾ ನಿಮ್ಮ ದೇಹವನ್ನು ಗಮನಿಸಿ ಸಡಿಲ ಬಿಡುವ ಅಭ್ಯಾಸ ಮಾಡಿ. ಇದನ್ನು ಆಗಾಗ ಮಾಡುತ್ತಿರಿ. ದೇಹ ಶಾಂತಗೊಂಡರೆ ಮನಸ್ಸನ್ನು ಹಿಡಿತಕ್ಕೆ ತರುವುದು ಸುಲಭ. ಅಗತ್ಯವಿದ್ದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ.

ಇನ್ನಷ್ಟು ಪ್ರಶ್ನೋತ್ತರಕ್ಕೆ www.prajavani.net ನೋಡಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಮ್ಮನ್ನು ಎಲ್ಲ ಮರೆವು, ಪಾಪಗಳಿಂದ ಮುಕ್ತಗೊಳಿಸುವುದೇ ವಿದ್ಯೆ.

-ಚಂದ್ರಶೇಖರ ಕಂಬಾರ

ರಾಜ್ಯದಲ್ಲಿನ ನೇಮಕಾತಿ ಹಗರಣಗಳು ಕೋರ್ಟ್ ನೇತೃತ್ವದ ತನಿಖೆ ಸೂಕ್ತ

ರಾಜ್ಯದಲ್ಲಿ ಇನ್ನೊಂದು ನೇಮಕಾತಿ ಹಗರಣ ಹೊರಬಿದ್ದಿದೆ. ಇದು, ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ ನಡೆದಿದ್ದು, ಶಿಕ್ಷಕರ ಹುದ್ದೆಯನ್ನು ₹ 10 ಲಕ್ಷಕ್ಕೆ ಮಾರಾಟ ಮಾಡಲಾಗಿದೆ ಎಂಬ ಆರೋಪ ಇದೆ. 2012 ಹಾಗೂ 2015ರಲ್ಲಿ ಪ್ರತ್ಯೇಕವಾಗಿ ಹೊರಡಿಸಲಾದ ಎರಡು ಅಧಿಸೂಚನೆಗಳ ಅನ್ವಯ ಆಗಿರುವ ನೇಮಕಾತಿಯಲ್ಲಿ ಈ ಹಗರಣ ನಡೆದಿದೆ ಎನ್ನಲಾಗಿದೆ. 2015ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದರು, ಕಿಮ್ಮನೆ ರತ್ನಾಕರ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದರು. ಈ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ, ಅರ್ಹತೆ ಇಲ್ಲದಿದ್ದರೂ 12 ಜನರನ್ನು ಶಿಕ್ಷಕರನ್ನಾಗಿ ಈ ರೀತಿ ನೇಮಕ ಮಾಡಲಾಗಿದೆ ಎಂಬುದನ್ನು ಈವರೆಗೆ ಪತ್ತೆ ಮಾಡಿದೆ. ವಾಸ್ತವದಲ್ಲಿ ಇವರಲ್ಲಿ ಕೆಲವರು ಹುದ್ದೆಗಳಿಗೆ ಅರ್ಜಿಯನ್ನೇ ಸಲ್ಲಿಸಿರಲಿಲ್ಲ, ಅರ್ಹತಾ ಪರೀಕ್ಷೆಗೆ ಹಾಜರಾಗಿರಲಿಲ್ಲ. ಆದರೂ ನೇಮಕಗೊಂಡಿದ್ದಾರೆ! ಅಕ್ರಮ ನೇಮಕಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಕೆ.ಎಸ್. ಪ್ರಸಾದ್ ಹಾಗೂ 12 ಸಹಶಿಕ್ಷಕರನ್ನು ಸಿಐಡಿ ಇದುವರೆಗೆ ಬಂಧಿಸಿದೆ.

ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಕಾರಣ ತನ್ನ ಮೇಲೆ ಹಗೆ ತೀರಿಸಿಕೊಳ್ಳಲು ಈ ಹಗರಣವನ್ನು ಕೆದಕಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಈಗಿನ ಬಿಜೆಪಿ ನೇತೃತ್ವದ ಆಡಳಿತದ ಅವಧಿಯಲ್ಲಿ ಒಂದಾದ ನಂತರ ಒಂದರಂತೆ ಹೊರಬಂದಿರುವ ಹಗರಣಗಳ ಆರೋಪಗಳಿಂದ ಜನರ ಗಮನವನ್ನು ಬೇರೆಡೆ ತಿರುಗಿಸಲು ಹೀಗೆ ಮಾಡಲಾಗಿದೆ ಎಂದೂ ಕಾಂಗ್ರೆಸ್ ಹೇಳಿದೆ. ಅದೇನೇ ಇದ್ದರೂ ರಾಜ್ಯದಲ್ಲಿನ ನೇಮಕಾತಿಗಳಲ್ಲಿ ಹಗರಣ ನಡೆಯುವುದು ಹೊಸದೇನೂ ಅಲ್ಲ. ಕರ್ನಾಟಕ ಲೋಕಸೇವಾ ಆಯೋಗದಿಂದ ಗೆಜೆಟೆಡ್ ಪ್ರೊಬೆಷನರ್ ಹುದ್ದೆಗಳಿಗೆ ನಡೆದ ನೇಮಕಾತಿ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಹಾಗೂ ಡಿವೈಎಸ್‌ಪಿ ಹುದ್ದೆಗಳಿಗೆ ಶೇಕಡ 150ರಷ್ಟು ಅಭ್ಯರ್ಥಿಗಳು ₹ 50 ಲಕ್ಷದಿಂದ ₹ 1.50 ಕೋಟಿವರೆಗೆ ಲಂಚ ಕೊಟ್ಟಿದ್ದರು ಎಂದು ಸಿಐಡಿ ಕೆಲವು ವರ್ಷಗಳ ಹಿಂದೆ ಪತ್ತೆ ಮಾಡಿತ್ತು. ಈಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಮೂಗಿನ ಅಡಿಯಲ್ಲಿ ನಡೆದಿರುವ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ನೇಮಕಾತಿಯ ಬಹುಕೋಟಿ ಮೊತ್ತದ ಹಗರಣದಲ್ಲಿ ಐಪಿಎಸ್ ಅಧಿಕಾರಿ ಅಮೃತ್ ಪೌಲ್ ಅವರನ್ನು ಬಂಧಿಸಲಾಗಿದೆ. ಪೌಲ್ ಅವರು ಎಡಿಜಿಪಿ ಶ್ರೇಣಿಯ ಅಧಿಕಾರಿ. ಈ ವರ್ಷದ ಆಗಸ್ಟ್‌ನಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಕೆಲವು ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿ ಅಕ್ರಮಗಳು ಆಗಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಕೆಲವರನ್ನು ಬಂಧಿಸಲಾಗಿದೆ. ಯಾವುದೇ ಪಕ್ಷ ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದರೂ, ಸರ್ಕಾರಿ ಹುದ್ದೆಗಳಿಗೆ ನಡೆಯುವ ನೇಮಕಾತಿ ಪ್ರಕ್ರಿಯೆಗಳಲ್ಲಿ ಅಕ್ರಮ ನುಸುಳುತ್ತದೆ ಎಂಬುದು ಈ ಎಲ್ಲ ಪ್ರಕರಣಗಳಿಂದ ಗೊತ್ತಾಗುವ ಅಂಶ.



ವಿವಿಧ ನೇಮಕಾತಿ ಅಕ್ರಮಗಳ ಕುರಿತು ಹೈಕೋರ್ಟ್ ಉಸ್ತುವಾರಿಯಲ್ಲಿ ಅಥವಾ ಲೋಕಾಯುಕ್ತ ಸಂಸ್ಥೆಯ ಮೂಲಕ ಸ್ವತಂತ್ರ ವಿಚಾರಣೆ ನಡೆಸುವುದು ಒಳಿತು

ಶಿಕ್ಷಣ ಇಲಾಖೆ ಕೂಡ ಈ ಬಗೆಯ ಭ್ರಷ್ಟಾಚಾರದಿಂದ ಹೊರತಾಗಿಲ್ಲ ಎಂಬುದು ತೀರಾ ದುರದೃಷ್ಟಕರ. ಶಿಕ್ಷಣ ಇಲಾಖೆಯಲ್ಲಿನ ಭ್ರಷ್ಟಾಚಾರದ ಕುರಿತು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟವೊಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಈಚೆಗೆ ದೂರು ಸಲ್ಲಿಸಿದೆ. ಬಿ.ಸಿ. ನಾಗೇಶ್ ಅವರನ್ನು ಶಿಕ್ಷಣ ಸಚಿವ ಸ್ಥಾನದಿಂದ ಕೆಳಗಿಳಿಸಬೇಕು ಎಂದು ಅದು ಕೋರಿತ್ತು. ಬೇರೆ ಬೇರೆ ನೇಮಕಾತಿಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವಿಚಾರಣೆ ಸ್ವಾಗತಾರ್ಹವೇ ಆದರೂ, ಹಗರಣಗಳ ಪ್ರಮುಖ ಸೂತ್ರಧಾರರು ಹಾಗೂ ದೊಡ್ಡ ಫಲಾನುಭವಿಗಳನ್ನು ಕಾನೂನಿನ ಕೈ ತಲುಪುತ್ತಿರುವಂತೆ ಕಾಣುತ್ತಿಲ್ಲ. ಇದು ವಿಷಾದಕರ. ಸರ್ಕಾರಕ್ಕೆ ನೇರವಾಗಿ ವರದಿ ಮಾಡಿಕೊಳ್ಳುವ ಸಿಐಡಿ, ಅಕ್ರಮಗಳ ಹಿಂದಿನ ಪೂರ್ಣ ಸತ್ಯವನ್ನು ಅನಾವರಣ ಮಾಡುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳುವುದು ಕಷ್ಟ. ವಿವಿಧ ನೇಮಕಾತಿ ಅಕ್ರಮಗಳ ಕುರಿತು ಹೈಕೋರ್ಟ್ ಉಸ್ತುವಾರಿಯಲ್ಲಿ ಅಥವಾ ಲೋಕಾಯುಕ್ತ ಸಂಸ್ಥೆಯ ಮೂಲಕ ಸ್ವತಂತ್ರ ವಿಚಾರಣೆಯೊಂದನ್ನು ನಡೆಸುವುದು ಒಳಿತು.

ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಪರಿತಪಿಸುತ್ತಿರುವುದೇಕೆ ಶಿಕ್ಷಣ ಇಲಾಖೆ?

ಕಾಯ್ದೆಯ ಆಶಯ ಮತ್ತು ಅನುಷ್ಠಾನ ವೈಫಲ್ಯ



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಸಂವಿಧಾನದಲ್ಲಿನ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸುವ ಉದ್ದೇಶದಿಂದ ಶಿಕ್ಷಣ ಹಕ್ಕು ಕಾಯ್ದೆಯನ್ನು (2009) ರೂಪಿಸಲಾಗಿದೆ. ಸಮಾನತೆ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ಮತ್ತು ಮಾನವೀಯ ನೆಲೆಯಲ್ಲಿ ಸಮ ಸಮಾಜವನ್ನು ಕಟ್ಟುವ ಕೆಲಸ ಎಲ್ಲರನ್ನೂ ಒಳಗೊಳ್ಳುವ ಪ್ರಾಥಮಿಕ ಶಿಕ್ಷಣವನ್ನು ಕಲ್ಪಿಸುವ ಅವಕಾಶದಿಂದ ಮಾತ್ರ ಸಾಧ್ಯ ಎಂಬ ಬಲವಾದ ನಂಬಿಕೆಯಿಂದ ಈ ಕಾನೂನನ್ನು ತರಲಾಗುತ್ತಿದೆ ಎಂಬ ಅಂಶ ಕಾಯ್ದೆಯಲ್ಲಿಯೇ ಉಲ್ಲೇಖವಾಗಿದೆ. ಗುಣಾತ್ಮಕವಾದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು ಸರ್ಕಾರ ನಡೆಸುವ ಅಥವಾ ಅನುದಾನ ನೀಡುವ ಶಾಲೆಗಳ ಜವಾಬ್ದಾರಿ ಮಾತ್ರವಾಗಿರದೆ, ಸರ್ಕಾರದಿಂದ ಅನುದಾನವನ್ನು ಅವಲಂಬಿಸದ ಶಾಲೆಗಳ ಕರ್ತವ್ಯವೂ ಆಗಿದೆ ಎಂಬ ಅಂಶವನ್ನು ಒತ್ತಿ ಹೇಳಲಾಗಿದೆ.

ಮಹತ್ವಾಕಾಂಕ್ಷೆಯ ಈ ಕಾಯ್ದೆಯ ಅನುಷ್ಠಾನವು ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯನ್ನು ತರಬಹುದೆಂಬ ನಿರೀಕ್ಷೆಗಳು ಮೂಡಿದ್ದವು. ಆದರೆ, ರಾಜ್ಯದ ಶಾಲಾ ಶಿಕ್ಷಣದಲ್ಲಿನ ಆಡಳಿತ ವೈಫಲ್ಯ, ಭ್ರಷ್ಟಾಚಾರದಂತಹ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕಾಯ್ದೆಯಲ್ಲಿರುವ ಮಹತ್ವದ ಅವಕಾಶಗಳನ್ನು ಸಮರ್ಪಕವಾಗಿ ಜಾರಿಗೊಳಿಸದಿರುವುದೇ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.


ಮೊದಲಿಗೆ, 'ಶಾಲೆ'ಯನ್ನು ವ್ಯಾಖ್ಯಾನಿಸುವ ಮೂಲಕ, ಎಲ್ಲಾ ಬಗೆಯ ಶಾಲೆಗಳನ್ನು ರಾಜ್ಯ ಆಡಳಿತ ವ್ಯಾಪ್ತಿಗೆ ಒಳಪಡಿಸುವ ಅವಕಾಶವನ್ನು ಈ ಕಾಯ್ದೆ ಅಡಿ ಕಲ್ಪಿಸಲಾಗಿದೆ. ಅದರಂತೆ, 'ಶಾಲೆ' ಎಂದರೆ, ಸರ್ಕಾರಿ, ಸರ್ಕಾರಿ ಅನುದಾನಿತ, ನಿರ್ದಿಷ್ಟ ಪ್ರವರ್ಗ ಮತ್ತು ಅನುದಾನರಹಿತ ಶಾಲೆಗಳು. ಯಾವುದೇ ಶಾಲೆಯು ರಾಜ್ಯ, ಸಿಬಿಎಸ್‌ಇ, ಐಸಿಎಸ್‌ಇ ಇತ್ಯಾದಿ ಪಠ್ಯಕ್ರಮಗಳಿಗೆ ಸಂಯೋಜನೆಗೊಂಡಿದ್ದು, ತನ್ನ ವೆಚ್ಚ ಭರಿಸಲು ಸರ್ಕಾರದಿಂದ ಯಾವುದೇ ತೆರನಾದ ಹಣಕಾಸು ನೆರವು ಅಥವಾ ಅನುದಾನವನ್ನು ಪಡೆಯದಿದ್ದಲ್ಲಿ ಅಂತಹ ಶಾಲೆಯನ್ನು ಅನುದಾನರಹಿತ ಶಾಲೆ ಎಂದು ವ್ಯಾಖ್ಯಾನಿಸಲಾಗಿದೆ. ಈ ಎಲ್ಲಾ ಶಾಲೆಗಳು ಆಡಳಿತಾತ್ಮಕವಾಗಿ ರಾಜ್ಯವ್ಯಾಪ್ತಿಗೆ ಒಳಪಡುತ್ತವೆ. ಆದರೆ, ಇಲಾಖೆಯಲ್ಲಿ ಇಂದಿಗೂ ಈ ವಿಷಯದಲ್ಲಿ ಅಧಿಕಾರಿಗಳಲ್ಲಿ ಸ್ಪಷ್ಟತೆ ಇಲ್ಲ. ಇಂದಿನ ಬಹುತೇಕ ಸಮಸ್ಯೆಗಳಿಗೆ ಈ ಗೊಂದಲವೇ ಕಾರಣವಾಗಿದೆ.

ಎರಡನೆಯದಾಗಿ, ಕಾಯ್ದೆಯು ಶಾಲಾ ಶಿಕ್ಷಣದಲ್ಲಿ ವಂತಿಗೆ ಹಾಗೂ ಮಕ್ಕಳ ಪ್ರವೇಶಕ್ಕೆ ಸ್ಕ್ರೀನಿಂಗ್ ಕ್ರಮವನ್ನು ನಿಷೇಧಿಸಿದೆ. ಕಾಯ್ದೆಯ ಅನ್ವಯ, ಅಧಿಸೂಚಿತ ಶುಲ್ಕ ಹೊರತುಪಡಿಸಿ ಉಳಿದ ಯಾವುದೇ ಬಗೆಯ ಹಣ ವಸೂಲಿಯು ದೇಣಿಗೆ ಅಥವಾ ವಂತಿಗೆ ಆಗುತ್ತದೆ. ಸ್ಕ್ರೀನಿಂಗ್ ಕಾರ್ಯವಿಧಾನ ಎಂದರೆ, ಶಾಲೆಯಲ್ಲಿ ಒಂದು ಮಗುವಿಗೆ ಪ್ರವೇಶಾವಕಾಶ ನೀಡುವಾಗ, ಸಮಾನ ಅವಕಾಶದ ವಿನಾ ಮಗುವಿಗೆ ಆದ್ಯತೆ ಮೇಲೆ ಪ್ರವೇಶ ನೀಡಲು ನಿರ್ಧರಿಸುವುದಕ್ಕಾಗಿ ಪಾಲಿಸುವ ಆಯ್ಕೆಯ ವಿಧಾನ. ಯಾವುದೇ ಶಾಲೆಯು ಮಗುವಿನ ಪ್ರವೇಶಕ್ಕಾಗಿ ವಂತಿಗೆ ವಸೂಲು ಮಾಡುವಂತಿಲ್ಲ ಮತ್ತು ಮಗುವನ್ನು ಅಥವಾ ಪೋಷಕರನ್ನು ಸ್ಕ್ರೀನಿಂಗ್‌ಗೆ ಒಳಪಡಿಸುವಂತಿಲ್ಲ. ಇದನ್ನು ಉಲ್ಲಂಘಿಸಿ ವಂತಿಗೆ ಸ್ವೀಕರಿಸಿದರೆ, ಹಾಗೆ ಪಡೆದ ವಂತಿಗೆಯ ಹತ್ತು ಪಟ್ಟಿನವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆ ವಿಧಿಸಬಹುದು.

ಪ್ರವೇಶಕ್ಕಾಗಿ ಮಗುವನ್ನು ಸ್ಕ್ರೀನಿಂಗ್‌ಗೆ ಒಳಪಡಿಸಿದರೆ, ಮೊದಲ ಉಲ್ಲಂಘನೆಗಾಗಿ ₹ 25 ಸಾವಿರ ಮತ್ತು ಆ ನಂತರದ ಪ್ರತಿಯೊಂದು ಉಲ್ಲಂಘನೆಗಾಗಿ ತಲಾ ₹ 50 ಸಾವಿರ ಜುಲ್ಮಾನೆ ವಿಧಿಸಬಹುದಾಗಿದೆ. ಆದರೆ, ಈ ಕಾನೂನಿನ ಅಂಶಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದ ಕೆಳಹಂತದ ಅಧಿಕಾರಿಗಳು, ಖಾಸಗಿ ಶಾಲೆಗಳ ಜೊತೆ ಶಾಮೀಲಾಗಿ ಕಾನೂನನ್ನು ಗಾಳಿಗೆ ತೂರಿದ್ದಾರೆ. ಬೆಂಗಳೂರು ಸೇರಿದಂತೆ ಹಲವು ಪ್ರಮುಖ ಜಿಲ್ಲೆಗಳಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ ಹುದ್ದೆಗಳಿಗೆ ಎಲ್ಲಿಲ್ಲದ ಬೇಡಿಕೆ ಇದೆ. ಅತಿಹೆಚ್ಚು ಲಂಚ ನೀಡಿದವರಿಗೆ ಅಂತಹ ಕಡೆ ಅವಕಾಶ ಲಭಿಸುತ್ತದೆ. ಪರಿಣಾಮವಾಗಿ ಶಾಲೆಗಳು ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲೇ ಎಲ್ಲಾ ಪ್ರವೇಶ ಪ್ರಕ್ರಿಯೆಗಳನ್ನು ಕಾನೂನುಬಾಹಿರವಾಗಿ ನಡೆಸುವುದು ಇಂದಿಗೂ ನಿರಂತರವಾಗಿ ಮುಂದುವರಿದಿದೆ. ವಾಸ್ತವದಲ್ಲಿ, ಕಾಯ್ದೆ ಬಂದ ನಂತರ ಉಲ್ಲಂಘನೆಗಳು ನಾಲ್ಕೈದು ಪಟ್ಟು ಹೆಚ್ಚಿವೆ.

ಕಾಯ್ದೆಯ ಮತ್ತೊಂದು ಆಶಯದಂತೆ, ಅನುದಾನರಹಿತ ಶಾಲೆಗಳು ಒಂದನೇ ತರಗತಿಯಲ್ಲಿ ಕನಿಷ್ಠ ಶೇ 25ರಷ್ಟು ಸೀಟುಗಳನ್ನು ನೆರೆಹೊರೆಯ ಅವಕಾಶವಂಚಿತ, ದುರ್ಬಲ ವರ್ಗದ ಮಕ್ಕಳಿಗೆ ನೀಡಬೇಕು. ಅದರಲ್ಲೂ ಶಿಕ್ಷಣವನ್ನು ಉಚಿತವಾಗಿ ಒದಗಿಸಬೇಕು. ಇಂತಹ ಶಾಲೆಗಳಲ್ಲಿನ ಶಾಲಾಪೂರ್ವ ಶಿಕ್ಷಣಕ್ಕೆ ಕೂಡ ಈ ನಿಯಮ ಅನ್ವಯಿಸುತ್ತದೆ.

ಕಾಯ್ದೆಯಲ್ಲಿನ ಈ ಅಂಶವು ವ್ಯಾಪಕ ಟೀಕೆಗೆ ಒಳಗಾಗಿತ್ತು. ಕಾರಣ, ಮೂಲಭೂತ ಹಕ್ಕಿನ ಅನ್ವಯ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ರೀತಿಯಲ್ಲಿ ಸರ್ಕಾರ ತನ್ನ ಶಾಲೆಗಳನ್ನು ಬಲವರ್ಧನೆಗೊಳಿಸಿದಲ್ಲಿ, ಪಾಲಕರಿಗೆ ತಮ್ಮ ಮಕ್ಕಳನ್ನು ಖಾಸಗಿ ಅನುದಾನರಹಿತ ಶಾಲೆಗಳಿಗೆ ಕಳಿಸುವ ಪ್ರಮೇಯವೇ ಬರುವುದಿಲ್ಲ. ಇದಕ್ಕೆ ಉತ್ತಮ ಉದಾಹರಣೆಯೆಂದರೆ, ಕೇಂದ್ರ ಸರ್ಕಾರ ನಡೆಸುವ ಕೇಂದ್ರೀಯ ವಿದ್ಯಾಲಯಗಳು. ಸರ್ಕಾರ ತನ್ನ ಶಾಲೆಗಳನ್ನು ಬಲವರ್ಧನೆಗೊಳಿಸುವ ಜೊತೆ ಜೊತೆಗೆ ಈ ಅವಕಾಶವನ್ನು ಕಲ್ಪಿಸಬೇಕೇ ವಿನಾ ಸರ್ಕಾರವೇ ಹಣ ಕೊಟ್ಟು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸುವುದು ರಾಜ್ಯ ಪ್ರಾಯೋಜಿತ ಖಾಸಗೀಕರಣವಾಗುತ್ತದೆ ಎಂಬ ಟೀಕೆಗಳು ವ್ಯಕ್ತವಾದವು. ಅದರ ನಡುವೆಯೂ ಈ ಅವಕಾಶವನ್ನು ಸರ್ಕಾರವು ಆರಂಭಿಕ ವರ್ಷಗಳಲ್ಲಿ ಅತ್ಯಂತ ಉತ್ಸಾಹದಿಂದ ಜಾರಿಗೊಳಿಸಿತು. ಅದು ಎಷ್ಟರ ಮಟ್ಟಿಗೆ ಎಂದರೆ, ಕಾಯ್ದೆಯಲ್ಲಿ ಸರ್ಕಾರಿ ಶಾಲೆಗಳನ್ನು ಬಲಗೊಳಿಸುವ ಹತ್ತು ಹಲವು ಅವಕಾಶಗಳಿದ್ದಾಗ್ಯೂ ಅವೆಲ್ಲವನ್ನೂ ನಿರ್ಲಕ್ಷಿಸಿ, ಇದೊಂದೇ ಮಾರ್ಗೋಪಾಯ ಎನ್ನುವ ರೀತಿಯಲ್ಲಿ ಜಾರಿಗೊಳಿಸಲಾಯಿತು. ಇದಕ್ಕೆ ಮೂಲ ಕಾರಣ, ಇದರ ಹಿಂದೆ ಇರುವ ಹಣಕಾಸಿನ ವ್ಯವಹಾರ. ಇದು ಶಿಕ್ಷಣ ಇಲಾಖೆಯಲ್ಲಿ ಪರಮ ಭ್ರಷ್ಟಾಚಾರಕ್ಕೆ ನಾಂದಿಯಾಯಿತು.



ಇಲ್ಲೊಂದು ಗಮನಿಸಬೇಕಾದ ಸಂಗತಿ ಇದೆ. ಕಾಯ್ದೆಯ ಅನ್ವಯ ಶೇ 25ರಷ್ಟು ಮಕ್ಕಳಿಗೆ ಉಚಿತವಾದ ಕಡ್ಡಾಯ ಶಿಕ್ಷಣ ಒದಗಿಸಬೇಕಾದ ಖಾಸಗಿ ಅನುದಾನರಹಿತ ಶಾಲೆಗಳು, ಸರ್ಕಾರದಿಂದ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಭೂಮಿ, ಕಟ್ಟಡ, ಸಾಧನ ಸಾಮಗ್ರಿ ಅಥವಾ ಇನ್ನಿತರ ಸೌಲಭ್ಯಗಳನ್ನು ಪಡೆದಿದ್ದಲ್ಲಿ, ಆ ಸೌಲಭ್ಯ ಅಥವಾ ರಿಯಾಯಿತಿ ಪ್ರಮಾಣಕ್ಕೆ ಅನುಗುಣವಾಗಿ ಶಾಲೆಗಳು ಪಡೆಯಬಹುದಾದ ಶುಲ್ಕ ಮರುಪಾವತಿಗೆ ಸಂಬಂಧಿಸಿದ ಮಾನದಂಡ ನಿರ್ಧಾರವಾಗುತ್ತದೆ. ವಿಪರ್ಯಾಸವೆಂದರೆ, ಅಧಿಕಾರಿಗಳು ಇಂತಹ ಶಾಲೆಗಳು ಸರ್ಕಾರದಿಂದ ಯಾವ ಸೌಲಭ್ಯವನ್ನು ಹೀಗೆ ಪಡೆದಿವೆ ಎಂಬುದನ್ನು ಮ್ಯಾಪಿಂಗ್ ಮಾಡುವ ಗೋಜಿಗೇ ಹೋಗಿಲ್ಲ. ಬದಲಿಗೆ, ಎಲ್ಲಾ ಶಾಲೆಗಳಿಗೂ ಆರ್‌ಟಿಇ ಕಾಯ್ದೆಯ ಅನ್ವಯ ನಿಗದಿತ ಹಣವನ್ನು ಬಿಡುಗಡೆ ಮಾಡಿದರು. ಕಾರಣ, ಅದರಲ್ಲಿ ಅಧಿಕಾರಿಗಳ ಹಿತಾಸಕ್ತಿಯೂ ಅಡಗಿತ್ತು.

ಕಾಯ್ದೆಯ ನಿಯಮಾನುಸಾರ ಶಾಲೆಗಳು ಕಡ್ಡಾಯವಾಗಿ ಮಾನ್ಯತಾ ಪ್ರಮಾಣಪತ್ರವನ್ನು ಪಡೆಯಬೇಕು. ಅದಿಲ್ಲದೆ ಶಾಲೆಯನ್ನು ಆರಂಭಿಸುವಂತಿಲ್ಲ ಮತ್ತು ನಡೆಸುವಂತಿಲ್ಲ. ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿದ ನಿಯಮ ಮತ್ತು ಮಾನಕ ಗುಣಮಟ್ಟಗಳನ್ನು ಪೂರೈಸದ ವಿನಾ ಶಾಲೆಗೆ ಮಾನ್ಯತೆ ನೀಡುವಂತಿಲ್ಲ. ಷರತ್ತುಗಳನ್ನು ಉಲ್ಲಂಘಿಸಿದಾಗ, ಸಂಬಂಧಿಸಿದ ಪ್ರಾಧಿಕಾರವು ಲಿಖಿತ ಆದೇಶದ ಮೂಲಕ ಮಾನ್ಯತೆಯನ್ನು ಹಿಂತೆಗೆದುಕೊಳ್ಳಬಹುದು. ಆ ನಂತರವೂ ಶಾಲೆ ನಡೆಸುವುದನ್ನು ಮುಂದುವರಿಸಿದರೆ ಒಂದು ಲಕ್ಷ ರೂಪಾಯಿಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಪಡಿಸಬಹುದಾಗಿದೆ.

ಕಾನೂನಿನಲ್ಲಿ ಇಷ್ಟೆಲ್ಲಾ ಕಠಿಣ ನಿಬಂಧನೆಗಳಿದ್ದರೂ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಶಿಸ್ತು, ಪಾರದರ್ಶಕ ಆಡಳಿತ ವ್ಯವಸ್ಥೆಯ ಜಾರಿಗೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನಿಸಲಿಲ್ಲ. ವೈಫಲ್ಯದ ಫಲವಾಗಿ, ಇಂದು ಶಿಕ್ಷಣ ಇಲಾಖೆಯು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಪರಿತಪಿಸುವಂತಾಗಿದೆ. ಇಲಾಖೆಯ ನೇತೃತ್ವ ವಹಿಸಿರುವ ಸಚಿವರು ಈ ಎಲ್ಲಾ ಅವಾಂತರಗಳ ಜವಾಬ್ದಾರಿ ಹೊರಬೇಕಾಗುತ್ತದೆ. 'ಒಳ್ಳೆಯದು ಮಾತ್ರ ನನಗಿರಲಿ, ಆಡಳಿತ ವೈಫಲ್ಯ, ಗೊಂದಲ, ಭ್ರಷ್ಟಾಚಾರದ ಆರೋಪಗಳಿಗೆ ನಾನು ಹೊಣೆಯಲ್ಲ' ಎನ್ನುವುದು ಪಲಾಯನವಾದ ಆಗುತ್ತದೆ.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ಚುರುಮುರಿ



ಸಿಗ್ನೇಚರ್ ಡಿಶ್

• ಕೆ.ವಿ.ರಾಜಲಕ್ಷ್ಮಿ

'ಇನ್ನೇನು ಸಾಮ್ರಾಟ್ ಹೋಟೆಲ್ ಇರೋಲ್ಲ, ನಮ್ಮಪ್ಪನಿಗೆ ವಿಧಾನಸೌಧದಲ್ಲಿ ಕೆಲಸ ಇದ್ದಾಗ ಒಂದೆರಡು ಬಾರಿ ಹೋಗಿದ್ದೀನಿ. ಕಬ್ಬನ್‌ಪಾರ್ಕ್ ತುಂಬಾ ಓಡಾಡಿಸಿ, ರವೆ ಇಡ್ಲಿ ಕೊಡಿಸುವಾಗ ಅದೆಷ್ಟು ಸಂಭ್ರಮ! ನಿಮ್ಮಪ್ಪನ್ನ ಕಟ್ಕೊಂಡ ಮೇಲೆ ಅವಕ್ಕೆಲ್ಲ ಅವಕಾಶವೇ ಇಲ್ಲ' ನನ್ನವಳು ನನ್ನನ್ನೇ ಟಾರ್ಗೆಟ್ ಮಾಡಿದಳು.

'ಹೌದಮ್ಮ, ನಾನೂ ಫ್ರೆಂಡ್ಸ್ ಜೊತೆ ಹೋಗಿದ್ದೀನಿ, ಜಾಮೂನು ಸೂಪರ್. ಇವೆಲ್ಲ ಆ ಹೋಟೆಲಿನ ಸಿಗ್ನೇಚರ್ ಡಿಶ್‌ಗಳು'.

'ಸಿಗ್ನೇಚರ್ ಅಂದ್ರೇನು, ಸಹಿ ಹಾಕ್ತಾರಾ?' ಅತ್ತೆಯ ಸಂಶಯಕ್ಕೆ ನಗು ಬಂದರೂ ಸಹಿಸಿಕೊಂಡೆ, ಮುಂದಿನ ಪರಿಣಾಮ ನೆನೆದು.

'ಹಾಗಲ್ಲ, ಹೋಟೆಲ್‌ಗೆ ಐಡೆಂಟಿಟಿ ಕೊಡುವಂಥ ತಿನಿಸು, ಅಷ್ಟು ಸ್ವಾದಿಷ್ಟ... ಹೋಟೆಲ್ ಇಲ್ಲದಿದ್ರೂ ಚಾಲುಕ್ಯ ಸರ್ಕಲ್ ಅನ್ನೋದು ಹಾಗೇ ಉಳಿಯುತ್ತೆ' ಪುಟ್ಟಿಯ ವಿವರಣೆ.

'ನಿಜ, ನಮಗೆ ಅದೇ ರೂಢಿಯಾಗಿರುತ್ತಲ್ಲ? ಈಗ ಮೈಸೂರು ಬ್ಯಾಂಕ್ ಹೆಸರು ಬದಲಾಗಿದ್ರೂ ಮೈಸೂರ್ ಬ್ಯಾಂಕ್ ಸರ್ಕಲ್ ಅಂತಲೇ ಹೇಳ್ತೀವಿ. ಥಿಯೇಟರ್‌ಗಳೆಲ್ಲ ಮಾಲೋ ಮತ್ತೊಂದೋ ಆಗಿದ್ರೂ ಅದೇ ಹೆಸರಲ್ಲೇ ಆ ಪ್ರದೇಶವನ್ನ ಗುರುತಿಸ್ತೀವಿ' ನಾನೂ ದನಿಗೂಡಿಸಿದೆ.

'ಅಲ್ವೇ ಮತ್ತೆ? ಪಂಪ ಮಹಾಕವಿ ರಸ್ತೆ ಅನ್ನೋದರಲ್ಲೇ ಸಾಹಿತ್ಯದ ಪರಿಮಳವಿದೆ. ಅದನ್ನು ಮತ್ಯಾಕೆ ಕನ್ನಡ ಸಾಹಿತ್ಯ ಪರಿಷತ್ ರಸ್ತೆ ಅಂತ ಬದಲಾಯಿಸೋಕೆ ಹೊರಟಿದ್ರೋ ಅರ್ಥವಾಗಲಿಲ್ಲ' ಅತ್ತೆಯ ಮಾತು ಲಾಜಿಕಲ್ ಅನ್ನಿಸಿತು.

'ಗಾಣಗಾಪುರದ ಹತ್ತಿರ ಸೇತುವೆ ಜಲಾವೃತವಾಗಿದ್ದರೂ ಒಂದು ಟ್ರಕ್ ಎಷ್ಟು ಸ್ಪೀಡ್ ಆಗಿ ಸ್ಕಿಡ್ ಆಗ್ದೇ ಬಂತು ಗೊತ್ತಾ' ಪುಟ್ಟಿ ಕಣ್ಣರಳಿಸಿದಳು.

'ಗುಂಡಿ ರಸ್ತೆಗಳನ್ನೇ ಜೀರ್ಣಿಸಿಕೊಂಡು ನಡೀತಿರೋರು ನಾವು, ಇವೆಲ್ಲ ಏನು ಮಹಾ?' ನನ್ನವಳು ಮೊಟಕಿದಳು.

ಅಷ್ಟರಲ್ಲಿ ಕಂಠಿಯ ಫೋನ್. ಸ್ಪೀಕರ್ ಆನ್ ಮಾಡಿದೆ. 'ಬಾಸ್‌ನ ಪೇರೆಂಟ್ಸ್‌ಗೆ ಸಾಮ್ರಾಟ್‌ನಲ್ಲಿ ದೋಸೆ ತಿನ್ನೋ ಆಸೆ. ನಾನೂ, ಶ್ರೀಮತಿ ಜಾಯಿನ್ ಆಗ್ತಿದ್ದೀವಿ, ನೀವೂ ಬರೋದಿದ್ರೆ ಪಿಕ್ ಮಾಡ್ತೀನಿ' ಎಂದ.

'ನಾನೂ, ನಮ್ಮಮ್ಮ ಗ್ಯಾರಂಟಿ' ನನಗಿಂತ ಮೊದಲೇ ನನ್ನವಳು ಉತ್ತರಿಸಿದಳು.

ದಿನದ ಟ್ವೀಟ್

ಆದರ್ಶಪ್ರಾಯ ಮಾದರಿ

ನಾನೊಬ್ಬ ವೈದ್ಯನಾಗಿದ್ದು, ಯಾವುದೇ ಫಾರ್ಮಾ ಕಂಪನಿಯಿಂದ ಯಾವುದೇ ರೀತಿಯ ಅನುಕೂಲ ಮಾಡಿಕೊಂಡಿಲ್ಲ, ಹಣ ಪಡೆದಿಲ್ಲ ಮತ್ತು ವಿದೇಶ ಪ್ರವಾಸಕ್ಕೆ ತೆರಳಿಲ್ಲ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಹೀಗಾಗಿ, ರೋಗಿಗಳ ಪರವಾಗಿ ಸತ್ಯಸಂಗತಿಗಳನ್ನು ಮಾತನಾಡುವ ಧೈರ್ಯವನ್ನು ಹೊಂದಿದ್ದೇನೆ.



ಡಾ. ರಾಹುಲ್ ಘುಲೆ, ಮುಂಬೈನ 'ಒನ್ ರುಪೀ ಕ್ಲಿನಿಕ್'ನ ಸಂಸ್ಥಾಪಕ

ಕಿಡಿನುಡಿ

1991ರ ಸುಧಾರಣೆಗಳು 'ಅರೆಬೆಂದವು' ಎಂದು ಹಣಕಾಸು ಸಚಿವರು ಹೇಳಿರುವುದಾಗಿ ವರದಿಯಾಗಿದೆ. ಡಾ. ಮನಮೋಹನ್ ಸಿಂಗ್ ಅವರು ಅತಿಯಾಗಿ ಬೇಯಿಸಿದ ಮತ್ತು ರುಚಿಸದ ನೋಟು ರದ್ದತಿ, ಬಹುಸ್ತರಗಳ ಜಿಎಸ್‌ಟಿ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ತೀವ್ರ ಹೊರೆ ಹೇರುವಂತಹ ತೆರಿಗೆಗಳನ್ನು ಉಣಬಡಿಸದೇ ಇದ್ದುದಕ್ಕೆ ದೇವರಿಗೆ ಧನ್ಯವಾದ ಹೇಳಬೇಕು. ತಾವು ವಿಶ್ವವಿದ್ಯಾಲಯದಲ್ಲಿ ಬೇಕರಿ ಮತ್ತು ಅಡುಗೆ ಕೋರ್ಸ್‌ಗಳ ತರಬೇತಿ ಪಡೆದಿರುವುದನ್ನು ಬಹಿರಂಗಪಡಿಸಿದ್ದಕ್ಕಾಗಿ ಸಚಿವರಿಗೆ ನಾವು ವಂದಿಸುತ್ತೇವೆ.



ಪಿ.ಚಿದಂಬರಂ, ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 17-9-1997

• ಶಾಸಕರಿಗೆ ಲಂಚ: ಕೇಸರಿ ವಿರುದ್ಧ ತನಿಖೆಗೆ ಸೂಚನೆ

ನವದೆಹಲಿ, ಸೆಪ್ಟೆಂಬರ್ 16 (ಪಿಟಿಐ)– ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು 1988 ಮತ್ತು 1994ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಲು ಶಾಸಕರಿಗೆ ಲಂಚ ನೀಡಿದ್ದರು ಎಂಬ ಆರೋಪದ ಬಗ್ಗೆ ವಿವರವಾಗಿ ತನಿಖೆ ನಡೆಸುವಂತೆ ದೆಹಲಿ ಹೈಕೋರ್ಟ್ ಇಂದು ಸಿಬಿಐಗೆ ಸೂಚಿಸಿತು.

ಕೇಸರಿ ಅವರು ರಾಜ್ಯಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಸಮಯದಲ್ಲಿ ಬಿಹಾರದ ಕೆಲವು ಶಾಸಕರ ಖಾತೆಗೆ ಭಾರಿ ಪ್ರಮಾಣದ ಹಣ ಸಂದಾಯವಾಗಿರುವುದರ ಬಗ್ಗೆ ಸಿಬಿಐ ನೀಡಿದ ವರದಿಗೆ ತೃಪ್ತಿ ವ್ಯಕ್ತಪಡಿಸಿದ ನ್ಯಾಯಮೂರ್ತಿ ಜಸ್ಪಾಲ್ ಸಿಂಗ್ ಮತ್ತು ನ್ಯಾಯಮೂರ್ತಿ ಮನ್‌ಮೋಹನ್ ಸರೀನ್ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠ ಕೇಸರಿ ವಿರುದ್ಧ ತನಿಖೆ ಮುಂದುವರಿಸಿ ಶೀಘ್ರ ಪೂರ್ಣಗೊಳಿಸುವಂತೆ ಆದೇಶಿಸಿತು.

• ಮೇವು ಹಗರಣ: ಶರಣಾದ ಮಿಶ್ರಾ ಬಂಧನದಲ್ಲಿ

ಪಟ್ನಾ, ಸೆಪ್ಟೆಂಬರ್ 16 (ಯುಎನ್‌ಐ)– ಮೇವು ಹಗರಣ ಆರೋಪದ ಹಿನ್ನೆಲೆಯಲ್ಲಿ ಬಿಹಾರದ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಡಾ. ಜಗನ್ನಾಥ್ ಮಿಶ್ರಾ ಅವರು ಇಂದು ನಿಯೋಜಿತ ಸಿಬಿಐ ನ್ಯಾಯಾಲಯದ ಮುಂದೆ ಹಾಜರಾದರು.

ನಿಯೋಜಿತ ಸಿಬಿಐ ನ್ಯಾಯಾಲಯದ ವಿಶೇಷ ನ್ಯಾಯಮೂರ್ತಿ ಎಸ್.ಕೆ. ಲಾಲ್ ಅವರ ಮುಂದೆ ಶರಣಾದ ಡಾ. ಮಿಶ್ರಾ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇಡುವಂತೆ ಆದೇಶ ನೀಡಲಾಯಿತು. ಬೇವೂರ್ ಕೇಂದ್ರ ಕಾರಾಗೃಹದಲ್ಲಿ ಅವರನ್ನು ಬಂಧಿಸಿಡಲಾಯಿತು. ಅವರನ್ನು ಮತ್ತೆ ಸೆಪ್ಟೆಂಬರ್ 19ರಂದು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಜೈಲಿನ ಸೂಪರಿಂಟೆಂಡೆಂಟ್ ಅವರಿಗೆ ನ್ಯಾಯಾಲಯ ಆದೇಶಿಸಿತು.

50 ವರ್ಷಗಳ ಹಿಂದೆ

ಭಾನುವಾರ, 17-9-1972

• ಮೈಸೂರು ರಾಜ್ಯದಲ್ಲೂ ಶ್ರೀಮಂತ ರೈತರು

ನವದೆಹಲಿ, ಸೆಪ್ಟೆಂಬರ್ 16– ರಾಷ್ಟ್ರದಲ್ಲಿ ಅಸಂಖ್ಯಾತ ಮಂದಿ ಶ್ರೀಮಂತ ರೈತ ಕುಟುಂಬಗಳಿರುವ ಏಳು ರಾಜ್ಯಗಳಲ್ಲಿ ಮೈಸೂರು ರಾಜ್ಯವೂ ಒಂದು ಎಂದು ಆರ್ಥಿಕ ಮತ್ತು ವೈಜ್ಞಾನಿಕ ಸಂಶೋಧನಾ ಪ್ರತಿಷ್ಠಾನ (ಖಾಸಗಿ ಸಂಸ್ಥೆ) ನಡೆಸಿದ ಸಮೀಕ್ಷೆಯಿಂದ ವ್ಯಕ್ತಪಟ್ಟಿದೆ.

ಶ್ರೀಮಂತ ಕುಟುಂಬಗಳಿರುವ ಏಳು ರಾಜ್ಯಗಳು: ಪಂಜಾಬ್, ಹರಿಯಾಣ, ರಾಜಸ್ತಾನ, ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಮೈಸೂರು. ಸಮಗ್ರ ರಾಷ್ಟ್ರದಲ್ಲಿ 'ಭಾರಿ ಆದಾಯವಿರುವ' ಶ್ರೀಮಂತ ಕುಟುಂಬಗಳಲ್ಲಿ 7/10 ಭಾಗದಷ್ಟು ಮಂದಿ ಈ ಏಳು ರಾಜ್ಯಗಳಲ್ಲಿದ್ದಾರೆ. ರೈತ ಕುಟುಂಬಗಳ ಹತ್ತು ವರ್ಷದ ಕೃಷಿ ಆದಾಯದ ಬಗ್ಗೆ (1960-61 ರಿಂದ 1970-71) ಅಂದಾಜು ಮಾಡಲಾಗಿದೆ.

• ಲೆಬನಾನ್ ತೀರಾ ಒಳಕ್ಕೆ ಇಸ್ರೇಲಿ ಪಡೆ ಮುತ್ತಿಗೆ: ಎರಡು ಸೇತುವೆಗಳ ಧ್ವಂಸ

ಟೆಲ್ ಅವೀವ್, ಸೆಪ್ಟೆಂಬರ್ 16– ಲೆಬನಾನ್‌ನಲ್ಲಿ ಹಿಂದೆಂದೂ ಹೋಗದಿದ್ದಷ್ಟು ತೀರಾ ಒಳಕ್ಕೆ ಇಂದು ಇಸ್ರೇಲಿ ಟ್ಯಾಂಕ್‌ಗಳು ಮತ್ತು ಇನ್‌ಫೆಂಟ್ರಿ ದಳ ನುಗ್ಗುತ್ತಿದ್ದರೆ ಇನ್ನೊಂದು ಕಡೆ ಇಸ್ರೇಲಿ ಜೆಟ್‌ಗಳು ಲಿಟಾನಿ ನದಿಗೆ ಕಟ್ಟಿದ್ದ ಎರಡು ಸೇತುವೆಗಳನ್ನು ಧ್ವಂಸ ಮಾಡಿದವು.

ಸಂಗತ

ಕಲ್ಯಾಣದ ಆಶಯ ಸಾಕಾರಗೊಳ್ಳಲಿ

ಕಲ್ಯಾಣ ಕರ್ನಾಟಕವೆಂದು ನಾಮಕರಣ ಮಾಡಿ ಮೂರು ವರ್ಷಗಳೇ ಕಳೆದಿದ್ದರೂ ಇವತ್ತಿಗೂ ಯಾವುದೇ ಹೊಸತಿನ ಕಲ್ಯಾಣವಿಲ್ಲ

• ಮಲ್ಲಿಕಾರ್ಜುನ ಕಡಕೋಳ

ಕಲ್ಯಾಣ ಕರ್ನಾಟಕಕ್ಕೆ ಪ್ರತಿವರ್ಷ ಎರಡು ಸ್ವಾತಂತ್ರ್ಯೋತ್ಸವಗಳು. ಒಂದು, ಆಗಸ್ಟ್ 15. ಮತ್ತೊಂದು, ಸೆಪ್ಟೆಂಬರ್ 17. ಅದರಂತೆ ಇಂದು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ. ಸರ್ಕಾರವೇ ಈ ಬಾರಿ ಕಲ್ಯಾಣ ಕರ್ನಾಟಕ ಸ್ವಾತಂತ್ರ್ಯ ಅಮೃತ ಮಹೋತ್ಸವ ಘೋಷಿಸಿದೆ. ಅಂದಹಾಗೆ, ಮೂರು ವರ್ಷಗಳ ಹಿಂದೆ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ 2019ರ ವಿಮೋಚನಾ ದಿನಾಚರಣೆಯಂದು ಹೈದರಾಬಾದ್ ಕರ್ನಾಟಕ ಪ್ರಾಂತ್ಯವನ್ನು 'ಕಲ್ಯಾಣ ಕರ್ನಾಟಕ' ಎಂದು ನಾಮಕರಣ ಮಾಡಿದರು. ಆ ಮೂಲಕ ಹಳೆಯ ಹೈದರಾಬಾದ್ ಕರ್ನಾಟಕ ವಿಮೋಚನೆ ದಿನದ ಹೆಸರು ಬದಲಾವಣೆ ಮಾತ್ರವಲ್ಲದೆ ಅದರ ಒಟ್ಟು ಬದುಕಿನ ನೈಜ ಇತಿಹಾಸ ಶೋಧನೆಗೆ ಹಾದಿ ಹಾಕಿಕೊಟ್ಟರು.


ಕಲಬುರಗಿ ಮತ್ತು ಬೀದರ್‌ನ ಬಸವಕಲ್ಯಾಣ, ಯಾದಗಿರಿ, ಕೊಪ್ಪಳ, ರಾಯಚೂರಿನ ಅಮರಕಲ್ಯಾಣ, ಬಳ್ಳಾರಿ, ವಿಜಯನಗರದ ವಿಜಯಕಲ್ಯಾಣ ಸೇರಿಯೇ ಸಮಗ್ರಕಲ್ಯಾಣ. ಅದು ಮೂರು ಕಲ್ಯಾಣಗಳ ಸಂಗಮದ ಮಹಾಕನಸು. ಕಲ್ಯಾಣ ಕರ್ನಾಟಕವೆಂದು ಹೊಸ ಹೆಸರಿನಿಂದ ನಾಮಕರಣ ಮಾಡಿ ಮೂರು ವರ್ಷಗಳೇ ಕಳೆದುಹೋದವು. ಆದರೆ ಇವತ್ತಿಗೂ ಯಾವುದೇ ಹೊಸತಿನ ಕಲ್ಯಾಣವಿಲ್ಲ.

ಹಾಗೆಂದು ಈ ಹಿಂದಿನ ದಶಕಗಳಲ್ಲಿ ಬಿಲ್ಕುಲ್ ಅಭಿವೃದ್ಧಿಯೇ ಆಗಿಲ್ಲವೆಂದು ಹೇಳಲಾಗದು. ಆದರೆ ದಕ್ಷಿಣ ಕರ್ನಾಟಕಕ್ಕೆ ಹೋಲಿಕೆ ಮಾಡಿದರೆ ಅಜಗಜಾಂತರ. ಸಂವಿಧಾನ ತಿದ್ದುಪಡಿ ಮೂಲಕ ದೊರಕಿರುವ ವಿಧಿ 371 ಜೆ ದೆಸೆಯಿಂದಾಗಿ ಸ್ಥಳೀಯರಿಗೆ ಕೆಲವು ಉದ್ಯೋಗಾವಕಾಶಗಳು ಪ್ರಾಪ್ತವಾಗಿವೆ. ಶೈಕ್ಷಣಿಕವಾಗಿ ಈ ಹಿಂದೆ ವೈದ್ಯಕೀಯದಂತಹ ಪ್ರವೇಶ ಸಂಖ್ಯೆಯಲ್ಲಿ ಎರಡಂಕಿ ದಾಟಲಾಗುತ್ತಿರಲಿಲ್ಲ. ಈಗ ನಮ್ಮ ಹುಡುಗ ಹುಡುಗಿಯರು ಮೂರಂಕಿ ಮುಟ್ಟಿ ಮುನ್ನಡೆದಿದ್ದಾರೆ. ಹಾಗೆಯೇ ಮೂರು ಸಾವಿರ ಕೋಟಿ ಅನುದಾನದ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯಿಂದ ಅಭಿವೃದ್ಧಿಯು ನಿರೀಕ್ಷಿತ ಮಟ್ಟದಲ್ಲಿ ಅಲ್ಲದಿದ್ದರೂ ತಕ್ಕಮಟ್ಟಿಗೆ ಆಗಿರುವುದನ್ನು ಅಲ್ಲಗಳೆಯಲಾಗದು. ನೀರಾವರಿಗೆ ಸಂಬಂಧಿಸಿದ ಕೃಷ್ಣೆಯ ಕಾಡಾ (CADA) ಕೆಲಸಗಳ ಬಗ್ಗೆ ಕೇಳದಿರುವುದೇ ಕ್ಷೇಮ. ಕಾಡಾದಿಂದ ರೈತರ ಹೊಲಗಳ ಅಗತ್ಯ ಕೆಲಸಗಳು ಕಿಲುಬು ಕಾಸಿನಷ್ಟೂ ಆಗಿಲ್ಲ.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಏರುಪ್ರಗತಿಯ ಸ್ಥಿತ್ಯಂತರದ ಲಕ್ಷಣಗಳೇ ಕಾಣುತ್ತಿಲ್ಲ. ಹಿಂದಿನ ನೂರು ವರ್ಷಗಳಲ್ಲಿ ಆಗದ್ದು ಇಂದಿನ ಮೂರು ವರ್ಷಗಳಲ್ಲಿ ಹೇಗೆ ತಾನೇ ಸಾಧ್ಯ ಎಂಬುದು ಪ್ರಭುತ್ವದ ಸಹಜ ಸಬೂಬು ಆಗಿದ್ದೀತು. ಅದಕ್ಕಾಗಿ ಬೆಂಗಳೂರು ಮತ್ತು ಕಲ್ಯಾಣ ಕರ್ನಾಟಕದ ರಾಜಕಾರಣ ಹಾಗೂ ರಾಜಕಾರಣಿಗಳನ್ನು ಹಳಿದಳಿದು ನಮ್ಮವರ ನಾಲಗೆಗಳೇ ಹೊಲಸಾಗಿವೆ.

ಸಾಂಸ್ಕೃತಿಕ ಲೋಕಕ್ಕೆ ಸಂಬಂಧಿಸಿದ ಹತ್ತು ಹಲವು ಲೋಪಗಳ ಆಡುಂಬೊಲವೇ ಈ ನಮ್ಮ ಕಲ್ಯಾಣ ಕರ್ನಾಟಕ. ಇಲ್ಲಿನ ಯಾವುದೇ ಜಿಲ್ಲೆಗಳಲ್ಲಿ ಇದುವರೆಗಿನ ಸರ್ಕಾರಗಳು ಒಂದೇ ಒಂದು ಸಾಂಸ್ಕೃತಿಕ ಪ್ರತಿಷ್ಠಾನವನ್ನೂ ಸ್ಥಾಪನೆ ಮಾಡಿಲ್ಲ ಎಂಬುದು ಗಂಭೀರ ಲೋಪ. ಆರೋಗ್ಯ, ಶಿಕ್ಷಣ, ಸಾರಿಗೆ, ಕೃಷಿ... ಹೀಗೆ ಅಭಿವೃದ್ಧಿ ಕ್ಷೇತ್ರದಲ್ಲಿ ನಿರಂತರ ಅನ್ಯಾಯಕ್ಕೆ ಒಳಗಾಗಿರುವುದಷ್ಟೇ ಅಲ್ಲ, ಕಲ್ಯಾಣ ಕರ್ನಾಟಕವು ಸಾಂಸ್ಕೃತಿಕವಾಗಿಯೂ ಅವಕಾಶಗಳ ನಿತಾಂತ ವಂಚನೆಗೆ ಈಡಾಗುತ್ತಲೇ ಬಂದಿದೆ. ದೂರದ ಬೆಂಗಳೂರುಕೇಂದ್ರಿತ ಕರ್ನಾಟಕ ಸರ್ಕಾರದ ನೀತಿ ಒತ್ತಟ್ಟಿಗಿರಲಿ, ನಮ್ಮದೇ 371 ಜೆ ಅಡಿಯ ಸಹಸ್ರಾರು ಕೋಟಿ ರೂಪಾಯಿಗಳಲ್ಲಿ ಇಂತಹ ಸಾಂಸ್ಕೃತಿಕ ಕೆಲಸಗಳಿಗೆ ಅವಕಾಶ ಬೇಡವೇ?

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಮತ್ತು ಸಾಂಸ್ಕೃತಿಕ ಸಂಘವನ್ನೇ ಅದಕ್ಕಾಗಿ ಸರ್ಕಾರ ರಚನೆ ಮಾಡಿದೆ. ನೂರಾರು ಕೋಟಿಗಳಷ್ಟು ಹಣ ಈ ಸಂಘದ ಕೆಲಸಕ್ಕೆ ಮೀಸಲು. ಅದಕ್ಕೆಂದೇ ಸಚಿವ ಸ್ಥಾನದ ಅಧ್ಯಕ್ಷ ಮತ್ತು ಕೆಎಎಸ್ ಶ್ರೇಣಿಯ ಹಿರಿಯ ಅಧಿಕಾರಿ, ಕಚೇರಿ, ಸಿಬ್ಬಂದಿ ವ್ಯವಸ್ಥೆಯೇ ಕಲಬುರಗಿಯಲ್ಲಿದೆ. ಆದರೆ ಅದರ ಕೆಲಸಗಳು ಏನೆಂಬುದೇ ಅದಕ್ಕ ತಿಳಿಯುವಂತಿಲ್ಲವೇನೊ?



ಕಾಗಿನೆಲೆಯ ಕನಕದಾಸ ಸಾಹಿತ್ಯ ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಕಲ್ಯಾಣ ಕರ್ನಾಟಕದ ಕಡಕೋಳದಲ್ಲಿ ಮಡಿವಾಳಪ್ಪನ ಹೆಸರಲ್ಲಿ ತತ್ವಪದಗಳ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಬೇಕು. ಕರ್ನಾಟಕದಾದ್ಯಂತ ಅಜಮಾಸು ಐದುನೂರು ಮಂದಿ ತತ್ವಪದಕಾರರು ಬಾಳಿ ಬದುಕಿದ್ದಾರೆ. ಅವರಲ್ಲಿ ಕಡಕೋಳ ಮಡಿವಾಳಪ್ಪನನ್ನು ತತ್ವಪದಗಳ ಅಲ್ಲಮನೆಂದೇ ಗುರುತಿಸಲಾಗಿದೆ. ಸಮಗ್ರ ತತ್ವಪದಗಳು, ತತ್ವಪದಕಾರರ ಅಧ್ಯಯನ ಮತ್ತು ಸಂಶೋಧನೆಗಳ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಬೇಕು.

ಯಾದಗಿರಿ ಜಿಲ್ಲೆಯಲ್ಲಿ ರಸ್ತಾಪೂರ ಭೀಮಕವಿಯ ಹೆಸರಲ್ಲಿ ಪ್ರತಿಷ್ಠಾನ ರಚನೆಯಾಗಬೇಕು. ಹಾಗೆಯೇ ರಾಯಚೂರಿನಲ್ಲಿ ಶಾಂತರಸರ ಹೆಸರಿನ ಪ್ರತಿಷ್ಠಾನ, ಕೊಪ್ಪಳದಲ್ಲಿ ಹೆಸರಾಂತ ಸಾಹಿತಿ ಸಿದ್ದಯ್ಯ ಪುರಾಣಿಕ ಇಲ್ಲವೇ ಅಭಿನೇತ್ರಿ ಕುಕನೂರಿನ ರಹಮಾನವ್ವ ಕಲ್ಮನಿ ಅವರ ಹೆಸರಿನ ಪ್ರತಿಷ್ಠಾನ ಆಗಬೇಕು. ಬೀದರಿನಲ್ಲಿ ಭಾಲ್ಕಿಯ ಚನ್ನಬಸವ ಪಟ್ಟದದೇವರ ಹೆಸರಲ್ಲಿ ಪ್ರತಿಷ್ಠಾನ ಸ್ಥಾಪನೆ ಆಗಬೇಕಿದೆ.

ಅದೇರೀತಿ ಕಲಬುರಗಿಯಲ್ಲಿ ವಿಮಲಕವಿ, ತತ್ವಪದಕಾರ ಖೈನೂರು ಕೃಷ್ಣಪ್ಪ ಅವರ ಹೆಸರಲ್ಲಿ ಸಾಂಸ್ಕೃತಿಕ ಪ್ರತಿಷ್ಠಾನ, ವಿಜಯನಗರದಲ್ಲಿ ಮುದೇನೂರ ಸಂಗಣ್ಣ ಪ್ರತಿಷ್ಠಾನ, ಬಳ್ಳಾರಿಯಲ್ಲಿ ಪಂಡಿತ ತಾರಾನಾಥರ ಪ್ರತಿಷ್ಠಾನವನ್ನು ಸರ್ಕಾರ ಆರಂಭಿಸಬೇಕು. ತನ್ಮೂಲಕ ಎಪ್ಪತ್ತೈದು ವರುಷಗಳ ಕಾಲ ಹೈದರಾಬಾದ್ ಕರ್ನಾಟಕಕ್ಕೆ ತಗುಲಿದ ಸಾಂಸ್ಕೃತಿಕ ಶಾಪ ವಿಮೋಚನೆಯಾಗಬೇಕು.

ವಾಚಕರ ವಾಣಿ

ಮತದಾರರ ಭಾವನೆಗೆ ಧಕ್ಕೆ

ವಿಜಯ್ ಮಲ್ಯ, ಚೋಕ್ಸಿ, ನೀರವ್ ಮೋದಿ ಅವರಂತಹ ಉದ್ಯಮಿಗಳು ಭಾರತೀಯ ಬ್ಯಾಂಕುಗಳಲ್ಲಿ ಸಾಲ ಪಡೆದು ದೇಶ ಬಿಟ್ಟು ಓಡಿಹೋದ ಘಟನೆಗಳು ಒಂದು ಕಡೆಗಿವೆ. ಇನ್ನೊಂದು ಕಡೆಗೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದವರು ಬಿಜೆಪಿಗೆ ಪಕ್ಷಾಂತರ ಆಗುವ ಕೆಲಸ ನಡೆಯುತ್ತಿದೆ. ಈ ಎರಡೂ ಕೆಲಸಗಳು ಹಗಲು ದರೋಡೆಯಂತೆ. ಲಕ್ಷಾಂತರ ಖಾತೆದಾರರು ಬ್ಯಾಂಕುಗಳಲ್ಲಿ ಇಟ್ಟಿದ್ದ ಹಣವನ್ನು ಸಾಲದ ರೂಪದಲ್ಲಿ ಪಡೆದು ದೇಶ ಬಿಟ್ಟು ಓಡಿಹೋದದ್ದು ದೇಶದ್ರೋಹವಾದರೆ, ಒಂದು ಪಕ್ಷದ ಸಿದ್ಧಾಂತದಲ್ಲಿ ನಂಬಿಕೆ ಇರಿಸಿ ಮತಕೊಟ್ಟ ಮತದಾರರ ಭಾವನೆಗಳನ್ನು ಧಿಕ್ಕರಿಸಿ, ಗೆದ್ದವರು ರಾಜೀನಾಮೆಯನ್ನೂ ಕೊಡದೆ ಗೆಲುವಿನ ಸಮೇತ ಪಕ್ಷ ಬದಲಿಸುವುದು ಮತದಾರನಿಗೆ ಮಾಡಿದ ದ್ರೋಹ ಅಲ್ಲವೇ?

ಹೋದವರಿಗೆ ಲಾಭ ಆಗಬಹುದು, ಬರಮಾಡಿಕೊಂಡವರಿಗೂ ಖುಷಿ ಸಿಗಬಹುದು, ಆದರೆ ಮತದಾರರ ಭಾವನೆಗಳಿಗೆ ಸಿಕ್ಕಿದ ಬೆಲೆ ಏನು? ಈ ಅನೈತಿಕತೆಯನ್ನು ಎಲ್ಲ ಪಕ್ಷಗಳೂ ಸೇರಿ ತಡೆಯದೇ ಹೋದರೆ, ಭವಿಷ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಕಿಮ್ಮತ್ತು ಉಳಿಯುವುದಿಲ್ಲ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ದಾರಿ ಬದಿಯ ಶೌಚಕ್ಕೇನು ದಾರಿ?

ರಾಜ್ಯದಲ್ಲಿ ಸಾವಿರಾರು ಖಾಸಗಿ ಸ್ಲೀಪರ್ ಬಸ್ಸುಗಳು ಪ್ರತಿನಿತ್ಯ ರಾತ್ರಿ ಸಮಯದಲ್ಲಿ ರಾಜ್ಯದಾದ್ಯಂತ ಸಂಚರಿಸುತ್ತವೆ. ರಸ್ತೆ ಸಾರಿಗೆ ನಿಗಮಗಳಿಗೆ ಸೇರಿದ ಬಸ್ಸುಗಳಾದರೆ ರಾತ್ರಿ ವೇಳೆ, ಸಾರಿಗೆ ಸಂಸ್ಥೆಗೆ ಸೇರಿದ ನಿಲ್ದಾಣಗಳಲ್ಲಿ ಪ್ರಯಾಣಿಕರು ಶೌಚಾಲಯ ಬಳಕೆ ಮಾಡಲು ನಿಲ್ಲಿಸುತ್ತವೆ. ಆದರೆ ಖಾಸಗಿ ಬಸ್ಸುಗಳು ನಡುರಾತ್ರಿ ರಸ್ತೆಬದಿಗಳಲ್ಲಿ ಪ್ರಯಾಣಿಕರನ್ನು ಶೌಚಕ್ಕಾಗಿ ನಿಲ್ಲಿಸುವುದು ಕಂಡುಬರುತ್ತದೆ. ಇತ್ತೀಚೆಗೆ ಖಾಸಗಿ ಬಸ್ಸಿನಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ವಿಪರೀತ ಮಳೆ ಸುರಿಯುತ್ತಿತ್ತು. ಹಾಸನದ ಬಳಿ ಕಾಳರಾತ್ರಿಯಲ್ಲಿ ಶೌಚಕ್ಕೆ ಹೋಗಲು ಹೆಂಗಸರು-ಮಕ್ಕಳು ಪರದಾಡುತ್ತಿದ್ದದ್ದು ಕಂಡುಬಂತು.

ಈ ಸಮಸ್ಯೆ ಬಗೆಹರಿಸಲು ಸರ್ಕಾರವು ರಾತ್ರಿವೇಳೆ ಬಸ್ ನಿಲ್ದಾಣಗಳಲ್ಲೇ ಖಾಸಗಿ ಬಸ್ಸಿನ ಪ್ರಯಾಣಿಕರೂ ಶೌಚಾಲಯ ಬಳಸುವ ವ್ಯವಸ್ಥೆ ಮಾಡಬೇಕು ಅಥವಾ ಖಾಸಗಿ ಬಸ್ಸುಗಳಿಂದ ಲಕ್ಷಾಂತರ ರೂಪಾಯಿ ಶುಲ್ಕ ಪಡೆಯುವ ಸರ್ಕಾರವು ನಿಗದಿತ ಸ್ಥಳಗಳಲ್ಲಿ ರಾತ್ರಿ ಬಸ್ಸುಗಳ ಪ್ರಯಾಣಿಕರಿಗೆ ಶೌಚಾಲಯಗಳ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನಾದರೂ ಹೊರಬೇಕು.

ನಿರಂಜನ ವಾನಳ್ಳಿ, ಮೈಸೂರು

ಹಿಂದಿ ಹೇರಿಕೆ: ಬದಲಾಗದ ವರಸೆ

ಕೇಂದ್ರ ಸರ್ಕಾರದ ಹಿಂದಿ ಹೇರಿಕೆ ಪ್ರವೃತ್ತಿಯ ವಿರುದ್ಧ ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕರು ಪ್ರತಿಭಟಿಸಿದ್ದಾರೆ. ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡುವುದಕ್ಕೆ ಕಾನೂನು ರೂಪಿಸಲು ಇದೇ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ತುಂಬಾ ಜಾಗರೂಕತೆಯಿಂದ ತಮ್ಮ ಧಣಿಗಳ ಮನನೋಯದಂತೆ ಮಾಮೂಲಿನ ಉತ್ತರ ನೀಡಿದ್ದಾರೆ.

ರಾಜ್ಯಗಳ ಮೇಲೆ ಹಿಂದಿ ಹೇರಿಕೆ ಹಿಂದಿನಿಂದಲೂ ಅವ್ಯಾಹತವಾಗಿ ನಡೆಯುತ್ತಿದ್ದರೂ ಅದು 2014ರ ನಂತರ ತೀವ್ರವಾಗಿದೆ. ಲೋಕಸಭೆ, ರಾಜ್ಯಸಭೆ ಕಲಾಪಗಳಲ್ಲಿ ಮೊದಲೆಲ್ಲಾ ಬಹುತೇಕ ಸಚಿವರು, ಸದಸ್ಯರ ಪ್ರಶ್ನೆಗಳಿಗೆ ಇಂಗ್ಲಿಷ್‌ನಲ್ಲಿಯೇ ಉತ್ತರಿಸುತ್ತಿದ್ದರು. ಆದರೆ ಈಗ ಎಲ್ಲರೂ ಹಿಂದಿಯಲ್ಲಿಯೇ ಉತ್ತರಿಸುತ್ತಾರೆ. ದಕ್ಷಿಣದ ಸದಸ್ಯರು ಪ್ರಶ್ನೆಗಳನ್ನು ಕೇಳಲು ತಮ್ಮ ಪ್ರಾದೇಶಿಕ ಭಾಷೆ ಅಥವಾ ಇಂಗ್ಲಿಷ್ ಅನ್ನು ಬಳಸುತ್ತಾರೆ. ಆದರೆ ಇದಕ್ಕೆ ಅಪವಾದ ಎಂಬಂತೆ ಕರ್ನಾಟಕದ ಸದಸ್ಯರು ಹಿಂದಿಯಲ್ಲಿ ಉತ್ತರಿಸುತ್ತಾರೆ! ಇದು ತಪ್ಪಬೇಕು.

ಸರ್ಕಾರಿ ನಿಯಂತ್ರಣದ ಆಕಾಶವಾಣಿ, ದೂರದರ್ಶನಗಳನ್ನು ಪ್ರಸಾರ ಭಾರತಿ ಎಂದು ಬದಲಾಯಿಸಿದರೂ ಅವುಗಳ ವರಸೆ ಮಾತ್ರ ಬದಲಾಗಲಿಲ್ಲ. ಈಗಲೂ ಇವು 1975ರ ತುರ್ತುಪರಿಸ್ಥಿತಿ ಕಾಲದಲ್ಲಿದ್ದಂತೆ ಕೇಂದ್ರ ಸರ್ಕಾರದ ತುತ್ತೂರಿಗಳಾಗಿವೆ. ಆಕಾಶವಾಣಿ ವಾರ್ತೆಗಳಲ್ಲಿ ನರೇಂದ್ರ ಮೋದಿ, ಅಮಿತ್ ಶಾ ಅವರ ಭಾಷಣಗಳೇ ಸುದ್ದಿಗಳಾಗಿವೆ. ಹಿಂದಿ ಕೇಳಿ ಕೇಳಿ ತಲೆ ಸುತ್ತು ಬರುವಂತಾಗುತ್ತದೆ. ಇದೇ 14ರ ಬೆಳಿಗ್ಗೆ, 7.15ಕ್ಕೆ ಪ್ರಸಾರವಾಗುವ ಪ್ರದೇಶ ಸಮಾಚಾರದ ಬದಲು 'ಹಿಂದಿ ದಿವಸ್' ಕುರಿತ ಅಮಿತ್ ಶಾ ಅವರ ಭಾಷಣವನ್ನು ಪ್ರಸಾರ ಮಾಡಿದ್ದು ಎಷ್ಟು ಸರಿ?

ಮುಳ್ಳೂರು ಪ್ರಕಾಶ್, ಮೈಸೂರು

ಯಾತ್ರೆಯ ಪ್ರಸ್ತಾಪ ಸರಿಯೇ?

'ಕನ್ನಡ ಮನಸ್ಸುಗಳ ಜೋಡಣೆ ಯಾರ ಹೊಣೆ' ಎಂಬ ಬರಹದಲ್ಲಿ ರಘುನಾಥ ಚ.ಹ. ಅತ್ಯಂತ ಪ್ರಸ್ತುತವಾದ ಮತ್ತು ಸಕಾಲಿಕವಾದ ಪ್ರಶ್ನೆಯೊಂದನ್ನು ಎತ್ತಿದ್ದಾರೆ ಮತ್ತು ಅದರಲ್ಲಿ ಅವರು ಪ್ರಸ್ತಾಪಿಸಿರುವ ಹಲವು ವಿಚಾರಗಳು ವಾಸ್ತವವಾಗಿವೆ. ಈಚಿನ ವರ್ಷಗಳಲ್ಲಿ ಬರಹಗಾರರಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಗುಂಪುಗಳಾಗಿರುವುದಷ್ಟೇ ಅಲ್ಲ, ಆ ಗುಂಪುಗಳು ಕೆಲವೊಮ್ಮೆ ಸಂವಾದ ನಡೆಸಲಾರದಷ್ಟು ವಿಂಗಡವಾಗಿಬಿಟ್ಟಿವೆಯೇನೋ ಎಂದು ಆತಂಕಪಡುವಂತೆ ಆಗಿರುವುದೂ ಸುಳ್ಳಲ್ಲ. ಇದಕ್ಕೆ ಜಾತಿ, ಸಿದ್ಧಾಂತ ಮತ್ತು ಪಕ್ಷ ರಾಜಕಾರಣಗಳತ್ತ ಅತಿಯಾದ ಒಲವು ತೋರುತ್ತ ಬಂದಿರುವ ಬರಹಗಾರರೇ ಕಾರಣರೆಂಬುದಕ್ಕೆ ಹೆಚ್ಚಿನ ಸಂಶೋಧನೆಯೇನೂ ಅಗತ್ಯವಿಲ್ಲ ಮತ್ತು ಅವರುಗಳೇ ಆತ್ಮಾವಲೋಕನ ಮಾಡಿಕೊಳ್ಳುವ ಕಾಲ ಈಗ ಬಂದಿದೆ ಎನಿಸುತ್ತದೆ.

ಆದರೆ ಇಷ್ಟು ಒಳ್ಳೆಯ ಸಕಾಲಿಕವಾದ ಅವರ ಈ ಬರಹದಲ್ಲಿ, ಅದಕ್ಕೆ ಯಾವ ರೀತಿಯಲ್ಲಿಯೂ ಸಂಬಂಧವೇ ಇರದಿರುವ- ರಾಜಕೀಯ ಪಕ್ಷವೊಂದು ಮುಂದಿನ ಚುನಾವಣೆಗಳನ್ನು ಗಮನದಲ್ಲಿ ಇಟ್ಟುಕೊಂಡು ನಡೆಸುತ್ತಿರುವ ಯಾತ್ರೆಯೊಂದರ ಪ್ರಸ್ತಾಪ ಮಾಡಿರುವುದು ಪಾಯಸದಲ್ಲಿ ನೊಣ ಸಿಕ್ಕಿದಂತಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಸಾಕ್ಷ್ಯಸಹಿತ ದೂರಿತ್ತರೆ ಕ್ರಮ ನಿಶ್ಚಿತ’

ಎಸಿಬಿ ರದ್ದುಗೊಳಿಸಿ ಹೈಕೋರ್ಟ್ ನೀಡಿದ ತೀರ್ಪಿನಿಂದಾಗಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸುವ ಅಧಿಕಾರ ಲೋಕಾಯುಕ್ತ ಸಂಸ್ಥೆಗೆ ಮತ್ತೆ ಮರಳಿದೆ. ಲೋಕಾಯುಕ್ತ ಪೊಲೀಸ್ ವಿಭಾಗ ಈಗ ಹೇಗೆ ಕೆಲಸ ಮಾಡಬಹುದು? ಎಂಬ ಕುತೂಹಲ ಜನರಲ್ಲಿದೆ. ಸಾರ್ವಜನಿಕರ ದೂರುಗಳ ತನಿಖೆಗೆ ಏನೆಲ್ಲಾ ಸಿದ್ಧತೆ ಮಾಡಲಾಗುತ್ತಿದೆ? ಲೋಪಗಳಿಲ್ಲದ ತನಿಖಾ ವಿಭಾಗವನ್ನು ರೂಪಿಸುವುದು ಹೇಗೆ? ಎಂಬ ಪ್ರಶ್ನೆಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ‘ಪ್ರಜಾವಾಣಿ’ ಜತೆ ಮಾತನಾಡಿದ್ದಾರೆ

• ವಿ.ಎಸ್. ಸುಬ್ರಹ್ಮಣ್ಯ

• ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಬಳಸಲು ಲೋಕಾಯುಕ್ತ ಪೊಲೀಸ್ ವಿಭಾಗ ಯಾವ ರೀತಿಯ ಕ್ರಿಯಾಯೋಜನೆ ಸಿದ್ಧಪಡಿಸಿಕೊಂಡಿದೆ?

ಲೋಕಾಯುಕ್ತ: ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಗೊಳಿಸಿ ಹೈಕೋರ್ಟ್ ಆದೇಶ ಹೊರಡಿಸಿದ ತಕ್ಷಣದಿಂದಲೇ ಲೋಕಾಯುಕ್ತದ ಆಡಳಿತ, ವಿಚಾರಣೆ, ಪೊಲೀಸ್ ಮತ್ತು ತಾಂತ್ರಿಕ ವಿಭಾಗದ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ. ಲಂಚಕ್ಕೆ ಬೇಡಿಕೆ ಇಡುತ್ತಿರುವ ದೂರುಗಳು, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ, ಇತರ ಸ್ವರೂಪದ ಭ್ರಷ್ಟಾಚಾರ ಪ್ರಕರಣಗಳ ತನಿಖೆ ಕುರಿತು ಪೊಲೀಸ್ ಅಧಿಕಾರಿಗಳಿಗೆ ಪರಿಣಿತರಿಂದ ಮಾಹಿತಿ ಒದಗಿಸಲಾಗಿದೆ. ನಿವೃತ್ತ ನ್ಯಾಯಾಧೀಶರು, ಹಿರಿಯ ಪೊಲೀಸ್ ಅಧಿಕಾರಿಗಳಿಂದ ಉಪನ್ಯಾಸವನ್ನೂ ಆಯೋಜಿಸಲಾಗುವುದು. ಪ್ರಾಥಮಿಕ ತನಿಖೆ, ಪ್ರಕರಣ ದಾಖಲು, ತನಿಖೆ, ಆರೋಪಪಟ್ಟಿ ಸಲ್ಲಿಕೆ, ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿ ವಕೀಲರಿಗೆ ನೆರವಾಗುವ ಕುರಿತು ತನಿಖಾಧಿಕಾರಿಗಳಿಗೆ ತರಬೇತಿ ನೀಡಲಾಗುವುದು.

• ಭ್ರಷ್ಟಾಚಾರ ನಿಯಂತ್ರಣದ ವಿಚಾರದಲ್ಲಿ ಲೋಕಾಯುಕ್ತ ಸಂಸ್ಥೆ ಮೇಲೆ ಮತ್ತೆ ಜನರ ನಿರೀಕ್ಷೆ ಹೆಚ್ಚಾಗಿದೆ. ಸ್ಪಂದನೆ ಹೇಗೆ?

ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲೇಬೇಕು ಎಂಬುದು ನಮ್ಮ ಗುರಿ. ಆ ದಿಸೆಯಲ್ಲಿ ಸಂಸ್ಥೆಗೆ ಅಗತ್ಯ ಸಂಖ್ಯೆ ಸಿಬ್ಬಂದಿ, ಕೆಲವು ಸೌಲಭ್ಯಗಳು ಬೇಕಿವೆ. ಯಾವ ಹಂತದಲ್ಲೂ ಜನರ ನಿರೀಕ್ಷೆ ಹುಸಿಯಾಗಲು ಅವಕಾಶ ನೀಡುವುದಿಲ್ಲ.

• ಎಸಿಬಿಯಿಂದ ಕಡತ, ಸಿಬ್ಬಂದಿ ಹಸ್ತಾಂತರ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಕಡತಗಳನ್ನು ಒಂದೊಂದಾಗಿ ಹಸ್ತಾಂತರ ಮಾಡುತ್ತಿದ್ದಾರೆ. 142 ಕಾನ್‌ಸ್ಟೆಬಲ್‌ಗಳನ್ನು ಲೋಕಾಯುಕ್ತಕ್ಕೆ ನೀಡಲಾಗಿದೆ. ಅಧಿಕಾರಿಗಳನ್ನು ವರ್ಗಾವಣೆ ಮಾಡುವ ವಿಚಾರದಲ್ಲಿ ಇನ್ನೂ ಅಂತಿಮ ನಿರ್ಧಾರವಾಗಿಲ್ಲ.

• ಎಸಿಬಿಯಲ್ಲಿರುವ ಎಲ್ಲ ಪೊಲೀಸ್ ಅಧಿಕಾರಿಗಳನ್ನೂ ಲೋಕಾಯುಕ್ತಕ್ಕೆ ಕರೆಸಿಕೊಳ್ಳುವ ಪ್ರಸ್ತಾವವನ್ನು ಮಾಜಿ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ವಿರೋಧಿಸಿರುವುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಎಸಿಬಿಯಲ್ಲಿರುವ ಎಲ್ಲ ಪ್ರಕರಣಗಳು, ಅಧಿಕಾರಿ ಮತ್ತು ಸಿಬ್ಬಂದಿಯನ್ನು ಲೋಕಾಯುಕ್ತಕ್ಕೆ ನೀಡಬೇಕು ಎಂಬುದು ಹೈಕೋರ್ಟ್ ಆದೇಶ. ಅದರಂತೆ ಕ್ರಮ ಜರುಗಿಸಲು ಕೋರಲಾಗಿದೆ. ಅಲ್ಲಿರುವ ಪ್ರಕರಣಗಳನ್ನು ವರ್ಗಾಯಿಸುವಾಗ ಎಸಿಬಿಯ ಅಧಿಕಾರಿಗಳು ಇಲ್ಲಿಗೆ ಬಂದು ಸಮಗ್ರ ವಿವರಣೆ ಒದಗಿಸಬೇಕು. ಅದಕ್ಕೆ ಪೂರಕವಾಗಿ ಎಲ್ಲರನ್ನೂ ಕರೆಸುವುದು ಅಗತ್ಯ. ನಂತರದಲ್ಲಿ ಎಷ್ಟು ಮಂದಿಯನ್ನು ಇಲ್ಲಿ ಉಳಿಸಿಕೊಳ್ಳಬೇಕು? ವಾಪಸ್ ಕಳುಹಿಸಬೇಕು ಎಂಬುದನ್ನು ನಾವು ನಿರ್ಧರಿಸುತ್ತೇವೆ.

• ಲೋಕಾಯುಕ್ತದ ಪೊಲೀಸ್ ವಿಭಾಗಕ್ಕೆ ಕಳಂಕಿತರು ಪ್ರವೇಶಿಸದಂತೆ ತಡೆ ಹೇಗೆ?

ಕೆಲವು ಮಾನದಂಡಗಳನ್ನು ಇರಿಸಿಕೊಂಡು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುವುದು. ಅಧಿಕಾರಿ ಮತ್ತು ಸಿಬ್ಬಂದಿಯ ಪೂರ್ವಾಪರ ಕುರಿತು ವರದಿ ಪಡೆಯಲಾಗುವುದು. ನಂಬಲರ್ಹ ಪೊಲೀಸ್ ಅಧಿಕಾರಿಗಳಿಂದಲೂ ಅಭಿಪ್ರಾಯ ಪಡೆಯಲಾಗುವುದು. ಯಾವುದೇ ವಿಧದ ಅಪರಾಧ ಪ್ರಕರಣ, ವಿಚಾರಣೆ ಎದುರಿಸುತ್ತಿರುವವರು, ಶಿಸ್ತುಕ್ರಮಕ್ಕೆ ಗುರಿಯಾದವರಿಗೆ ಸಂಸ್ಥೆಗೆ ಪ್ರವೇಶ ನೀಡುವುದಿಲ್ಲ. ಈಗ ನಮ್ಮ ಪೊಲೀಸ್ ವಿಭಾಗದಲ್ಲಿರುವ ಅಧಿಕಾರಿಗಳ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು. ಪ್ರಾಮಾಣಿಕರು, ದಕ್ಷತೆಯುಳ್ಳವರು ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆಯ ಅನುಭವ ಹೊಂದಿದವರಿಗೆ ಅವಕಾಶ ನೀಡಲಾಗುವುದು. ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಬಂದವರು ಇಲ್ಲಿನ ನಿಯಮಗಳಿಗೆ ಹೊಂದಿಕೊಂಡು ಕೆಲಸ ಮಾಡಬೇಕು.

• ಭ್ರಷ್ಟಾಚಾರದ ದೂರುಗಳು ಬಂದ ತಕ್ಷಣ ಕ್ರಮ ಕೈಗೊಳ್ಳಲು ಲೋಕಾಯುಕ್ತ ಸನ್ನದ್ಧವಾಗಿದೆಯೆ?

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ವ್ಯಾಪ್ತಿಗೆ ಒಳಪಡುವ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ದೂರುಗಳನ್ನು ಮೇಲ್ನೋಟಕ್ಕೆ ಸತ್ಯ ಎಂದು ತೀರ್ಮಾನಿಸಬಹುದಾದ ಸಾಕ್ಷ್ಯಗಳೊಂದಿಗೆ ನೀಡಿದರೆ ತಕ್ಷಣ ಕ್ರಮ ಜರುಗಿಸುವುದು ನಿಶ್ಚಿತ. ಈ ಬಗ್ಗೆ ಯಾವ ಅನುಮಾನಗಳೂ ಬೇಡ. ಈಗಾಗಲೇ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಎರಡು ಪ್ರಕರಣಗಳಲ್ಲಿ ಮೂವರನ್ನು ಬಂಧಿಸಿರುವುದೇ ಇದಕ್ಕೆ ಸಾಕ್ಷಿ.

• ಸಂಸ್ಥೆಯ ಪೊಲೀಸ್ ವಿಭಾಗದ ಕಾರ್ಯನಿರ್ವಹಣೆಗೆ ಪ್ರತ್ಯೇಕ ಕೈಪಿಡಿ ರೂಪಿಸುವಂತೆ ಐಪಿಎಸ್ ಅಧಿಕಾರಿ ಕೆ. ಮಧುಕರ ಶೆಟ್ಟಿ ಸಲ್ಲಿಸಿದ್ದ ಪ್ರಸ್ತಾವದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಈ ಕುರಿತು ನಮ್ಮ ಪೊಲೀಸ್ ಹಾಗೂ ಆಡಳಿತ ವಿಭಾಗದ ಅಧಿಕಾರಿಗಳ ಜತೆ ಚರ್ಚಿಸುತ್ತೇನೆ. ಅಂತಹ ಒಂದು ಕೈಪಿಡಿ ಅಗತ್ಯ ಎನಿಸಿದರೆ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತೇವೆ. ಮಧುಕರ ಶೆಟ್ಟಿ ಅವರು ಸರ್ಕಾರಕ್ಕೆ ಸಲ್ಲಿಸಿರುವ ಕರಡು ಸೂಕ್ತ ಎಂಬುದು ಮನವರಿಕೆಯಾದರೆ ಅದಕ್ಕೆ ಒಪ್ಪಿಗೆ ನೀಡುವಂತೆ ಸರ್ಕಾರವನ್ನು ಕೋರಲಾಗುವುದು. ವ್ಯವಸ್ಥೆಯಲ್ಲಿ ಸುಧಾರಣೆ ತರುವುದಕ್ಕೆ ಬೇಕಿರುವ ಕ್ರಮ ಕೈಗೊಳ್ಳಲು ಮುಕ್ತ ಮನಸ್ಸು ಹೊಂದಿದ್ದೇವೆ.

• ಎಸಿಬಿಯಲ್ಲಿ ‘ಬಿ’ ವರದಿ ಸಲ್ಲಿಸಿದ ಪ್ರಕರಣಗಳ ಮರುತನಿಖೆ ನಡೆಸುವ ಉದ್ದೇಶವಿದೆಯೆ?

ಆ ರೀತಿ ಯಾವುದೇ ನಿರ್ಧಾರ ಮಾಡಿಲ್ಲ. ಪ್ರಕರಣಗಳ ಮರುತನಿಖೆ ನಡೆಸಬೇಕಾದ ಸನ್ನಿವೇಶ ಉದ್ಭವವಾದರೆ ಕ್ರಮ ಕೈಗೊಳ್ಳಬೇಕಾಗುತ್ತದೆ.

• ಸಾರ್ವಜನಿಕ ನೌಕರರು ಆರೋಪಿಗಳಾಗಿರುವ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡಲು ಸರ್ಕಾರ ವಿಳಂಬ ಮಾಡಿದರೆ ಏನು ಮಾಡುತ್ತೀರಿ?

ತನಿಖೆ ಪೂರ್ಣಗೊಳಿಸಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಪೊಲೀಸ್ ವಿಭಾಗದಿಂದ ಸಕ್ಷಮ ಪ್ರಾಧಿಕಾರಗಳಿಗೆ ಪ್ರಸ್ತಾವ ಕಳುಹಿಸಲಾಗುತ್ತದೆ. ಮೂರು ತಿಂಗಳೊಳಗೆ ಅನುಮತಿ ನೀಡದ ಪ್ರಕರಣಗಳನ್ನು ಲೋಕಾಯುಕ್ತದ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತೇವೆ. ವಿಚಾರಣಾ ವರದಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಈ ಕ್ರಮ ಜಾರಿಯಲ್ಲಿದೆ. ಸಾರ್ವಜನಿಕರು ಎಚ್ಚೆತ್ತುಕೊಂಡು ಸರ್ಕಾರವನ್ನು ಪ್ರಶ್ನಿಸಬೇಕು. ಸರ್ಕಾರವೂ ತನ್ನ ಹೊಣೆ ಅರಿತುಕೊಂಡು ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡಬೇಕು.

• ಯಾವ ಇಲಾಖೆಗಳ ಮೇಲೆ ಕೇಂದ್ರೀಕರಿಸಿ ಲೋಕಾಯುಕ್ತ ಪೊಲೀಸರು ಕೆಲಸ ಮಾಡಲಿದ್ದಾರೆ?

ಭ್ರಷ್ಟಾಚಾರ ಕೆಲವೇ ಇಲಾಖೆಗಳಿಗೆ ಸೀಮಿತವಾಗಿಲ್ಲ. ಎಲ್ಲ ಇಲಾಖೆಗಳನ್ನೂ ವ್ಯಾಪಿಸಿಕೊಂಡಿದೆ ಮತ್ತು ಅತಿಯಾಗಿ ಬೆಳೆದುನಿಂತಿದೆ. ಲಂಚ ಕೊಡದೆ ಸಣ್ಣ ಕೆಲಸವೂ ಆಗುವುದಿಲ್ಲ ಎಂಬ ಸ್ಥಿತಿ ಇದೆ. ಭ್ರಷ್ಟಾಚಾರ ಹಣದ ವಹಿವಾಟಿಗೆ ಸೀಮಿತವಾಗಿಯೂ ಉಳಿದಿಲ್ಲ. ಬೇರೆ ಬೇರೆ ಸ್ವರೂಪಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ.

• ಬಿಜೆಪಿ ಸರ್ಕಾರದ ಅವಧಿಯಲ್ಲಿ ನೇಮಕವಾಗಿರುವ ಲೋಕಾಯುಕ್ತರು ಈ ಸರ್ಕಾರದ ವಿರುದ್ಧ ಕ್ರಮ ಜರುಗಿಸುತ್ತಾರಾ ಎಂಬ ಸಂಶಯಕ್ಕೆ ನಿಮ್ಮ ಉತ್ತರವೇನು?

ಆ ಬಗೆಯ ಸಂಶಯವೇ ತಪ್ಪು. ನನ್ನನ್ನು ನೇಮಿಸಿರುವುದು ಸರ್ಕಾರವಲ್ಲ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ಮುಖ್ಯಮಂತ್ರಿ, ವಿಧಾನಸಭೆ ಸ್ಪೀಕರ್, ವಿಧಾನ ಪರಿಷತ್ ಸಭಾಪತಿ, ವಿಧಾನಮಂಡಲದ ಎರಡೂ ಸದನಗಳ ವಿರೋಧ ಪಕ್ಷದ ನಾಯಕರು ಇರುವ ಸಮಿತಿಯ ಶಿಫಾರಸು ಆಧರಿಸಿ ರಾಜ್ಯಪಾಲರು ನೇಮಕ ಮಾಡಿದ್ದಾರೆ. ನಾನು ಈಗ ಜನರಿಗೆ ಮತ್ತು ಕಾನೂನಿಗೆ ಉತ್ತರದಾಯಿ. ಸಂಶಯಕ್ಕೆ ಎಡೆಯಿಲ್ಲದಂತೆ ಕೆಲಸ ಮಾಡುವೆ.



• ಕುಟುಂಬದವರು, ಸಂಬಂಧಿಕರು ಹಸ್ತಕ್ಷೇಪ ಮಾಡದಂತೆ ಹೇಗೆ ತಡೆಯುತ್ತೀರಿ?

ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಯಲ್ಲಿ 13 ವರ್ಷ 7 ತಿಂಗಳು ಕಾರ್ಯ-ನಿರ್ವಹಿಸಿದ್ದೇನೆ. ಎರಡೂವರೆ ವರ್ಷ ಉಪ ಲೋಕಾಯುಕ್ತರ ಹುದ್ದೆಯಲ್ಲಿದ್ದೆ. ಯಾವತ್ತೂ ನನ್ನ ಕುಟುಂಬದ ಸದಸ್ಯರು, ಸಂಬಂಧಿಕರು ನನ್ನ ಅಧಿಕಾರದ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ಮಾಡಿಲ್ಲ. ಮುಂದೆಯೂ ಅದಕ್ಕೆ ಅವಕಾಶವಿಲ್ಲ.

ಪ್ರಜಾವಾಣಿ ಸಂದರ್ಶನ

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್



• ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ, ಸಚಿವ ಎಸ್.ಟಿ. ಸೋಮಶೇಖರ್ ವಿರುದ್ಧ ತನಿಖೆಗೆ ನ್ಯಾಯಾಲಯ ನೀಡಿರುವ ಆದೇಶದಂತೆ ಕ್ರಮ ಆಗಲಿದೆಯೆ?

ತಪ್ಪು ಮಾಡಿದವರು ದೊಡ್ಡವರೋ? ಸಣ್ಣವರೋ ಎಂಬುದು ನಮಗೆ ಮುಖ್ಯವಲ್ಲ. ನ್ಯಾಯಾಲಯದ ಆದೇಶದಂತೆ ತನಿಖಾಧಿಕಾರಿ ಮುಂದಿನ ಕ್ರಮ ಜರುಗಿಸುತ್ತಾರೆ. ಸಾಕ್ಷ್ಯಗಳಿದ್ದರೆ ಉಳಿದವರಿಗೆ ಆಗುವ ಕ್ರಮವೇ ಇವರಿಗೂ ಆಗುತ್ತದೆ.

ಟೆನಿಸ್ ಹೊಸತಾರೆ ಅಲ್ಕರಾಜ್

• ವಿಶಾಖ ಎನ್.

ವ್ಯಕ್ತಿ ವಿಶೇಷ

ಮೊನ್ನೆ ಮೊನ್ನೆಯಂತಿದೆ; ಟೆನಿಸ್‌ನಲ್ಲಿ ಸ್ಪ್ಯಾನಿಷ್ ಜನರು ರಫೆಲ್ ನಡಾಲ್ ಅಂದೊಡನೆ ರೋಮಾಂಚನಗೊಳ್ಳುತ್ತಿದ್ದ ಕ್ಷಣ. ಅದರಲ್ಲೂ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡಾಲ್ ಆಟವೆಂದರೆ ಎಲ್ಲರಿಗೂ ಸಹಜ ಹಿಗ್ಗು. ಒಂದೊಂದು ಪಾಯಿಂಟ್ ಗೆದ್ದಾಗಲೂ ತನ್ನ ಭುಜಬಲ ಪರಾಕ್ರಮ ತೋರುವ ನಡಾಲ್‌ನ ಸಣ್ಣ ಕಣ್ಣೂ ಈಗ ಅಗಲಗೊಂಡಿದೆ. ನೋಟ ನೆಟ್ಟಿರುವುದು ಕಾರ್ಲೋಸ್ ಅಲ್ಕರಾಜ್ ಎನ್ನುವ ಹತ್ತೊಂಬತ್ತರ ಹುಡುಗನತ್ತ. ಟೆನಿಸ್ ಅಭಿಮಾನಿಗಳು ಈ ಹುಡುಗನಲ್ಲೀಗ ಭವಿತವ್ಯದ ನಡಾಲ್‌ನನ್ನು ನೋಡುತ್ತಿದ್ದಾರೆ. ಅಮೆರಿಕ ಓಪನ್ ಸಿಂಗಲ್ಸ್ ಗ್ರ್ಯಾನ್ ಸ್ಲ್ಯಾಮ್‌ನಲ್ಲಿ ಅಲ್ಕರಾಜ್ ಚಾಂಪಿಯನ್ ಆಗಿರುವುದು ಇಂತಹ ನಿರೀಕ್ಷೆಗೆ ಕಾರಣ. ಸಾಂಪ್ರಾಸ್ ತರಹದ ಕೂದಲು-ನೋಟ, ನಡಾಲ್‌ಗೆ ಹೊರತೇ ಆದ ಹುರಿಗಟ್ಟಿದ ಭುಜ, ಜೊಕೊವಿಚ್ ತರಹದ ಚುರುಕು ಪಾದಚಲನೆ...ಎಲ್ಲವೂ ಬೆರೆತಂಥ ಹುಡುಗ ಅಲ್ಕರಾಜ್.

ಟೆನಿಸ್‌ನಲ್ಲಿ ಹೊಸ ನೀರು ಹಳೆನೀರಿನೊಟ್ಟಿಗೆ ಬೆರೆಯುವ ಪರಿಯೇ ಬೆರಗು. ಪೀಟ್ ಸಾಂಪ್ರಾಸ್ ತಣ್ಣಗೇ ಎದುರಾಳಿಯನ್ನು ಕೊಲ್ಲುವ ರೀತಿ ಆಡುತ್ತಿದ್ದಾಗ ಧ್ಯಾನಸ್ಥ ಫೆಡರರ್ ಬಂದು ಸವಾಲೆಸೆದಿದ್ದರು. ಫೆಡರರ್ ಪರಮ ಸಂಯಮದ ಆಟವೂ ಆವೆಮಣ್ಣಿನಲ್ಲಿ ಹುದುಗಿಹೋಗುವಂತೆ ಮಾಡಿ, ತಮ್ಮ ತೋಳುಗಳನ್ನು ಉಬ್ಬಿಸಿದ್ದವರು ರಫೆಲ್ ನಡಾಲ್. ಆಮೇಲೆ ನೊವಾಕ್ ಜೊಕೊವಿಚ್ ಸಪೂರ ಕಾಲುಗಳ ಪಾದರಸದಂಥ ಚಲನೆಗಳನ್ನು ಟೆನಿಸ್ ಅಭಿಮಾನಿಗಳು ಕಂಡರು. ಮೊನ್ನೆ ಅಲ್ಕರಾಜ್ ಅಮೆರಿಕ ಓಪನ್ ಸಿಂಗಲ್ಸ್‌ನಲ್ಲಿ ಆಡಿದ ಒಟ್ಟು 29 ಗಂಟೆ 39 ನಿಮಿಷಗಳ ಆಟವನ್ನು ಟೆನಿಸ್‌ನ ಪರಮ ಅಭಿಮಾನಿಗಳ್ಯಾರೂ ಮರೆಯಲಾರರು. ಎಟಿಪಿ ರ‍್ಯಾಂಕಿಂಗ್‌ನಲ್ಲಿ ಪ್ರಥಮ ಸ್ಥಾನಕ್ಕೆ ಜಿಗಿದ ವಿಶ್ವದ ಮೊದಲ ಹದಿಹರೆಯದ ಹುಡುಗ ಅರ್ಥಾತ್ ಟೀನೇಜರ್ ಅವರೆನಿಸಿಕೊಂಡ ಸಂದರ್ಭ ಅದು.

ಈ ವರ್ಷ ಮ್ಯಾಡ್ರಿಡ್‌ನ ಆವೆಮಣ್ಣಿನ ಅಂಕಣದಲ್ಲಿ ನಡಾಲ್ ಹಾಗೂ ಜೊಕೊವಿಚ್ ಇಬ್ಬರನ್ನೂ ಅಲ್ಕರಾಜ್ ಒಬ್ಬರ ನಂತರ ಒಬ್ಬರಂತೆ ಮಣಿಸಿದ್ದಕ್ಕೆ ಅಡಿಗೆರೆ ಎಳೆಯಬೇಕು. ಅವರನ್ನು ಅನೇಕರೀಗ ‘ಬೇಬಿ ನಡಾಲ್’ ಎನ್ನತೊಡಗಿದ್ದಾರೆ. ಇಂತಹ ಗುಣವಿಶೇಷಣವನ್ನು ಪ್ರೀತಿಯಿಂದ ಸ್ವೀಕರಿಸಿರುವ ಅವರು, ‘ಎಂಟನೇ ವಯಸ್ಸಿನಿಂದಲೇ ಅವರ ಆಟವನ್ನು ಕಣ್ತುಂಬಿಕೊಳ್ಳುತ್ತಾ ಬೆಳೆದವನು ನಾನು. ಟೆನಿಸ್ ಲೋಕದಲ್ಲಿ ರಫಾ ಅವರಿಂದ ಸ್ಫೂರ್ತಿ ಪಡೆದವರೆಷ್ಟೊ. ನಾನೂ ಅವರಲ್ಲಿ ಒಬ್ಬ’ ಎನ್ನುತ್ತಾರೆ.


ಐಟಿಎಫ್ ಟೂರ್ನಿಗಳಿಗೆ ಅಲ್ಕರಾಜ್ ಮೊದಲು ಪ್ರವೇಶ ಮಾಡಿದ್ದು 2018ರಲ್ಲಿ, ತಮ್ಮ ಹದಿನೈದನೇ ಹುಟ್ಟುಹಬ್ಬ ಆಚರಿಸಿಕೊಳ್ಳುವುದಕ್ಕೂ ಮೊದಲು. ನಡಾಲ್ ತಮಗೆ ಸ್ಫೂರ್ತಿ ಎಂದು ಹೇಳಿದರೂ, ಅವರೊಟ್ಟಿಗೆ ತಮ್ಮನ್ನು ಹೋಲಿಸುವುದು ಇಷ್ಟವಿಲ್ಲ. ಸ್ಪೇನ್‌ನ ನಿಕೊಲಸ್ ಅಲ್ಮಗ್ರೊ ಗತಕಾಲದಲ್ಲಿ ಫಾರ್ಮ್‌ನಲ್ಲಿದ್ದಾಗ ಸೃಜನಶೀಲವೂ ಆಕ್ರಮಣಕಾರಿಯೂ ಆದ ಆಟವಾಡುತ್ತಿದ್ದರು. ಅದೇ ದೇಶದ ಪ್ಯಾಬ್ಲೊ ಕ್ಯಾರೆನೊ ಬಸ್ಟಾ ರಕ್ಷಣಾತ್ಮಕವಾಗಿ ಆಡುತ್ತಲೇ ಎದುರಾಳಿಗಳ ಜಂಘಾಬಲ ಉಡುಗಿಸುತ್ತಿದ್ದ ಇನ್ನೊಂದು ತಂತ್ರವೂ ಇತ್ತು. ಅಲ್ಕರಾಜ್ ಇವೆರಡನ್ನು ತಮ್ಮದಾಗಿಸಿಕೊಂಡಂತೆ ಆಡುತ್ತಾರೆ.

2020ರಲ್ಲಿ ಸ್ಪೇನ್ ಹಾಗೂ ರಿಯೊ ಡಿ ಜನೈರೊದಲ್ಲಿ ನಡೆದ ಐಟಿಎಫ್ ಟೂರ್ನಿಗಳಲ್ಲಿ ಅವರು ಸಾಧಿಸಿದ ಗೆಲುವು ಮುಂದಿನ ನಡೆಗಳ ಮುನ್ನುಡಿಯಂತಿತ್ತು. ಆ ವರ್ಷ ಆಗಸ್ಟ್‌ನಿಂದ ಅಕ್ಟೋಬರ್ ಅವಧಿಯಲ್ಲಿ ಎಟಿಪಿ ಚಾಲೆಂಜರ್ ಟೂರ್ ಟೂರ್ನಿಗಳಲ್ಲಿ ಮೂರು ಪ್ರಶಸ್ತಿಗಳು ಹುಡುಗನ ಶಿರದಲ್ಲಿ ಗರಿ ಮೂಡಿಸಿದ್ದವು. ಎಟಿಪಿ ರ‍್ಯಾಂಕಿಂಗ್‌ನಲ್ಲಿ ಚಕಚಕನೆ ಮೇಲೇರಲು ಕಾರಣವಾದ ವಿಜಯಗಳಿವು. ಆಗ 490ನೇ ರ‍್ಯಾಂಕ್‌ನಲ್ಲಿದ್ದ ಅವರು, ನೋಡನೋಡುತ್ತಲೇ 136ನೇ ರ‍್ಯಾಂಕ್‌ಗೆ ಏರಿದ್ದು ಸೋಜಿಗ.

ಅಲ್ಕರಾಜ್ ತವರು ಮುರ್ಸಿಯಾ ಬಳಿಯ ಎಲ್ ಪಾಮರ್. ಅಲ್ಲೀಗ ಈ ಹುಡುಗನಿಗೆ ಟೆನಿಸ್‌ನಲ್ಲಿ ಸರಿಸಮಾನರು ಯಾರೂ ಇಲ್ಲ. ತರಬೇತುದಾರ ಜುವಾನ್ ಕಾರ್ಲೋಸ್ ಫೆರೆರೊ ಹುಡುಗನ ವೃತ್ತಿಯನ್ನು ಈ ಪಥಕ್ಕೆ ತಂದಿರುವುದು ಗಮನಾರ್ಹ. ಅಲ್ಕರಾಜ್ ಆತ್ಮವಿಶ್ವಾಸಕ್ಕೆ ಕಸುವು ತುಂಬಿದ್ದು ಅವರೇ.

ಹೊಡೆತ ಪ್ರಯೋಗಿಸುವಾಗ ಮೋನಿಕಾ ಸೆಲೆಸ್ ಜೋರಾದ ಶಬ್ದವೊಂದನ್ನು ಹೊಮ್ಮಿಸುತ್ತಿದ್ದರು. ಅಲ್ಕರಾಜ್ ಕೂಡ ಹಾಗೆಯೇ. ಅಮೆರಿಕ ಓಪನ್ ಫೈನಲ್‌ನಲ್ಲಿ ಅವರು 6-4, 2-6, 7-6 (7-1), 6-3ರಲ್ಲಿ ರುಡ್ ಅವರನ್ನು ಮಣಿಸಿದ್ದೇ ತಡ, ಅಂಗಳದ ಮೇಲೆ ಅಂಗಾತವಾದರು, ಮಕಾಡೆ ಮಲಗಿದರು. ಇಡೀ ಅಂಕಣದ ಮೇಲೆಯೇ ಮುದ್ದುಚೆಲ್ಲುವ ಸಂಭ್ರಮ. ಎದ್ದವರೇ, ಗ್ಯಾಲರಿಯಲ್ಲಿದ್ದ ಕುಟುಂಬದ ಸದಸ್ಯರನ್ನು ಅಪ್ಪಿಕೊಂಡರು. ಕೋಚ್ ಫೆರರೊ ಅವರಿಗೆ ವಿಶೇಷ ಬಿಸಿಯಪ್ಪುಗೆ. ಎಲ್ಲರ ಕಣ್ಣಾಲಿಗಳಲ್ಲಿ ನೀರಿತ್ತು. 14 ಏಸ್‌ಗಳನ್ನು ಪ್ರಯೋಗಿಸಿದ್ದ ಆಟಗಾರ ಇಷ್ಟು ಚಿಕ್ಕ ಹುಡುಗನಾ ಎನಿಸಿದ್ದು ಅಂತಹ ಬಾಲಸುಖವನ್ನು ಕಂಡಾಗಲೇ.


ಈ ವರ್ಷ ಮ್ಯಾಡ್ರಿಡ್‌ನ ಆವೆಮಣ್ಣಿನ ಅಂಕಣದಲ್ಲಿ ನಡಾಲ್ ಹಾಗೂ ಜೊಕೊವಿಚ್ ಇಬ್ಬರನ್ನೂ **ಕಾರ್ಲೋಸ್ ಅಲ್ಕರಾಜ್** ಒಬ್ಬರ ನಂತರ ಒಬ್ಬರಂತೆ ಮಣಿಸಿದ್ದಕ್ಕೆ ಅಡಿಗೆರೆ ಎಳೆಯಬೇಕು. ಅಲ್ಕರಾಜ್ ಅವರನ್ನು ಅನೇಕರೀಗ ‘ಬೇಬಿ ನಡಾಲ್’ ಎನ್ನಲು ಇನ್ನೇನು ಕಾರಣ ಬೇಕು?



ಅಲ್ಕರಾಜ್ ತಂದೆ ಕಾರ್ಲೋಸ್ ರಿಯಲ್ ಸೊಸೈಡ್ಯಾಡ್ ಡಿ ಕ್ಯಾಂಪೊ ಡಿ ಮುರ್ಸಿಯಾದಲ್ಲಿ ಟೆನಿಸ್ ಅಕಾಡೆಮಿ ನಿರ್ದೇಶಕರಾಗಿದ್ದರು. ಅವರೂ ವೃತ್ತಿಪರ ಟೆನಿಸ್ ಆಡಿದ್ದವರೆ. ಹೀಗಾಗಿ ನಾಲ್ಕು ವರ್ಷದ ಪುಟ್ಟ ಮಗನ ಕೈಗೆ ಅವರು ರ‍್ಯಾಕೆಟ್ ಕೊಟ್ಟಿದ್ದರು. ಅಪ್ಪನ ಆ ಉಡುಗೊರೆಯನ್ನು ಇತಿಹಾಸ ಸೃಷ್ಟಿಸುವ ಪರಿಕರವಾಗಿಸಿಕೊಂಡರು ಅಲ್ಕರಾಜ್.

ಇದೇ ವರ್ಷ 19ನೇ ಹುಟ್ಟುಹಬ್ಬ ಆಚರಿಸಿದ ಮರುದಿನವೇ ಮ್ಯಾಡ್ರಿಡ್‌ನಲ್ಲಿ ರಫೆಲ್ ನಡಾಲ್ ಅವರನ್ನು ಅಲ್ಕರಾಜ್ ಸೋಲಿಸಿದ್ದರು. ಐದು ಸಲ ನಡಾಲ್ ಅಲ್ಲಿ ಪ್ರಶಸ್ತಿ ಗೆದ್ದಿದ್ದವರು. ಅಂತಹ ಆಟಗಾರನನ್ನು ಅವರ ಮೆಚ್ಚಿನ ಆವೆಮಣ್ಣಿನ ಅಂಗಳದಲ್ಲಿ ಸೋಲಿಸುವುದೆಂದರೆ, ತಮಾಷೆಯಲ್ಲ. ಅಮೆರಿಕ ಓಪನ್ ಕ್ವಾರ್ಟರ್‌ಫೈನಲ್‌ನಲ್ಲಿ ಜನಿಕ್ ಸಿನ್ನರ್ ಅವರನ್ನು ಸೋಲಿಸಲು ಐದೂಕಾಲು ಗಂಟೆ ಐದು ಸೆಟ್ ಆಡಬೇಕಾಯಿತು. ಅಮೆರಿಕ ಓಪನ್ ಪುರುಷರ ಸಿಂಗಲ್ಸ್ ಇತಿಹಾಸದಲ್ಲೇ ಇದು ದಾಖಲೆ. ಹುಡುಗನೊಬ್ಬ ಮೊದಲ ಗ್ರ್ಯಾನ್ ಸ್ಲ್ಯಾಮ್ ಪ್ರಶಸ್ತಿ ಗೆದ್ದಾಗ ಕೂಡಿಡಲು ಇಷ್ಟೆಲ್ಲ ಸಂಗತಿಗಳು ಸಿಗುವುದು ಶುಭಸೂಚನೆಯಂತೂ ಹೌದು.

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 227



ಶಿವೆಯ ತಪೋತಾಪಕ್ಕೆ ವಿಶ್ವ ತಲ್ಲಣ

ಪಾರ್ವತಿ ಬಹುಕಾಲ ತಪಸ್ಸು ಮಾಡಿದರೂ, ಶಿವ ಪ್ರತ್ಯಕ್ಷನಾಗಲಿಲ್ಲ. ಶಿವ ಪ್ರತ್ಯಕ್ಷನಾಗುವವರೆಗೂ ತಪಸ್ಸನ್ನು ನಿಲ್ಲಿಸಲೇಬಾರದೆಂದು ದೃಢನಿಶ್ಚಯಮಾಡಿದ್ದ ಪಾರ್ವತಿ, ದಿನದಿಂದ ದಿನಕ್ಕೆ ತಪಸ್ಸು ಕಠಿಣಗೊಳಿಸುತ್ತಿದ್ದಳು. ಹೀಗಿರಲೊಂದು ದಿನ ಹಿಮವಂತ ಬಂದು ‘ಮಗಳೇ ಪಾರ್ವತಿ, ರುದ್ರ ವಿರಕ್ತನಾದವ. ಆತ ಸ್ತ್ರೀಯರಲ್ಲಿ ಆಸಕ್ತಿಯಿಲ್ಲದ ಯೋಗಿ. ಅದೀಗ ನಿನ್ನ ಘನಘೋರ ತಪಸ್ಸಿನ ನಂತರ ನಿಜವಾಗಿದೆ. ನೀನು ಇಷ್ಟೊಂದು ಕಠಿಣ ತಪಸ್ಸು ಮಾಡಿದರೂ ಆತ ಪ್ರತ್ಯಕ್ಷನಾಗಲಿಲ್ಲವೆಂದರೆ, ಈ ತಪಸ್ಸು ಮುಂದುವರೆಸುವುದರಲ್ಲಿ ಅರ್ಥ ಇಲ್ಲ. ನಿನ್ನ ಶರೀರವು ಕೋಮಲವಾದುದು. ಕಾಯಕ್ಲೇಶಗಳನ್ನು ಸಹಿಸಿ ಮಾಡಬೇಕಾದ ಈ ತಪಸ್ಸು ನಿನಗೆ ಯೋಗ್ಯವಲ್ಲ. ಆದುದರಿಂದ ಗಿರಿಜೆ, ಏಳು ಮನೆಗೆ ಹೋಗೋಣ. ರುದ್ರನು ಮಹಾವಿರಕ್ತನಾಗಿದ್ದರಿಂದಲೇ ಕಾಮವಿಕಾರಕ್ಕೊಳಗಾಗದೆ ಮನ್ಮಥನನ್ನು ಭಸ್ಮಮಾಡಿದ. ಇಂಥವನನ್ನು ಪತಿಯಾಗೆಂದು ಏಕೆ ಪ್ರಾರ್ಥಿಸುವೆ? ಆಕಾಶದಲ್ಲಿರುವ ಚಂದ್ರನನ್ನು ಹಿಡಿಯಲು ಹೇಗೆ ಸಾಧ್ಯವಿಲ್ಲವೊ, ಅದರಂತೆ ಶಂಕರನನ್ನು ಪಡೆಯಲು ಸಾಧ್ಯವಿಲ್ಲ’ ಎಂದ.

ಇದೇ ರೀತಿಯಲ್ಲಿ ತಾಯಿ ಮೇನಾದೇವಿ, ನೂರು ಸೋದರರಲ್ಲಿ ಶ್ರೇಷ್ಠನಾದ ಅಣ್ಣ ಮೈನಾಕ, ಬಂಧುಗಳಾದ ಸಹ್ಯಾದ್ರಿ, ಮೇರುಗಿರಿ, ಮಂದಾರಗಿರಿ, ಕ್ರೌಂಚಗಿರಿ ಮುಂತಾದವರು ಯುಕ್ತಿಯುಕ್ತವಾದ ಮಾತುಗಳನ್ನಾಡಿ ಗಿರಿಜೆಯನ್ನು ಮನೆಗೆ ಹಿಂತಿರುಗುವಂತೆ ಒತ್ತಾಯಿಸಿದರು.

ಎಲ್ಲರ ಹಿತವಚನಗಳನ್ನು ಕೇಳಿದ ನಂತರ ಪಾರ್ವತಿ ಹೇಳಿದಳು, ‘ಹಿಂದೆಯೇ ನಾನೊಂದು ಮಾತನ್ನು ಹೇಳಿದ್ದೆ, ಈಗಲೂ ಆ ಮಾತನ್ನೇ ಹೇಳುವೆನು ಕೇಳಿ. ಮಹಾದೇವ ಮಹಾವಿರಕ್ತ. ತನ್ನ ಮನಸ್ಸು ಬದಲಿಸಲು ಬಂದ ಮನ್ಮಥನನ್ನು ಭಸ್ಮಮಾಡಿರುವವ. ಆದರೂ ಅವನು ಭಕ್ತವತ್ಸಲ. ಅವನನ್ನು ತಪಸ್ಸಿನಿಂದ ಪ್ರಸನ್ನಗೊಳಿಸಿ, ಅವನ ಒಲವು ಗೆಲ್ಲುವೆ. ಇದರಲ್ಲಿ ನನಗೆ ಅಮಿತ ವಿಶ್ವಾಸವಿದೆ. ಆದ್ದರಿಂದ ಈಗ ನೀವೆಲ್ಲರೂ ನಿಮ್ಮ ನಿಮ್ಮ ಮನೆಗಳಿಗೆ ತೆರಳಿರಿ. ಪರಮೇಶ್ವರನು ನನ್ನ ತಪಸ್ಸಿಗೆ ಪ್ರಸನ್ನನಾಗಿಯೇ ಆಗುವನು. ಇದರಲ್ಲಿ ಮತ್ತೊಮ್ಮೆ ಯೋಚಿಸುವಂಥದ್ದೇನು ಇಲ್ಲ. ಮನ್ಮಥನನ್ನು ಭಸ್ಮಮಾಡಿದ ಶಿವನನ್ನು ಕೇವಲ ತಪಸ್ಸಿನಿಂದಲೇ ಮತ್ತೆ ಇಲ್ಲಿಗೆ ಕರೆದುಕೊಂಡು ಬರುವೆ’ ಎಂದು ಹೇಳಿದಳು.

ಗಿರಿಜೆಯ ಯುಕ್ತವಾದ ಮಾತನ್ನು ಕೇಳಿ ಮೇರು ಮತ್ತು ಹಿಮಾಲಯ ಮೊದಲಾದ ಬಂಧುಗಳು ಪಾರ್ವತಿಯನ್ನು ಪ್ರಶಂಸಿಸುತ್ತಾ ಹಿಂತಿರುಗಿದರು. ನಂತರ ಗಿರಿಜೆ ಹಿಂದೆಂದಿಗಿಂತ ಘೋರವಾದ ತಪಸ್ಸನ್ನು ಸ್ಥಿರಪ್ರಜ್ಞೆಯಿಂದ ಮಾಡತೊಡಗಿದಳು. ಪಾರ್ವತಿಯ ಘೋರತಪಸ್ಸಿನಿಂದ ದೇವ, ಮನುಷ್ಯ, ದೈತ್ಯ, ಪಶು ಮುಂತಾದ ಜಗತ್ತೆಲ್ಲವೂ ತಾಪಗೊಂಡು ತಲ್ಲಣಿಸಿಹೋದವು. ಆಗ ದೇವತೆಗಳು, ಅಸುರರು, ಯಕ್ಷ, ಕಿನ್ನರ, ಚಾರಣರು, ಸಿದ್ಧರು, ಸಾಧ್ಯರು, ಮುನಿಗಳು, ವಿದ್ಯಾಧರರು, ಸರ್ಪಕುಲಗಳು, ಪ್ರಜಾಪತಿಗಳು, ಗುಹ್ಯಕರು ಮುಂತಾದವರೆಲ್ಲರೂ ತುಂಬಾ ದುಃಖಿತರಾದರು.

ಪಾರ್ವತಿಯ ತಪೋಜ್ವಾಲೆಯಿಂದ ಕಂಗಾಲಾದ ದೇವತೆಗಳೆಲ್ಲರೂ ಬೃಹಸ್ಪತಿಯೊಡನೆ ಬ್ರಹ್ಮನ ಬಳಿಗೆ ಶರಣು ಬಂದರು. ಅವರ ಮುಖವು ಚಿಂತೆಯಿಂದ ಕಾಂತಿಹೀನವಾಗಿ ಬಾಡಿಹೋಗಿತ್ತು. ಅವರೆಲ್ಲರೂ ಬ್ರಹ್ಮನನ್ನು ಸ್ತುತಿಸಿ, ‘ನಿನ್ನಿಂದ ಸೃಷ್ಟಿಯಾದ ಸ್ಥಿರಚರಾತ್ಮಕವಾದ ಜಗತ್ತು ಈಗ ತುಂಬಾ ಸಂತಪ್ತವಾಗಿದೆ. ಇದಕ್ಕೆ ಕಾರಣವೇನೆಂದು ನಮಗೆ ತಿಳಿಯದು. ಇದಕ್ಕೆ ಕಾರಣವೇನೆಂಬುದನ್ನು ಯೋಚಿಸಿ ಹೇಳು. ಸಂತಾಪಗೊಂಡಿರುವ ದೇವತೆಗಳನ್ನು ನಿನ್ನ ಹೊರತು ಇನ್ನಾರೂ ರಕ್ಷಿಸಲಾರರು’ ಎಂದು ಪ್ರಾರ್ಥಿಸಿದರು. •

ಗುಂಡಣ್ಣ



ಫ್ಯಾಕ್ಟ್ ಚೆಕ್

ಪಿವಿ

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಅರವಿಂದ ಕೇಜ್ರಿವಾಲ್ ಅವರು ಸಾಮಾನ್ಯರೊಬ್ಬರ ಮನೆಯಲ್ಲಿ ನಿಂತಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮನೆಯ ಗೋಡೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವನ್ನು ಹಾಕಲಾಗಿದೆ. ‘ಕೇಜ್ರಿವಾಲ್ ಯಾರ ಮನೆಗೆ ಹೋಗಿದ್ದಾರೋ ಅವರು ಮೋದಿಜೀ ಅವರ ಅಭಿಮಾನಿಯಾಗಿದ್ದಾರೆ. ಕೇಜ್ರಿವಾಲ್ ಮುಟ್ಠಾಳರಾದರು’ ಎಂದು ಬಿಜೆಪಿಯ ಜೈಪಾಲ್ ಸಿಂಗ್ ಟ್ವೀಟ್ ಮಾಡಿದ್ದಾರೆ. ಇದೇ ಅರ್ಥ ಬರುವ ಹಲವು ಪೋಸ್ಟ್‌ಗಳು ಸಾವಿರಾರು ಬಾರಿ ಹಂಚಿಕೆಯಾಗಿವೆ.

‘ಇದು ಸುಳ್ಳು ಸುದ್ದಿ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಗುಜರಾತ್ ಪ್ರವಾಸದ ವೇಳೆ ಅರವಿಂದ ಕೇಜ್ರಿವಾಲ್ ಅವರು ಆಟೊ ಚಾಲಕರೊಬ್ಬರ ಮನೆಗೆ ಊಟಕ್ಕೆ ಹೋಗಿದ್ದರು. ಆ ಮನೆಯ ಚಿತ್ರವನ್ನು ಎಎಪಿ ಪ್ರಕಟಿಸಿತ್ತು. ಮೂಲ ಚಿತ್ರದಲ್ಲಿ, ಮನೆಯ ಗೋಡೆಯ ಮೇಲೆ ಮೋದಿ ಅವರ ಫೋಟೊ ಇಲ್ಲ. ಆದರೆ, ಮೂಲ ಚಿತ್ರವನ್ನು ತಿರುಚಿ ಅದರಲ್ಲಿ ಮೋದಿ ಅವರ ಫೋಟೊವನ್ನು ಸೇರಿಸಲಾಗಿದೆ. ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ವಿವರಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಸಪ್ತಮಿ ಗಂ. 14-15 ನಕ್ಷತ್ರ: ರೋಹಿಣಿ ಗಂ. 12-21 ಯೋಗ: ವಜ್ರ ಗಂ. 05-49, ಕರಣ: ಬವ ಗಂ. 14-15, ಸಿಂಹ ಮಾಸದ 31 ನೇ ದಿನ. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-23 ಸೂರ್ಯಾಸ್ತ : 06-27

ದಿನ ವಿಶೇಷ : ಕನ್ಯಾ ಸಂಕ್ರಮಣ, ಅಮೃತ ಸಿದ್ಧಿ ಯೋಗ, ಶೃಂಗೇರಿ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳವರ ಆರಾಧನೆ, ಮುಸ್ಲಿಂ ದಿನಾಂಕ : 20 ಸಫರ್

ಅದೃಷ್ಟ ಸಂಖ್ಯೆ : 3, 11

ಮೇಷ: ಧಾರ್ಮಿಕ ಕ್ಷೇತ್ರದ ಆಡಳಿತ ವ್ಯಕ್ತಿಗೆ ಅಥವಾ ವ್ಯವಸ್ಥಾಪಕರಿಗೆ ನಿಂದನೆಯ ಭೀತಿ, ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶ ಎದುರಾಗಬಹುದು. ಸ್ನೇಹಿತರ ಆತ್ಮೀಯ ಮಾತುಗಳು ಜೀವನದಲ್ಲಿ ಧೈರ್ಯ ತರುತ್ತದೆ.

ವೃಷಭ: ಸರ್ಕಾರಿ ಕಾಮಗಾರಿ ಕೆಲಸಗಳು ದೊರೆತು ಆರ್ಥಿಕ ಅಭಿವೃದ್ಧಿ ಹೊಂದುವಿರಿ. ಪ್ರೀತಿ ಪಾತ್ರರೊಂದಿಗಿನ ಮಾತುಕತೆ ಈ ದಿನದ ನೆಮ್ಮದಿಯನ್ನು ಉಂಟುಮಾಡುತ್ತದೆ.

ಮಿಥುನ: ಉದ್ಯೋಗದಲ್ಲಿ ಬೇರೆಯವರ ಹಿಡಿತದಿಂದ ಹೊರಬರುವ ಪ್ರಯತ್ನಕ್ಕೆ ಜಯ ಸಿಗುವುದು. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಅಧಿಕ ಆದಾಯವಿರುವುದು.

ಕರ್ಕಾಟಕ: ಕಚೇರಿಯಲ್ಲಿ ಅರಿವಿಲ್ಲದ ವಿಚಾರಗಳಲ್ಲಿ ಸಹೋದ್ಯೋಗಿಗಳ ಸಹಕಾರ ಪಡೆಯುವುದು ಉತ್ತಮ. ನಿವೇಶನ ಕೊಳ್ಳುವ ನಿಮ್ಮ ಕನಸು ನನಸಾಗಲಿದೆ. ಹೆಚ್ಚಿನ ಹಣಕಾಸಿನ ಹೊಂದಾಣಿಕೆ ನಡೆಸಬಹುದು.

ಸಿಂಹ: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಜಯ ಗಳಿಸುವರು. ನಾಯಕತ್ವದ ಸ್ಥಾನಕ್ಕೆ ಆಯ್ಕೆಯಾಗುವ ಲಕ್ಷಣಗಳಿದೆ. ಸಾಮಾಜಿಕ ಕಾರ್ಯಕ್ಷೇತ್ರಗಳಲ್ಲಿ ನಿಮ್ಮ ಹೆಸರು ಕೇಳಿಬರಲಿದೆ. ಖಾದಿ ಉದ್ಯಮದವರಿಗೆ ಪ್ರೋತ್ಸಾಹ ಸಿಗುವುದು.

ಕನ್ಯಾ: ರಾಜಕೀಯ ವ್ಯಕ್ತಿಗಳ ಸಹಾಯದಿಂದ ವೈಯಕ್ತಿಕ ಕಾರ್ಯಗಳು ನಡೆಯುವುದು. ಆಡಳಿತ ಮಂಡಳಿಯವರೆದುರು ಕಾರ್ಮಿಕರ ಪರವಾಗಿ ನಿಲ್ಲುವುದು ನಿಮ್ಮ ಉದ್ಯೋಗಕ್ಕೆ ಕಂಟಕವನ್ನು ತಂದೊಡ್ಡಲಿದೆ.

ತುಲಾ: ಮನಸ್ಸಿನಲ್ಲಿ ಯಾವುದೇ ರೀತಿಯ ಗೊಂದಲಗಳಿರುವುದಿಲ್ಲ. ಔಷಧ ವ್ಯಾಪಾರಿಗಳ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದು. ಪ್ರಯಾಣ ಮತ್ತು ಹೊಸಬರ ಪರಿಚಯ ನಿಮಗೆ ಅನುಕೂಲಕರವಾಗಲಿದೆ.

ವೃಶ್ಚಿಕ: ರಾಜಕೀಯದಲ್ಲಿನ ಅಧಿಕಾರಿಗಳ ಬದಲಾವಣೆ ನಿಮ್ಮ ಉದ್ಯೋಗಕ್ಕೆ ಲಾಭ ತರುವುದು. ಕಂಪನಿಯ ಹೆಚ್ಚಿನ ಹೊಣೆಗಾರಿಕೆ ನಿಮ್ಮದಾಗಲಿದೆ. ಸುಗಂಧ ದ್ರವ್ಯಗಳ ಮಾರಾಟ ಲಾಭದಾಯಕವಾಗಲಿದೆ.

ಧನು: ನಿಮ ಸೇವೆಯು ಅಧಿಕಾರಿಗಳಲ್ಲಿ ವಿಶ್ವಾಸವನ್ನು ಉಳಿಸಿಕೊಂಡು ಹೋಗುವ ರೀತಿಯಲ್ಲಿ ಇದ್ದರೆ ಒಳ್ಳೆಯದು. ಕಾನೂನು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯಲ್ಲ.

ಮಕರ: ಬರಹಗಾರರಿಗೆ ಪುರಸ್ಕಾರ ದೊರಕುತ್ತದೆ. ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಮ್ಮ ಗುಣ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವುದು. ಮೊದಲೇ ಸಾಕಷ್ಟು ತಯಾರಿ ರೂಪಿಸಿಕೊಂಡರೆ ಗುರಿ ಮುಟ್ಟುವುದು ಕಷ್ಟವೇನಲ್ಲ.

ಕುಂಭ: ಈ ದಿನ ಸಿಹಿಕಹಿಯ ಎರಡೂ ಅನುಭವಗಳು ನಿಮಗಾಗಬಹುದು. ಸಹೋದರರಲ್ಲಿ ಉಂಟಾದ ಸಮಸ್ಯೆ ಹೆಚ್ಚಿನ ವಿವಾದಕ್ಕೆ ಆಸ್ಪದವಾಗದಂತೆ ಬಗೆಹರಿಸಿಕೊಳ್ಳಿ. ಅನಗತ್ಯ ಅಲೆದಾಟಗಳು ತಪ್ಪಲಿದೆ. ಅರಣ್ಯ ಪಾಲಕರಿಗೆ ಬಡ್ತಿ

ಮೀನ: ನಿಮಗೆ ಒದಗಿಬರಲಿರುವ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಗುರು ನಿಂದನೆಯಂತಹ ಪಾಪದ ಕೆಲಸಗಳನ್ನು ಮಾಡಬೇಡಿ. ಕ್ರೀಡಾ ಪಟುಗಳಿಗೆ ಸಾಮರ್ಥ್ಯ ಪ್ರದರ್ಶನಕ್ಕೆ ಉತ್ತಮ ಅವಕಾಶ ಲಭಿಸುವುದು.

ಪದಬಂಧ 5082


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಿಂದ ಆಹಾರ ಅರಗದೇ ಇರುವುದು (3)
2.ಕನ್ನಡಿಗನ ಬಾಯಲ್ಲಿ ನೈಟ್ರೋಜನ್! (5)
4.ಎದುರಿಗೆ ಮೂರ್ತೀಭವಿಸುವುದು (4)
6.ದಂಪತಿಗಳು ಹಬ್ಬಿಸಿದ ಗಾಳಿಸುದ್ದಿ (3)
7.ಮತ ಹಾಕುವಾಗ ಆವರಿಸಿದ ಕತ್ತಲು (2)
9.ಆ ದಿನದೊಳಗೆ ಕಾಣಿಸಿರುವ ಮಂತ್ರಿ (3)
11.ತಿಲಕದ ಹತ್ತಿರವಿರುವ ಎಳ್ಳು (2)
13.ಹೊಸದಾಗಿ ಕಾಣುತ್ತಿರುವ ಧಾನ್ಯ (3)
14.ಕೈಯಲ್ಲಿರಿಸಿಕೊಂಡಿರುವ ಖಡ್ಗ (4)
16.ಕಲಹ ಮಾಡುವ ಸ್ವಭಾವದವಳು (5)
17.ಶಿವನಿಗೆ ಸಲ್ಲಿಸಿದ ಮುಡಿಪು (3)

ಮೇಲಿಂದ ಕೆಳಕ್ಕೆ

1.ಹಿಂಸೆ ಮಾಡಬಾರದೆಂಬ ವ್ರತ (5)
2.ಗಂಧವನ್ನು ತೇಯುವ ಕಲ್ಲು (2)
3.ಅದೇ ತಾನೆ ಮದುವೆಯಾದ ಜೋಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವ (5)
10.ನರನಿಗೆ ಕಾಣಿಸಿದ್ದು ಪಾಪಿಗಳ ಲೋಕ (3)
12.ರಾಮನ ಮಗ ಬಂದಿರುವುದಕ್ಕೇ ಈ ಹುರುಪು (5)
15.ತುಂಟಿಯ ಅಧರ! (2)



5081ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಮೋದ 6.ತಾರಾತಿಗಡಿ
7.ರಕ್ಕಸ 10.ಚಿತ್ತಪಲ್ಲಟ
15.ಕಾಮನೆ
16.ಗುಪ್ತಗಾಮಿನಿ
17.ರಸನ

ಮೇಲಿಂದ ಕೆಳಕ್ಕೆ:
1.ಆಭರಣ 2.ದವಸ
3.ಪ್ರತಾಪ 4.ವಂತಿಗೆ
5.ಜಡಿಮಳೆ 8.ಉತ್ತರ
9.ಕ್ಷುಲ್ಲಕ 11.ಅವಗುಣ
12.ಮನೆತನ 13.ಸಂಗಾತಿ
14.ಮಾನಿನಿ 15.ಕಾತರ

ಸುಡೊಕು 5468

	2	1		8				
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5467 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಷೇರುಪೇಟೆ ವಹಿವಾಟು 1093



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,877
ಇಂದಿನ ಅಂತ್ಯ	17,531
▼	346
ದಿನದ ಕನಿಷ್ಠ	17,497

ವಿನಿಮಯ ದರ

$ ಡಾಲರ್	79.78
£ ಪೌಂಡ್	90.74
€ ಯುರೊ	79.49
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹1170 (1175)
ಸೂರ್ಯಕಾಂತಿ (ರಿಫೈನ್ಡ್)	₹1340 (1350)
ಪಾಮೋಲಿನ್	₹930 (935)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹400-666
ದ್ವಿತಳಿ (ಬಿ.ವಿ)	₹408-873

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1000-1200
ಮಧ್ಯಮ	₹800-1000
ಸಣ್ಣ	₹400-800

‘ವಿಶ್ವದ 2ನೇ ಸಿರಿವಂತ’ ಸ್ಥಾನಕ್ಕೇರಿದ್ದ ಅದಾನಿ

ಮುಂಬೈ (ಎಎಫ್‌ಪಿ): ಉದ್ಯಮಿ ಗೌತಮ್ ಅದಾನಿ ಅವರು ಕಿರು ಅವಧಿಗೆ ಜಗತ್ತಿನ ಸಿರಿವಂತರ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದ್ದರು.

ಫೋರ್ಬ್ಸ್ ನಿಯತಕಾಲಿಕೆಯ ಪ್ರಕಾರ, ಅದಾನಿ ಅವರ ಸಂಪತ್ತು ಕಿರು ಅವಧಿಗೆ ₹ 31,880 ಕೋಟಿಯಷ್ಟು ಹೆಚ್ಚಾಗಿ ₹12,27,380 ಕೋಟಿಗೆ ಏರಿಕೆ ಕಂಡಿತ್ತು. ಇದರಿಂದಾಗಿ ಎಲ್‌ವಿಎಂಎಚ್‌ನ ಬರ್ನಾರ್ಡ್ ಅರ್ನಾಲ್ಟ್ ಮತ್ತು ಅಮೆಜಾನ್‌ನ ಜೆಫ್ ಬೆಜಾಸ್ ಅವರಿಗಿಂತಲೂ ಮೇಲಿನ ಸ್ಥಾನವನ್ನು ಅದಾನಿ ಪಡೆದುಕೊಂಡಿದ್ದರು.

ಟೆಸ್ಲಾ ಕಂಪನಿಯ ಸ್ಥಾಪಕ ಇಲಾನ್ ಮಸ್ಕ್ ಅವರು ಒಟ್ಟು ₹ 21,51,900 ಕೋಟಿ ಮೌಲ್ಯದ ಸಂಪತ್ತು ಹೊಂದುವ ಮೂಲಕ ಸಿರಿವಂತರ ಪಟ್ಟಿಯಲ್ಲಿ ಮೊದಲ ಸ್ಥಾನ ಕಾಯ್ದುಕೊಂಡಿದ್ದಾರೆ.

ಅದಾನಿ ಒಡೆತನದ ಕಂಪನಿಗಳ ಷೇರು ಮೌಲ್ಯದಲ್ಲಿ ಏರಿಕೆ ಆಗಿದ್ದರಿಂದ ಅವರ ಒಟ್ಟು ಸಂಪತ್ತು ಮೌಲ್ಯದಲ್ಲಿ ಹೆಚ್ಚಳ ಕಂಡುಬಂದು ಎರಡನೇ ಸ್ಥಾನಕ್ಕೆ ಏರಿದ್ದರು. ಅದಾನಿ ಅವರು ಶೇ75ರಷ್ಟು ಪಾಲು ಹೊಂದಿರುವ ಅದಾನಿ ಎಂಟರ್‌ಪ್ರೈಸಸ್‌ನ ಷೇರುಗಳು 2020ರ ಮಾರ್ಚ್‌ನಿಂದ ಈಚೆಗೆ ಶೇ 2,700ಕ್ಕೂ ಹೆಚ್ಚು ಏರಿಕೆ ಕಂಡಿವೆ.

ಕರಣ್ ಅದಾನಿಗೆ ಸಿಮೆಂಟ್ ವಹಿವಾಟು


ಕರಣ್

ನವದೆಹಲಿ (ಪಿಟಿಐ): ಅದಾನಿ ಸಮೂಹದ ಸಿಮೆಂಟ್ ಕಂಪನಿಗಳ ವಹಿವಾಟಿನ ಹೊಣೆಯನ್ನು ಗೌತಮ್ ಅದಾನಿ ಅವರ ಮಗ ಕರಣ್ ಅದಾನಿ ಅವರಿಗೆ ವಹಿಸಲಾಗಿದೆ.

ಅಂಬುಜಾ ಸಿಮೆಂಟ್ಸ್ ಮತ್ತು ಎಸಿಸಿ ಸಿಮೆಂಟ್ಸ್ ಕಂಪನಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಅದಾನಿ ಸಮೂಹವು ಶುಕ್ರವಾರ ಘೋಷಿಸಿದೆ.

ಆ ಬಳಿಕ, ಗೌತಮ್ ಅದಾನಿ ಅವರು ಅಂಬುಜಾ ಸಿಮೆಂಟ್ಸ್‌ನ ಮುಖ್ಯಸ್ಥರಾಗಿ ನೇಮಕ ಆಗಿದ್ದು, ಅವರ ಮಗ ಕರಣ್ ಅವರು ಎಸಿಸಿ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ಎರಡೂ ಕಂಪನಿಗಳ ನಿರ್ದೇಶಕರಾಗಿ ನೇಮಕ ಆಗಿದ್ದಾರೆ.

ಷೇರುಪೇಟೆಗಳಲ್ಲಿ ಮಾರಾಟದ ಒತ್ತಡ: ವಿದೇಶಿ ಬಂಡವಾಳ ಹಿಂತೆಗೆತ

ಹಿಂಜರಿತದ ಭೀತಿ: ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ/ರಾಯಿಟರ್ಸ್): ಆರ್ಥಿಕ ಹಿಂಜರಿತದ ಭೀತಿಯಿಂದಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಶುಕ್ರವಾರ ಮಾರಾಟದ ಒತ್ತಡ ಕಂಡುಬಂದಿತು. ದೇಶದ ಷೇರುಪೇಟೆಗಳ ಮೇಲೆಯೂ ಅದು ತೀವ್ರ ಪರಿಣಾಮ ಬೀರಿತು.

ಶುಕ್ರವಾರದ ವಹಿವಾಟಿನಲ್ಲಿ ಸೂಚ್ಯಂಕಗಳು ಶೇ 2ರವರೆಗೂ ಕುಸಿತ ಕಾಣುವಂತಾಯಿತು. ಸತತ ಮೂರನೇ ದಿನವೂ ಸೂಚ್ಯಂಕಗಳು ಇಳಿಕೆ ಕಂಡವು. 2023ರಲ್ಲಿ ಆರ್ಥಿಕ ಹಿಂಜರಿತ ಎದುರಾಗಬಹುದು ಎಂದು ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹೇಳಿರುವುದು ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಕುಸಿತಕ್ಕೆ ಪ್ರಮುಖ ಕಾರಣ.


ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಸಹ ವಹಿವಾಟಿನ ಇಳಿಕೆಗೆ ಕಾರಣವಾದವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,093 ಅಂಶ ಕುಸಿಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 346 ಅಂಶ ಇಳಿಕೆ ಕಂಡಿತು.

‘ಅಮೆರಿಕದ ಹಣದುಬ್ಬರವು ತಿಂಗಳಿನಿಂದ ತಿಂಗಳಿಗೆ ಏರಿಕೆಯಾಗುತ್ತಲೇ ಇದೆ. ಹೀಗಾಗಿ ಫೆಡರಲ್ ರಿಸರ್ವ್ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡುವ ಸಾಧ್ಯತೆ ಇರುವುದರಿಂದ ಜಾಗತಿಕ ಮಾರುಕಟ್ಟೆಗಳು ಇಳಿಕೆ ಕಂಡವು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಷೇರುಪೇಟೆಯಲ್ಲಿ ಹೆಚ್ಚಿನ ಮಾರಾಟದ ಒತ್ತಡ ಕಂಡುಬಂತು. ಐ.ಟಿ., ರಿಯಾಲ್ಟಿ ಮತ್ತು ವಾಹನ ವಲಯದ ಷೇರುಗಳು ಹೆಚ್ಚು ನಷ್ಟ ಕಂಡವು’ ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ತಿಳಿಸಿದ್ದಾರೆ.

ವಲಯವಾರು ಇಳಿಕೆ (%)



ಐ.ಟಿ. ಉದ್ಯಮಕ್ಕೆ ಪೆಟ್ಟು?



ಅಮೆರಿಕ ಮತ್ತು ಯುರೋಪ್‌ನಲ್ಲಿ ಬಡ್ಡಿದರ ಏರಿಕೆ ಕಂಡರೆ ಅದರಿಂದ ಭಾರತದ ಐ.ಟಿ. ಉದ್ಯಮಕ್ಕೆ ನೇರ ಹೊಡೆತ ಬೀಳಲಿದೆ. ಅಮೆರಿಕ ಮತ್ತು ಯುರೋಪ್‌ನಿಂದಲೇ ತಂತ್ರಜ್ಞಾನ ವಲಯವು ಹೆಚ್ಚಿನ ಪ್ರಮಾಣದ ವರಮಾನ ಗಳಿಸುತ್ತಿದೆ. ಬಡ್ಡಿದರ ಹೆಚ್ಚಾದರೆ ಕಂಪನಿಗಳಿಗೆ ಬರುವ ವರಮಾನ ಕಡಿಮೆ ಆಗಲಿದೆ. ಹೂಡಿಕೆದಾರರು ಈ ಅಪಾಯವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂದು ಇಂಡಿಯಾಚಾರ್ಟ್ಸ್ ಕಂಪನಿಯ ಸ್ಥಾಪಕ ರೋಹಿತ್ ಶ್ರೀವಾಸ್ತವ ಹೇಳಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಸಭೆಯು ಇದೇ 20 ಮತ್ತು 21ರಂದು ನಡೆಯಲಿದ್ದು, ಜಾಗತಿಕ ಮಾರುಕಟ್ಟೆಯು ಒತ್ತಡದಲ್ಲಿಯೇ ಇರುವ ನಿರೀಕ್ಷೆ ಇದೆ ಎಂದೂ ಅವರು ತಿಳಿಸಿದ್ದಾರೆ.

ನಿಫ್ಟಿ ಐ.ಟಿ. ಸೂಚ್ಯಂಕ ವಾರದಲ್ಲಿ ಶೇ 7ರಷ್ಟು ಇಳಿಕೆ ಕಂಡಿದೆ. ಜೂನ್ ತಿಂಗಳ ಮಧ್ಯಭಾಗದ ಬಳಿಕ ಸೂಚ್ಯಂಕದ ದೊಡ್ಡ ಇಳಿಕೆ ಇದಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ0.32ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 91.13 ಡಾಲರ್‌ಗೆ ತಲುಪಿತು.

ಹೂಡಿಕೆದಾರರಿಗೆ ₹6.18 ಲಕ್ಷ ಕೋಟಿ ನಷ್ಟ: ಮುಂಬೈ ಷೇರುಪೇಟೆಯಲ್ಲಿ ಶುಕ್ರವಾರ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 6.18 ಲಕ್ಷ ಕೋಟಿಯಷ್ಟು ಕರಗಿತು. ಇದರಿಂದಾಗಿ ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯ ₹279.68 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಚಿನ್ನ, ಬೆಳ್ಳಿ ದರ ಇಳಿಕೆ: ದೆಹಲಿಯ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆಯು ₹ 813ರಷ್ಟು ಇಳಿಕೆಯಾಗಿದ್ದು ₹ 49,447ರಂತೆ ಮಾರಾಟವಾಗಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹1,379ರಷ್ಟು ಕಡಿಮೆ ಆಗಿದ್ದು, ₹55,982ರಂತೆ ಮಾರಾಟವಾಗಿದೆ.

2023ಕ್ಕೆ ಆರ್ಥಿಕ ಹಿಂಜರಿತ

ಒಂದನೇ ಪುಟದಿಂದ

‘ಜಾಗತಿಕ ಬೆಳವಣಿಗೆ ದರವು ತೀವ್ರಗತಿಯಲ್ಲಿ ಕುಸಿಯುತ್ತಿದೆ. ಹೆಚ್ಚಿನ ದೇಶಗಳು ಹಿಂಜರಿತಕ್ಕೆ ಸಿಲುಕಿದಾಗ ಜಾಗತಿಕ ಬೆಳವಣಿಗೆ ಇನ್ನಷ್ಟು ತಗ್ಗುವ ಸಾಧ್ಯತೆ ಇದೆ’ ಎಂದು ವಿಶ್ವ ಬ್ಯಾಂಕ್ ಅಧ್ಯಕ್ಷ ಡೇವಿಡ್ ಮಾಲ್ಪಾಸ್ ಹೇಳಿಕೆ ನೀಡಿದ್ದಾರೆ. ‘ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ಅರ್ಥ ವ್ಯವಸ್ಥೆಗಳಲ್ಲಿನ ಜನರ ಮೇಲೆ ದೀರ್ಘಾವಧಿವರೆಗೆ ವಿನಾಶಕಾರಿ ಪರಿಣಾಮಗಳು ಇರುತ್ತವೆ. ಇದು ನನ್ನಲ್ಲಿ ಕಳವಳ ಉಂಟುಮಾಡುತ್ತಿದೆ’ ಎಂದು ಹೇಳಿದ್ದಾರೆ.

ಬೇಡಿಕೆ ತಗ್ಗಿಸುವುದರ ಮೇಲೆ ಗಮನ ನೀಡುವುದಕ್ಕಿಂತಲೂ ಉತ್ಪಾದನೆಯನ್ನು ಹೆಚ್ಚಿಸುವತ್ತ ನೀತಿ ನಿರೂಪಕರು ಗಮನ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ತೀರಾಕೆಟ್ಟ ಸಂದರ್ಭದಲ್ಲಿ, ಮುಂದುವರಿದ ಅರ್ಥ ವ್ಯವಸ್ಥೆಗಳಲ್ಲಿ ಹಿಂಜರಿತ ಇರಲಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ಹಾಗೂ ಅಭಿವೃದ್ಧಿ ಹೊಂದುತ್ತಿರುವ ಅರ್ಥ ವ್ಯವಸ್ಥೆಗಳಲ್ಲಿ ಬೆಳವಣಿಗೆ ತೀವ್ರ ಇಳಿಕೆ ಕಾಣಲಿದೆ ಎಂದು ವರದಿ ಹೇಳಿದೆ.

ಪತಂಜಲಿ ಸಮೂಹದಿಂದ 4 ಐಪಿಒ

ನವದೆಹಲಿ (ಪಿಟಿಐ): ಪತಂಜಲಿ ಸಮೂಹದ ವಾರ್ಷಿಕ ವಹಿವಾಟು ಮುಂದಿನ ಐದರಿಂದ ಏಳು ವರ್ಷಗಳಲ್ಲಿ ₹ 1 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಯೋಗ ಗುರು ಬಾಬಾ ರಾಮದೇವ್ ಹೇಳಿದ್ದಾರೆ. ಅಲ್ಲದೆ, ಸಮೂಹದ ನಾಲ್ಕು ಕಂಪನಿಗಳು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲಿವೆ ಎಂದೂ ಅವರು ತಿಳಿಸಿದ್ದಾರೆ.

ಮುಂಬರುವ ವರ್ಷಗಳಲ್ಲಿ ಪತಂಜಲಿ ಸಮೂಹವು ಐದು ಲಕ್ಷ ಜನರಿಗೆ ಉದ್ಯೋಗ ನೀಡಲಿದೆ ಎಂದು ಅವರು ತಿಳಿಸಿದ್ದಾರೆ. ಪತಂಜಲಿ ಸಮೂಹದ ಈಗಿನ ವಾರ್ಷಿಕ ವಹಿವಾಟು ಅಂದಾಜು ₹ 40 ಸಾವಿರ ಕೋಟಿ ಇದೆ.

ಸಮೂಹದ ಪತಂಜಲಿ ಫುಡ್ಸ್ (ಈ ಮೊದಲು ರುಚಿ ಸೋಯಾ) ಈಗಾಗಲೇ ಷೇರುಪೇಟೆಯಲ್ಲಿ ನೋಂದಾಯಿತ ಆಗಿದೆ. ಅದರ ಮಾರುಕಟ್ಟೆ ಬಂಡವಾಳ ಮೌಲ್ಯವು ಅಂದಾಜು ₹ 50 ಸಾವಿರ ಕೋಟಿ.

ಪತಂಜಲಿ ಆಯುರ್ವೇದ, ಪತಂಜಲಿ ಮೆಡಿಸಿನ್, ಪತಂಜಲಿ ಲೈಫ್‌ಸ್ಟೈಲ್ ಮತ್ತು ಪತಂಜಲಿ ವೆಲ್ನೆಸ್ ಕಂಪನಿಗಳು ಮುಂಬರುವ ದಿನಗಳಲ್ಲಿ ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲಿವೆ. ‘ಪತಂಜಲಿ ಬ್ರ್ಯಾಂಡ್‌ಗೆ ಇರುವ ಹೆಸರು ಹಾಳುಮಾಡಲು ಕೆಲವು ಧಾರ್ಮಿಕ, ರಾಜಕೀಯ ಗುಂಪುಗಳು, ಔಷಧ ವಲಯ ಹಾಗೂ ಎಂಎನ್‌ಸಿ ಮಾಫಿಯಾಗಳು ಯತ್ನಿಸುತ್ತಿವೆ’ ಎಂದು ರಾಮದೇವ್ ದೂರಿದ್ದಾರೆ.

ಕೆನರಾ ಬ್ಯಾಂಕ್‌ಗೆ ಪ್ರಶಸ್ತಿ

ಬೆಂಗಳೂರು: 2021–22ನೇ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ‘ಈಸ್ 4.0 ಸುಧಾರಣಾ ಸೂಚ್ಯಂಕ’ದ ಅಡಿಯಲ್ಲಿ ಅತ್ಯುತ್ತಮ ಸಾಧನೆಗಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಶಸ್ತಿ ಪ್ರದಾನ ಮಾಡಿದ್ದು, ಕೆನರಾ ಬ್ಯಾಂಕ್‌ಗೆ ಮೂರನೆಯ ಪ್ರಶಸ್ತಿ ದೊರೆತಿದೆ.

ಇದಲ್ಲದೆ, ವಿವೇಕಯುತ ಬ್ಯಾಂಕಿಂಗ್‌ನ ಸಾಂಸ್ಥೀಕರಣ ವಿಭಾಗದಲ್ಲಿ ಕೆನರಾ ಬ್ಯಾಂಕ್‌ಗೆ ಮೊದಲ ಸ್ಥಾನ ದೊರೆತಿದೆ ಎಂದು ಪ್ರಕಟಣೆ ತಿಳಿಸಿದೆ. ಬ್ಯಾಂಕ್‌ನ ಸಿಇಒ ಎಲ್.ವಿ. ಪ್ರಭಾಕರ್ ಪ್ರಶಸ್ತಿಯನ್ನು ಸ್ವೀಕರಿಸಿದರು.

ಪೇಮೆಂಟ್ ಗೇಟ್‌ವೇ ಖಾತೆಗಳಲ್ಲಿದ್ದ ಹಣ ಜಪ್ತಿ

ನವದೆಹಲಿ (ಪಿಟಿಐ): ಈಸ್‌ಬಜ್, ರೇಜರ್‌ಪೇ, ಕ್ಯಾಶ್‌ಫ್ರೀ ಮತ್ತು ಪೇಟಿಎಂ ಕಂಪನಿಗಳ ಆನ್‌ಲೈನ್ ಪಾವತಿ ಖಾತೆಯಲ್ಲಿನ ಒಟ್ಟು ₹ 46.67 ಕೋಟಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದೆ.

ಚೀನಾ ಮೂಲದ ವ್ಯಕ್ತಿಗಳ ನಿಯಂತ್ರಣದಲ್ಲಿ ಇರುವ, ಆ್ಯಪ್ ಮೂಲಕ ತಕ್ಷಣಕ್ಕೆ ಸಾಲ ನೀಡುವ ಕಂಪನಿಗಳ ವ್ಯವಹಾರಗಳಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪದ ಅಡಿಯಲ್ಲಿ ಇ.ಡಿ. ಈಚೆಗೆ ರೇಜರ್‌ಪೇ, ಪೇಟಿಎಂ ಮತ್ತು ಕ್ಯಾಶ್‌ಫ್ರೀ ಕಂಪನಿಗಳಿಗೆ ಸೇರಿದ ಬೆಂಗಳೂರಿನಲ್ಲಿನ ಸ್ಥಳಗಳಲ್ಲಿ ಈಚೆಗೆ ದಾಳಿ ನಡೆಸಿತ್ತು.

ಬುಧವಾರದಿಂದ ದೆಹಲಿ, ಮುಂಬೈ, ಗಾಜಿಯಾಬಾದ್, ಲಖನೌ ಮತ್ತು ಗಯಾದಲ್ಲಿನ ಕೆಲವು ಸ್ಥಳಗಳಲ್ಲಿ ಶೋಧ ನಡೆದಿತ್ತು. ಬ್ಯಾಂಕ್ ಹಾಗೂ ಪೇಮೆಂಟ್ ಗೇಟ್‌ವೇಗಳಿಗೆ ಸೇರಿದ 16 ಸ್ಥಳಗಳಲ್ಲಿ ಕೂಡ ಶೋಧ ನಡೆದಿತ್ತು.

‘ಶೋಧ ವೇಳೆ ಹಲವು ಮಹತ್ವದ ದಾಖಲೆಗಳು ದೊರೆತಿವೆ. ವರ್ಚುವಲ್ ಖಾತೆಗಳಲ್ಲಿ ದೊಡ್ಡ ಮೊತ್ತ ಇರುವುದು ಪತ್ತೆಯಾಗಿದೆ. ಈಸ್‌ಬಜ್ ಬಳಿ ₹ 33.36 ಕೋಟಿ, ರೇಜರ್‌ಪೇ ಬಳಿ ₹ 8.21 ಕೋಟಿ, ಕ್ಯಾಶ್‌ಫ್ರೀ ಬಳಿ ₹ 1.28 ಕೋಟಿ ಹಾಗೂ ಪೇಟಿಎಂ ಬಳಿ ₹ 1.11 ಕೋಟಿ ಪತ್ತೆಯಾಗಿದೆ’ ಎಂದು ಇ.ಡಿ. ಹೇಳಿದೆ.

ಇ.ಡಿ. ಕಾರ್ಯಾಚರಣೆಗೆ ಸಹಕಾರ ನೀಡುತ್ತಿರುವುದಾಗಿ ರೇಜರ್‌ಪೇ ವಕ್ತಾರರು ಹೇಳಿದ್ದಾರೆ. ‘ಜಪ್ತು ಮಾಡಲಾದ ಹಣವು ಕಂಪನಿಗೆ ಸೇರಿದ್ದಲ್ಲ’ ಎಂದು ಪೇಟಿಎಂ ಹೇಳಿದೆ. ಅಕ್ರಮ ವಹಿವಾಟು ನಡೆಸಿದ, ಅನುಮಾನಾಸ್ಪದವಾಗಿ ಕಂಡುಬಂದ ಎಲ್ಲ ಕಂಪನಿಗಳನ್ನು ಕಪ್ಪುಪಟ್ಟಿಗೆ ಸೇರಿಸಿ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿರುವುದಾಗಿ ರೇಜರ್‌ಪೇ ಹೇಳಿದೆ. ಜಪ್ತು ಮಾಡಲಾದ ಹಣವು ತನಗೆ ಸೇರಿದ್ದಲ್ಲ ಎಂದೂ ಅದು ತಿಳಿಸಿದೆ.

‘ಇ.ಡಿ. ಹೇಳಿಕೆಯಲ್ಲಿರುವ ಹೆಸರುಗಳು ನಮ್ಮ ವರ್ತಕರಿಗೆ ಸೇರಿದ್ದಲ್ಲ’ ಎಂದು ಈಸ್‌ಬಜ್ ಹೇಳಿದೆ.

ಎಂಎಸ್‌ಎಂಇ ಬಾಕಿ ಪಾವತಿಗೆ ನಿರ್ಮಲಾ ಸೂಚನೆ

ಮುಂಬೈ (ಪಿಟಿಐ): ಖಾಸಗಿ ವಲಯದ ಕಂಪನಿಗಳು ಸಣ್ಣ ಉದ್ದಿಮೆಗಳಿಗೆ ಬಾಕಿ ಇರಿಸಿಕೊಂಡಿರುವ ಮೊತ್ತವನ್ನು 45 ದಿನಗಳ ಒಳಗೆ ಪಾವತಿ ಮಾಡಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸಣ್ಣ ಉದ್ದಿಮೆಗಳಿಗೆ ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ಉದ್ದಿಮೆಗಳು ಕೂಡ ಸಮಯಕ್ಕೆ ಸರಿಯಾಗಿ ಹಣ ಪಾವತಿ ಮಾಡುತ್ತಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ಉದ್ದಿಮೆಗಳ ಕಡೆಯಿಂದ ಬಾಕಿ ಇರುವ ಮೊತ್ತವನ್ನು 90 ದಿನಗಳಲ್ಲಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

16–9–2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	1120 (1125)
ಪಾಮ್ ವಾರದ ಡೆಲಿವರಿ	928 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,100 (49,650)
ಬೆಳ್ಳಿ ಕೆ.ಜಿ 55,200 (56,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಹೊಸನಗರ	
ಬಿಳಿಗೋಟು	26629-26629
ಚಾಲಿ	38500-39000
ಕೆಂಪುಗೋಟು	34899-39109
ರಾಶಿ	48499-52600
ಕುಮಟ	
ಚಿಪ್ಪು	29509-33999
ಕೋಕ	19099-33899
ಹಳೆಚಾಲಿ	42001-45039
ಹೊಸಚಾಲಿ	39089-43099
ಪುತ್ತೂರು	
ಹೊಸತು	34500-47500
ಶಿವಮೊಗ್ಗ	
ಗೊರಬಲು	31199-39600
ರಾಶಿ	46539-52399
ಸಿದ್ದಾಪುರ	
ಬಿಳಿಗೋಟು	30199-34579
ಚಾಲಿ	39109-43309
ಕೋಕ	27009-36579
ಕೆಂಪುಗೋಟು	31319-35699
ರಾಶಿ	49219-51599
ತಟ್ಟಿಬೆಟ್ಟೆ	42109-50869
ಶಿರಸಿ	
ಬೆಟ್ಟೆ	40699-49681
ಬಿಳಿಗೋಟು	27019-38313
ಚಾಲಿ	39099-44522
ಕೆಂಪುಗೋಟು	31699-38099
ರಾಶಿ	44609-52909
ಯಲ್ಲಾಪುರ	
ಬಿಳಿಗೋಟು	29122-35618
ಚಾಲಿ	38122-43699
ಕೋಕ	18200-30811
ಕೆಂಪುಗೋಟು	26869-37169
ರಾಶಿ	49172-54888
ತಟ್ಟಿಬೆಟ್ಟೆ	38819-47919

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15700	15900	216.40 ಸೆಂಟ್ಸ್
ಎಸಿ	9100	8400	8750	
ಆರ್‌ಪಿ	9900	9800	9800	ಲಂಡನ್
ಆರ್‌ಸಿ	4800	4500	4725	2226 ಡಾಲರ್ಸ್



ಭಾರತ ಎ–ನ್ಯೂಜಿಲೆಂಡ್ ಎ ಟೆಸ್ಟ್: ಚಾಪಮನ್–ಸೀನ್ ಶತಕದ ಜೊತೆಯಾಟ

ಸೌರಭ್ ಮೋಡಿಗೆ ಒಲಿದ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಪಿನ್ ಜೋಡಿ’ ಸೌರಭ್ ಕುಮಾರ್ ಹಾಗೂ ರಾಹುಲ್ ಚಾಹರ್ ಮಾಡಿದ ಮೋಡಿಯಿಂದಾಗಿ ಭಾರತ ಎ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನ್ಯೂಜಿಲೆಂಡ್ ಎ ವಿರುದ್ಧದ ‘ಟೆಸ್ಟ್’ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಒಟ್ಟು 11 ವಿಕೆಟ್‌ಗಳು ಪತನವಾದ ಎರಡನೇ ದಿನದಾಟದಲ್ಲಿ ನ್ಯೂಜಿಲೆಂಡ್ ಎ ತಂಡವು 71.2 ಓವರ್‌ಗಳಲ್ಲಿ 237 ರನ್ ಗಳಿಸಿತು. ಪ್ರಥಮ ಇನಿಂಗ್ಸ್‌ನಲ್ಲಿ 56 ರನ್‌ಗಳ ಹಿನ್ನಡೆ ಅನುಭವಿಸಿತು. ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ (48ಕ್ಕೆ4) ಹಾಗೂ ರಾಹುಲ್ (53ಕ್ಕೆ3) ಎದುರಾಳಿ ತಂಡದ ಪತನಕ್ಕೆ ಕಾರಣರಾದರು. ಪ್ರವಾಸಿ ಬಳಗವು 99 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಮಾರ್ಕ್ ಚಾಪಮನ್ (92; 115ಎ, 4X8, 6X2) ಮತ್ತು ಸೀನ್ ಸೋಲಿಯಾ (54; 111ಎ, 4X7) ಐದನೇ ವಿಕೆಟ್ ಜೊತೆಯಾಟದಲ್ಲಿ 114 ರನ್ ಸೇರಿಸಿದರು. ಇದರಿಂದಾಗಿ ತಂಡ ಅಲ್ಪಮೊತ್ತಕ್ಕೆ ಕುಸಿಯುವುದು ತಪ್ಪಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಭಾರತವು ಶುಕ್ರವಾರ ದಿನದಾಟದ ಕೊನೆಗೆ 11 ಓವರ್‌ಗಳಲ್ಲಿ 1 ವಿಕೆಟ್‌ಗೆ 40 ರನ್ ಗಳಿಸಿದೆ. ಆರಂಭಿಕ ಪ್ರಿಯಾಂಕ್ ಪಾಂಚಾಲ್ (ಬ್ಯಾಟಿಂಗ್ 17) ಹಾಗೂ ಋತುರಾಜ್ ಗಾಯಕವಾಡ (ಬ್ಯಾಟಿಂಗ್ 18) ಕ್ರೀಸ್‌ನಲ್ಲಿದ್ದಾರೆ. ಪಂದ್ಯದ ಮೊದಲ ದಿನವಾದ ಗುರುವಾರ ಆತಿಥೇಯ ತಂಡವು ಋತುರಾಜ್ ಗಳಿಸಿದ ಶತಕದ ಬಲದಿಂದ ಭಾರತ ಎ ತಂಡವು 293 ರನ್ ಗಳಿಸಿತ್ತು.

ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿಯಿವೆ. ಸರಣಿಯ ಮೊದಲ ಎರಡೂ ಪಂದ್ಯಗಳು ಡ್ರಾ ಆಗಿವೆ. ಈ ಪಂದ್ಯದಲ್ಲಿ ಜಯಿಸಿದವರಿಗೆ ಸರಣಿ ಒಲಿಯಲಿದೆ. ಪ್ರಿಯಾಂಕ್ ಪಾಂಚಾಲ್ ಬಳಗಕ್ಕೆ ಜಯದ ಅವಕಾಶ ಹೆಚ್ಚಿದೆ. 96 ರನ್‌ಗಳ ಮುನ್ನಡೆಯಲಿದೆ. 300 ರಿಂದ 325 ರನ್‌ಗಳ ಗುರಿಯನ್ನು ಎದುರಾಳಿ ತಂಡಕ್ಕೆ ನೀಡುವ ನಿರೀಕ್ಷೆ ಇದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 86.4 293. ನ್ಯೂಜಿಲೆಂಡ್ ಎ: 71.2 ಓವರ್‌ಗಳಲ್ಲಿ 237 (ಡೇನ್ ಕ್ಲೀವರ್ 34, ಮಾರ್ಕ್ ಚಾಪಮನ್ 92, ಸೀನ್ ಸೋಲಿಯಾ 54, ಮುಕೇಶ್ ಕುಮಾರ್ 48ಕ್ಕೆ2, ಸೌರಭ್ ಕುಮಾರ್ 48ಕ್ಕೆ4, ರಾಹುಲ್ ಚಾಹರ್ 53ಕ್ಕೆ3).



ಭಾರತ ಎ ತಂಡದ ಸೌರಭ್ ಕುಮಾರ್ –ಪ್ರಜಾವಾಣಿ ಚಿತ್ರ/ಎಸ್‌ಕೆ. ದಿನೇಶ್

ಸಂಜು ಸ್ಯಾಮ್ಸನ್‌ಗೆ ನಾಯಕತ್ವ

ನವದೆಹಲಿ (ಪಿಟಿಐ): ಕೇರಳದ ವಿಕೆಟ್‌ಕೀಪರ್ –ಬ್ಯಾಟರ್ ಸಂಜು ಸ್ಯಾಮ್ಸನ್, ನ್ಯೂಜಿಲೆಂಡ್ ಎ ಎದುರು ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ಎ ತಂಡದ ನಾಯಕತ್ವ ವಹಿಸಲಿದ್ದಾರೆ.

ಚೆನ್ನೈನಲ್ಲಿ ಇದೇ 22ರಿಂದ ಮೂರು ಏಕದಿನ ಪಂದ್ಯಗಳು ನಡೆಯಲಿವೆ. ಯುವ ಆಲ್‌ರೌಂಡರ್ ರಾಜ್ ಅಂಗದ್ ಬಾವಾ ಅವರಿಗೂ ತಂಡದಲ್ಲ ಅವಕಾಶ ನೀಡಲಾಗಿದೆ. ಭಾರತ ಟೆಸ್ಟ್ ತಂಡದ ಆಟಗಾರ ಪೃಥ್ವಿ ಶಾ, ಕಾಶ್ಮೀರದ ವೇಗಿ ಉಮ್ರಾನ್ ಮಲಿಕ್ ಅವರೂ ತಂಡದಲ್ಲಿದ್ದಾರೆ.

ತಂಡ: ಸಂಜು ಸ್ಯಾಮ್ಸನ್ (ನಾಯಕ), ಪೃಥ್ವಿ ಶಾ, ಅಭಿಮನ್ಯು ಈಶ್ವರನ್, ಋತುರಾಜ್ ಗಾಯಕವಾಡ, ರಾಹುಲ್ ತ್ರಿಪಾಠಿ, ರಜತ್ ಪಾಟೀದಾರ್, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಕುಲದೀಪ್ ಯಾದವ್, ಶಾಬಾಜ್ ಅಹಮದ್, ರಾಹುಲ್ ಚಾಹರ್, ತಿಲಕ್ ವರ್ಮಾ, ಕುಲದೀಪ್ ಸೇನ್, ಶಾರ್ದೂಲ್ ಠಾಕೂರ್, ಉಮ್ರಾನ್ ಮಲಿಕ್, ನವದೀಪ್ ಸೈನಿ, ರಾಜ್ ಅಂಗದ್ ಬಾವಾ

ಟಿ20 ಕ್ರಿಕೆಟ್: ಸರಣಿ ಜಯಿಸಿದ ಇಂಗ್ಲೆಂಡ್

ಬ್ರಿಸ್ಟಲ್ (ಪಿಟಿಐ): ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಭಾರತ ಮಹಿಳಾ ತಂಡಕ್ಕೆ ಇಂಗ್ಲೆಂಡ್ ಎದುರಿನ ಮೂರನೇ ಹಾಗೂ ಕೊನೆಯ ಟಿ20 ಪಂದ್ಯದಲ್ಲಿ ಸೋಲು ಎದುರಾಯಿತು.

ಬ್ರಿಸ್ಟಲ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ 7 ವಿಕೆಟ್‌ಗಳ ಜಯ ಸಾಧಿಸಿದ ಇಂಗ್ಲೆಂಡ್, ಸರಣಿಯನ್ನು 2–1 ರಲ್ಲಿ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಹರ್ಮನ್‌ಪ್ರೀತ್ ಕೌರ್ ಬಳಗ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 122 ರನ್ ಗಳಿಸಿದರೆ, ಆತಿಥೇಯ ತಂಡ 18.2 ಓವರ್‌ಗಳಲ್ಲಿ 3 ವಿಕೆಟ್‌ಗೆ 126 ರನ್ ಗಳಿಸಿ ಜಯ ಸಾಧಿಸಿತು.

ಸೋಫಿಯಾ ಡಂಕ್ಲಿ (49 ರನ್, 44ಎ) ಮತ್ತು ಅಲೈಸ್ ಕ್ಯಾಪ್ಸಿ (ಔಟಾಗದೆ 38, 24 ಎ) ಅವರು ಉತ್ತಮ ಆಟದ ಮೂಲಕ ಇಂಗ್ಲೆಂಡ್ ಗೆಲುವಿಗೆ ಕಾರಣರಾದರು.

ಸಾಧಾರಣ ಗುರಿ ಬೆನ್ನಟ್ಟಿದ ಇಂಗ್ಲೆಂಡ್‌ಗೆ ಡಂಕ್ಲಿ ಮತ್ತು ಡ್ಯಾನಿ ವ್ಯಟ್ (22) ಮೊದಲ ವಿಕೆಟ್‌ಗೆ 70 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಆ ಬಳಿಕ ಕ್ಯಾಪ್ಸಿ ಬಿರುಸಿನ ಆಟವಾಡಿದರು.

ಸೋಫಿ ಎಕ್ಲೆಸ್ಟೋನ್ (25ಕ್ಕೆ 3) ಮತ್ತು ಸಾರಾ ಗ್ಲೆನ್ (11ಕ್ಕೆ 2) ಅವರ ಸ್ಪಿನ್ ದಾಳಿಯನ್ನು ಎದುರಿಸಲು ವಿಫಲರಾದರು.

35 ರನ್ ಆಗುವಷ್ಟರಲ್ಲಿ 5 ವಿಕೆಟ್‌ಗಳು ಉರುಳಿದ್ದವು.

ದೀಪ್ತಿ ಶರ್ಮ (24 ರನ್, 25 ಎ) ಹಾಗೂ ಕೊನೆಯಲ್ಲಿ ರಿಚಾ ಘೋಷ್ (33 ರನ್, 22 ಎ) ಅವರು ಅಲ್ಪ ಪ್ರತಿರೋಧ ಒಡ್ಡಿದ್ದರಿಂದ ತಂಡದ ಮೊತ್ತ 100ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 122 (ದೀಪ್ತಿ ಶರ್ಮ 24, ರಿಚಾ ಘೋಷ್ 33, ಪೂಜಾ ವಸ್ತ್ರಕರ್ ಔಟಾಗದೆ 19, ಸೋಫಿ ಎಕ್ಲೆಸ್ಟೋನ್ 25ಕ್ಕೆ 3, ಸಾರಾ ಗ್ಲೆನ್ 11ಕ್ಕೆ 2). ಇಂಗ್ಲೆಂಡ್ 18.2 ಓವರ್‌ಗಳಲ್ಲಿ 3 ವಿಕೆಟ್‌ಗೆ 126 (ಸೋಫಿಯಾ ಡಂಕ್ಲಿ 49, ಡ್ಯಾನಿ ವ್ಯಟ್ 22, ಅಲೈಸ್ ಕ್ಯಾಪ್ಸಿ ಔಟಾಗದೆ 38, ರಾಧಾ ಯಾದವ್ 14ಕ್ಕೆ 1) ಫಲಿತಾಂಶ: ಇಂಗ್ಲೆಂಡ್‌ಗೆ 7 ವಿಕೆಟ್ ಗೆಲುವು

ಕುಸ್ತಿ: ಸ್ಪರ್ಧೆಯಿಂದ ರವಿ ಔಟ್

ಬೆಲ್‌ಗ್ರೇಡ್, ಸರ್ಬಿಯಾ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಕುಸ್ತಿಪಟು, ಭಾರತದ ರವಿ ದಹಿಯಾ, ವಿಶ್ವ ಚಾಂಪಿ ಯನ್ ಷಿಪ್ ಪದಕದ ರೇಸ್‌ನಿಂದ ಹೊರಬಿದ್ದಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 57 ಕೆಜಿ ವಿಭಾಗದ ಅರ್ಹತಾ ಬೌಟ್‌ನಲ್ಲಿ ಶುಕ್ರವಾರ ರವಿ 0–10ರಿಂದ (ತಾಂತ್ರಿಕ ಶ್ರೇಷ್ಠತೆ) ಉಜ್ಬೆಕಿಸ್ತಾನದ ಗುಲೊಮ್‌ಜಾನ್ ಅಬ್ದುಲ್ಲಾಯೆವ್ ಎದುರು ಸೋತರು. ಮುಂದಿನ ಬೌಟ್‌ನಲ್ಲಿ ಅಬ್ದುಲ್ಲಾಯೆವ್ ಸೋತಿದ್ದರಿಂದ, ರವಿ ಅವರಿಗೆ ರಿಪೆಚ್ ಸುತ್ತಿನಲ್ಲೂ ಆಡುವ ಅವಕಾಶ ಸಿಗಲಿಲ್ಲ.

ಹಿಂದಿನ ಕೆಲವು ಬೌಟ್‌ಗಳಲ್ಲೂ ಅಬ್ದುಲ್ಲಾಯೆವ್‌ಗೆ ರವಿ ಸೋತಿದ್ದರು.

70 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿರುವ ಭಾರತದ ನವೀನ್ ಮೊದಲ ಸುತ್ತಿನಲ್ಲಿ 11–3ರಿಂದ ಉಜ್ಬೆಕಿಸ್ತಾನದ ಸೈರ್ಬಾಜ್ ತಲ್ಗಟ್ ಅವರಿಗೆ ಆಘಾತ ನೀಡಿದರು. ಮುಂದಿನ ಸುತ್ತಿನಲ್ಲಿ ಅವರಿಗೆ ಉಜ್ಬೆಕಿಸ್ತಾನದ ಇಲ್ಯಾಸ್ ಬೆಕ್‌ಬುಲತೊವ್ ಎದುರಾಳಿಯಾಗಿದ್ದರು. ಆದರೆ ಗಾಯದ ಕಾರಣ ಇಲ್ಯಾಸ್ ಹಿಂದೆ ಸರಿದ ಕಾರಣ ನವೀನ್ ಅವರಿಗೆ ಕಂಚಿನ ಪದಕದ ಬೌಟ್‌ಗೆ ನೇರ ಅರ್ಹತೆ ಸಿಕ್ಕಿತು.



ಶೂಟಿಂಗ್ ರೇಂಜ್‌ಗೆ ಚಾಲನೆ ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಡಿಜಿಎಂ ಟಿ.ವಿ. ಸ್ವಾಮಿನಾಥನ್, ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್‌.ಕೆ.ಉಮೇಶ್, ಪ್ರವೀಣ್ ರಂಕಾ, ಎಫ್‌ಐಎಂ ಬಾಜಾ ರ್‍ಯಾಲಿ ವಿಶ್ವಕಪ್ ವಿಜೇತೆ ಐಶ್ವರ್ಯ ಪಿಸೆ, ನಿವೃತ್ತ ಪ್ರೌಢಶಾಲಾ ನಿವೃತ್ತ ಶಿಕ್ಷಕಿ ಜಿ. ಗಾಯಿತ್ರಮ್ಮ, ಕೋಚ್ ರಮೇಶ್ ರಾವ್ ಜೋಡಿಗೆ, ಸಂತೋಷ್ ಬಿ.ಎನ್, ಎಸ್‌.ಕೆ. ಮೂರ್ತಿ, ರಾಜ್ಯ ರೈಫಲ್ ಸಂಸ್ಥೆಯ ಜಂಟಿ ಕಾರ್ಯದರ್ಶಿ ಸಿ. ಪುರುಷೋತ್ತಮ್ ಭಾಗವಹಿಸಿದ್ದರು.

ಬೆಂಗಳೂರು: ಶೂಟಿಂಗ್ ರೇಂಜ್ ಆರಂಭ

ಬೆಂಗಳೂರು: ಇಲ್ಲಿಯ ಗೋಲ್ಡನ್ ಏಸ್ ಶೂಟಿಂಗ್ ಅಕಾಡೆಮಿಯಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ 10 ಮೀ. ಏರ್ ರೈಫಲ್ ಮತ್ತು ಏರ್ ಪಿಸ್ತೂಲ್ ಶೂಟಿಂಗ್ ರೇಂಜ್ ಉದ್ಘಾಟಿಸಲಾಯಿತು. ಜೆಪಿ ನಗರದ ಒಂದನೇ ಹಂತದಲ್ಲಿರುವ ಶೂಟಿಂಗ್ ಅಕಾಡೆಮಿಯ ಆರನೇ ವಾರ್ಷಿಕೋತ್ಸವವನ್ನು ಇದೇ ವೇಳೆ ಆಚರಿಸಲಾಯಿತು.

ದುಲೀಪ್ ಟ್ರೋಫಿ: ರಿಕಿ ಶತಕ

ಸೇಲಂ, ತಮಿಳುನಾಡು (ಪಿಟಿಐ): ರಿಕಿ ಭುಯಿ (ಅಜೇಯ 103) ಅವರ ಶತಕದ ನೆರವಿನಿಂದ ದಕ್ಷಿಣ ವಲಯ ತಂಡ, ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಉತ್ತರ ವಲಯ ವಿರುದ್ಧ ಬೃಹತ್ ಮೊತ್ತ ಪೇರಿಸಿದೆ.



ರಿಕಿ ಭುಯಿ

ಸೇಲಂನಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರ ವಾರ ದಕ್ಷಿಣ ವಲಯ 8 ವಿಕೆಟ್‌ಗೆ 630 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ರೋಹನ್ ಕುನ್ನುಮಲ್ ಮತ್ತು ಹನುಮ ವಿಹಾರಿ ಅವರು ಮೊದಲ ದಿನದಾಟದಲ್ಲಿ ಶತಕ ಗಳಿಸಿದ್ದರೆ, ರಿಕಿ ಅವರು ಶುಕ್ರವಾರ ಎದುರಾಳಿ ಬೌಲರ್‌ಗಳನ್ನು ಕಾಡಿದರು. 107 ರನ್‌ಗಳಿಸಿ ಔಟಾಗದೆ ಉಳಿದಿದ್ದ ವಿಹಾರಿ 134 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ದಿನದಾಟದ ಅಂತ್ಯಕ್ಕೆ ಉತ್ತರ ವಲಯ ವಿಕೆಟ್ ನಷ್ಟವಿಲ್ಲದೆ 19 ರನ್ ಗಳಿಸಿತ್ತು.

ಪಶ್ಚಿಮ ವಲಯಕ್ಕೆ ಮುನ್ನಡೆ: ಕೊಯಮತ್ತೂರಿನಲ್ಲಿ ನಡೆಯುತ್ತಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ಪಶ್ಚಿಮ ವಲಯ ತಂಡ, ಕೇಂದ್ರ ವಲಯ ವಿರುದ್ಧ ಇನಿಂಗ್ಸ್ ಮುನ್ನಡೆ ಪಡೆದಿದೆ.

ಮೊದಲ ದಿನ 9ಕ್ಕೆ 252 ರನ್ ಗಳಿಸಿದ್ದ ಪಶ್ಚಿಮ ವಲಯ 257 ರನ್‌ಗಳಿಗೆ ಆಲೌಟಾಯಿತು. ಆ ಬಳಿಕ ಕೇಂದ್ರ ವಲಯವನ್ನು 128 ರನ್‌ಗಳಿಗೆ ನಿಯಂತ್ರಿಸಿತು. ಜಯದೇವ್ ಉನದ್ಕತ್ (24ಕ್ಕೆ 3) ಮತ್ತು ತನುಷ್ ಕೋಟ್ಯಾನ್ (17ಕ್ಕೆ 3) ಎದುರಾಳಿ ಬ್ಯಾಟರ್‌ಗಳನ್ನು ಕಾಡಿದರು.

ಶುಕ್ರವಾರದ ಆಟದ ಅಂತ್ಯಕ್ಕೆ ಪಶ್ಚಿಮ ವಲಯ ಎರಡನೇ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 130 ರನ್ ಗಳಿಸಿದ್ದು, ಒಟ್ಟು 259 ರನ್‌ಗಳ ಮುನ್ನಡೆಯಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ವಲಯ 172.5 ಓವರ್‌ಗಳಲ್ಲಿ 8 ವಿಕೆಟ್‌ಗೆ 630 ಡಿಕ್ಲೇರ್ಡ್ (ಹನುಮ ವಿಹಾರಿ 134, ರಿಕಿ ಭುಯಿ ಔಟಾಗದೆ 103, ಕೆ.ಗೌತಮ್ 48, ರವಿ ತೇಜ 42, ಮಯಂಕ್ ದಾಗರ್ 184ಕ್ಕೆ 3, ಪುಲಕಿತ್ 121ಕ್ಕೆ 2) ಉತ್ತರ ವಲಯ 5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 19 ರನ್.

ಕೊಯಮತ್ತೂರಿನಲ್ಲಿ ನಡೆದ ಪಂದ್ಯ: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 257. ಕೇಂದ್ರ ವಲಯ: 40.1 ಓವರ್‌ಗಳಲ್ಲಿ 128 (ಕರಣ್ ಶರ್ಮ 34, ಜಯದೇವ್ ಉನದ್ಕತ್ 24ಕ್ಕೆ 3, ತನುಷ್ ಕೋಟ್ಯಾನ್ 17ಕ್ಕೆ 3) ಎರಡನೇ ಇನಿಂಗ್ಸ್: ಪಶ್ಚಿಮ ವಲಯ 29 ಓವರ್‌ಗಳಲ್ಲಿ 3 ವಿಕೆಟ್‌ಗೆ 130 (ಪೃಥ್ವಿ ಶಾ ಬ್ಯಾಟಿಂಗ್ 104).

ಮೈದಾನಕ್ಕೆ ಬಂದ ಆಂಬುಲೆನ್ಸ್

ಕೊಯಮತ್ತೂರಿನಲ್ಲಿ ನಡೆದ ಪಂದ್ಯದ ಎರಡನೇ ದಿನದಾಟದಲ್ಲಿ ಪಶ್ಚಿಮ ವಲಯ ತಂಡದ ಬೌಲರ್ ಚಿಂತನ್ ಗಜ ಅವರು ಥ್ರೋ ಮಾಡಿದ ಚೆಂಡು ತಲೆಗೆ ಬಡಿದು, ಕೇಂದ್ರ ವಲಯದ ವೆಂಕಟೇಶ್ ಅಯ್ಯರ್ ಅವರು ನೆಲಕ್ಕುರುಳಿದರು.

ಅವರನ್ನು ಅಂಗಳದಿಂದ ಕರೆದೊಯ್ಯಲು ಆಂಬುಲೆನ್ಸ್‌ಅನ್ನು ಮೈದಾನದ ಮಧ್ಯಕ್ಕೆ ತರಲಾಯಿತು. ಆದರೆ ಅಲ್ಪ ಚೇತರಿಸಿಕೊಂಡ ಅಯ್ಯರ್, ನಡೆದುಕೊಂಡೇ ಅಂಗಳದಿಂದ ಹೊರಬಂದರು. ಅವರು ಮತ್ತೆ ಬ್ಯಾಟ್ ಮಾಡಲು ಬಂದರಾದರೂ 14 ರನ್ ಗಳಿಸಿ ಔಟಾದರು.

ಐಪಿಎಲ್: ಪಂಜಾಬ್‌ಗೆ ಬೇಲಿಸ್, ಮುಂಬೈಗೆ ಬೌಚರ್ ಕೋಚ್

ಮೊಹಾಲಿ/ ಮುಂಬೈ (ಪಿಟಿಐ): ಐಪಿಎಲ್ ತಂಡಗಳಾದ ಪಂಜಾಬ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ಕ್ರಮವಾಗಿ ಟ್ರೆವರ್ ಬೇಲಿಸ್ ಹಾಗೂ ಮಾರ್ಕ್ ಬೌಚರ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ.



ಟ್ರೆವರ್ ಬೇಲಿಸ್



ಬೌಚರ್

ಪಂಜಾಬ್ ಕಿಂಗ್ಸ್ ತಂಡದ ಮುಖ್ಯ ಕೋಚ್ ಆಗಿದ್ದ ಅನಿಲ್ ಕುಂಬ್ಳೆ ಅವರ ಅವಧಿ ಕಳೆದ ಋತುವಿನೊಂದಿಗೆ ಕೊನೆಗೊಂಡಿತ್ತು. ಕುಂಬ್ಳೆ ಜತೆಗಿನ ಒಪ್ಪಂದ ಮುಂದುವರಿಸದಿರಲು ಪಂಜಾಬ್ ಫ್ರಾಂಚೈಸ್ ನಿರ್ಧರಿಸಿತ್ತು.

ಇದೀಗ ಅವರ ಜಾಗಕ್ಕೆ ಆಸ್ಟ್ರೇಲಿಯಾದ ಬೇಲಿಸ್ ನೇಮಕ ನಡೆದಿದೆ. ಅವರು ಈ ಹಿಂದೆ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಇವರ ಮಾರ್ಗದರ್ಶನದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡ 2012 ಮತ್ತು 2014 ರಲ್ಲಿ ಚಾಂಪಿಯನ್ ಅಗಿತ್ತು. 2019ರಲ್ಲಿ ಏಕದಿನ ವಿಶ್ವಕಪ್ ಗೆದ್ದ ಇಂಗ್ಲೆಂಡ್ ತಂಡಕ್ಕೂ ಬೇಲಿಸ್ ಕೋಚ್ ಆಗಿದ್ದರು.

ದಕ್ಷಿಣ ಆಫ್ರಿಕಾ ತಂಡದ ಮಾಜಿ ವಿಕೆಟ್‌ಕೀಪರ್ ಬೌಚರ್, ಶ್ರೀಲಂಕಾದ ಮಾಹೇಲ ಜಯವರ್ಧನೆ ಅವರಿಂದ ತೆರವಾದ ಸ್ಥಾನ ತುಂಬಲಿದ್ದಾರೆ. ಮುಖ್ಯ ಕೋಚ್ ಆಗಿದ್ದ ಜಯವರ್ಧನೆ ಅವರನ್ನು ಮುಂಬೈ ಫ್ರಾಂಚೈಸ್ ಇದೀಗ ‘ಗ್ಲೋಬಲ್ ಹೆಡ್’ ಆಗಿ ನೇಮಿಸಿದೆ.

ಟೆನಿಸ್: ರೂಡ್‌ಗೆ ಮಣಿದ ಪ್ರಜ್ಞೇಶ್

ಲಿಲ್ಲೆಹ್ಯಾಮರ್, ನಾರ್ವೆ (ಪಿಟಿಐ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ, ನಾರ್ವೆಯ ಕ್ಯಾಸ್ಪರ್ ರೂಡ್ ಡೇವಿಸ್ ಕಪ್ ಪಂದ್ಯದಲ್ಲಿ ಶುಕ್ರವಾರ ಭಾರತದ ಪ್ರಜ್ಞೇಶ್ ಗುಣೇಶ್ವರನ್ ಅವರನ್ನು ಮಣಿಸಿದರು. ಇದರೊಂದಿಗೆ ನಾರ್ವೆ ತಂಡವು ವಿಶ್ವ ಗುಂಪು1ರ ಪಂದ್ಯದಲ್ಲಿ 1–0ಯಿಂದ ಮುನ್ನಡೆಯಿತು.

ಅಮೆರಿಕ ಓಪನ್ ಟೂರ್ನಿಯಲ್ಲಿ ರನ್ನರ್‌ಅಪ್ ಆಗಿದ್ದ ರೂಡ್, ಪ್ರಜ್ಞೇಶ್ ಎದುರು 6–1, 6–4ರಿಂದ ಗೆದ್ದರು.



ಚೀನಾದ ಚಾಂಗ್ಷಾ ನಗರದ ಗಗನಚುಂಬಿ ಕಟ್ಟಡದಲ್ಲಿ ಶುಕ್ರವಾರ ಅಗ್ನಿ ಅವಘಡ ಸಂಭವಿಸಿದ್ದು, ಸಾವು–ನೋವಿನ ಬಗ್ಗೆ ವರದಿಯಾಗಿಲ್ಲ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ರಾಣಿ ಅಂತಿಮ ದರ್ಶನ: ಚೀನಾ ನಿಯೋಗಕ್ಕೆ ಅನುಮತಿ ನಿರಾಕರಣೆ

ಲಂಡನ್ (ಪಿಟಿಐ): ಇದೇ 19ರಂದು ಲಂಡನ್‌ನ ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲಿ ನಡೆಯಲಿರುವ ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಅವರ ಅಂತ್ಯಕ್ರಿಯೆಗೂ ಮುನ್ನ ಸಂಸತ್ತಿನ ಸಂಕೀರ್ಣದೊಳಗೆ ರಾಣಿಗೆ ಅಂತಿಮ ನಮನ ವಿಧಿಯಲ್ಲಿ ಪಾಲ್ಗೊಳ್ಳಲು ಚೀನಾದ ಉನ್ನತ ಮಟ್ಟದ ನಿಯೋಗಕ್ಕೆ ಬ್ರಿಟನ್ ಅನುಮತಿ ನಿರಾಕರಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

ಕ್ಸಿನ್‌ಜಿಯಾಂಗ್‌ನಲ್ಲಿರುವ ಉಯಿಘರ್ ಮುಸ್ಲಿಮರನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ ಎಂಬುದಾಗಿ ಆರೋಪಿಸಿದ್ದ ಬ್ರಿಟನ್‌ನ ಐವರು ಸಂಸದರ ಮೇಲೆ ಚೀನಾ ನಿರ್ಬಂಧ ಹೇರಿತ್ತು. ಇದೇ ಕಾರಣಕ್ಕಾಗಿ ಹೌಸ್ ಆಫ್ ಕಾಮನ್ಸ್‌ನ ಸ್ಪೀಕರ್ ಸರ್ ಲಿಂಡ್ಸೆ ಹೊಯ್ಲ್ ಅವರು ಚೀನಾದ ನಿಯೋಗಕ್ಕೆ ಅನುಮತಿ ನಿರಾಕರಿಸಿದ್ದಾರೆ ಎನ್ನಲಾಗಿದೆ.

ಭದ್ರತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಹೇಳಿರುವ ಹೌಸ್ ಆಫ್ ಕಾಮನ್ಸ್, ಚೀನಾವು ರಾಣಿಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿದೆ ಎಂದಿದೆ ಎಂಬುದಾಗಿಯೂ ಮಾಧ್ಯಮಗಳು ವರದಿ ಮಾಡಿವೆ. ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರಿಗೆ ಆಹ್ವಾನ ನೀಡಲಾಗಿದೆ..

ಆತ್ಮಾಹುತಿ ಬಾಂಬ್ ದಾಳಿ: ಸಿರಿಸೇನಾ ಮೇಲೆ ಶಂಕೆ

ಕೊಲಂಬೊ (ಪಿಟಿಐ): ಮೂರು ವರ್ಷಗಳ ಹಿಂದೆ ದೇಶದಲ್ಲಿ ಈಸ್ಟರ್ ಹಬ್ಬದ ವೇಳೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ 11 ಭಾರತೀಯರು ಸೇರಿ 270 ಜನರು ಸಾವನ್ನಪ್ಪಿದ ಘಟನೆಯ ಹಿಂದೆ ಮಾಜಿ ಅಧ್ಯಕ್ಷ ಮೈತ್ರಿಪಾಲ ಸಿರಿಸೇನಾ (71) ಅವರ ಪಾತ್ರವಿರುವುದಾಗಿ ಶ್ರೀಲಂಕಾ ನ್ಯಾಯಾಲಯ ಶುಕ್ರವಾರ ಶಂಕೆ ವ್ಯಕ್ತಪಡಿಸಿದೆ.

ತೀರ್ಪು ಪ್ರಕಟಿಸುವಾಗ ಕೊಲಂಬೊ ಬಂದರು ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಸಿರಿಸೇನಾ ಅವರು ಬಾಂಬ್ ದಾಳಿ ಸಂಬಂಧ ಮುಂಚಿತವಾಗಿಯೇ ಲಭಿಸಿದ್ದ ಗುಪ್ತಚರ ವರದಿಗಳನ್ನು ನಿರ್ಲಕ್ಷಿಸಿದ್ದಾರೆ ಎಂದು ಆರೋಪಿಸಿದೆ. ಸಿರಿಸೇನಾ ಅವರು ಅಕ್ಟೋಬರ್ 14ರಂದು ನ್ಯಾಯಾಲಯಕ್ಕೆ ಹಾಜರಾಗಬೇಕಿದೆ.

ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಗ್ರ್ಯಾಂಡ್‌ಮಾಸ್ಟರ್ ಪಟ್ಟ

ಪ್ರಣವ್ ಆನಂದ್‌ಗೆ 'ಡಬಲ್ ಧಮಾಕ'

• ಮಹಮ್ಮದ್ ನೂಮಾನ್



ಪ್ರಣವ್ ಆನಂದ್

ಬೆಂಗಳೂರು: 'ಗ್ರ್ಯಾಂಡ್ ಮಾಸ್ಟರ್ ಪಟ್ಟ ಲಭಿಸಿರುವುದರಿಂದ ಅತೀವ ಸಂತಸವಾಗಿದೆ. ಈ ಕ್ಷಣಕ್ಕಾಗಿ ಬಹಳ ಸಮಯದಿಂದ ಕಾಯುತ್ತಿದ್ದೆ. ಈಗ ನಿರಾಳನಾಗಿದ್ದೇನೆ'

– ಭಾರತದ 76ನೇ ಹಾಗೂ ಕರ್ನಾಟಕದ ನಾಲ್ಕನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡ ಯುವ ಚೆಸ್ ಪ್ರತಿಭೆ ಪ್ರಣವ್ ಆನಂದ್ ಅವರ ಮಾತಿದು.

ಬೆಂಗಳೂರಿನ 15 ವರ್ಷದ ಪ್ರಣವ್‌ಗೆ ಗುರುವಾರ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಲಭಿಸಿತ್ತು. ರೊಮೇನಿಯದಲ್ಲಿ ನಡೆದ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ನ 10ನೇ ಸುತ್ತಿನ ಹಣಾಹಣಿಯ ಬಳಿಕ ಅವರಿಗೆ ಈ ಗೌರವ ಒಲಿದಿತ್ತು. ಜಿಎಂ ಪಟ್ಟಕ್ಕೆ ಅಗತ್ಯವಿದ್ದ 2,500 ಎಲೊ ಪಾಯಿಂಟ್ಸ್ ಗಡಿ ತಲುಪಲು ಯಶಸ್ವಿಯಾಗಿದ್ದರು.

ಈ ಟೂರ್ನಿ ಶುಕ್ರವಾರ ಕೊನೆಗೊಂಡಿದ್ದು, ಪ್ರಣವ್ 11 ಸುತ್ತುಗಳಲ್ಲಿ 9 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಪಡೆದು, ಚಿನ್ನದ ಪದಕ ಗೆದ್ದುಕೊಂಡರು.

ಚೆಸ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಲಭಿಸಬೇಕಾದರೆ, ಮೂರು ಜಿಎಂ ನಾರ್ಮ್‌ಗಳನ್ನು ಪಡೆಯುವ ಜತೆಯಲ್ಲೇ 2,500 ಎಲೊ ಪಾಯಿಂಟ್ಸ್ ಹೊಂದಬೇಕು. ಪ್ರಣವ್, ಸ್ವಿಟ್ಜ್‌ರ್‌ಲೆಂಡ್‌ನಲ್ಲಿ ಜುಲೈನಲ್ಲಿ ನಡೆದಿದ್ದ 55ನೇ ಬಿಯೆಲ್ ಚೆಸ್ ಫೆಸ್ಟಿವಲ್‌ನಲ್ಲಿ ಮೂರನೇ ಹಾಗೂ ಕೊನೆಯ ಜಿಎಂ ನಾರ್ಮ್ ಗಳಿಸಿದ್ದರು.

'ಸ್ಲೊವೇಕಿಯದಲ್ಲಿ ಈಚೆಗೆ ನಡೆದ ಟೂರ್ನಿಯಲ್ಲೇ ಜಿಎಂ ಪಟ್ಟ ಪಡೆಯುವ ಗುರಿ ಇಟ್ಟುಕೊಂಡಿದ್ದೆ. ಆದರೆ ಅಲ್ಲಿ 2,500 ಎಲೊ ಪಾಯಿಂಟ್ಸ್ ಗಡಿ ತಲುಪಲು ಆಗಿರಲಿಲ್ಲ. ನನ್ನ ಕನಸು ಇಲ್ಲಿ ಈಡೇರಿದೆ. ಇಲ್ಲಿ ಚಾಂಪಿಯನ್ ಆಗಿರುವುದು ಸಂತಸ ಇಮ್ಮಡಿಗೊಳಿಸಿದೆ' ಎಂದು ಪ್ರಣವ್, 'ಪ್ರಜಾವಾಣಿ' ಜತೆ ಸಂತಸ ಹಂಚಿಕೊಂಡರು.

ಮುಖ್ಯಾಂಶಗಳು

- ಜಿಎಂ ಪಡೆದ ಕರ್ನಾಟಕದ ಅತ್ಯಂತ ಕಿರಿಯ ಸ್ಪರ್ಧಿ
- 7ನೇ ವಯಸ್ಸಿನಲ್ಲಿ ಚೆಸ್ ಕಲಿಕೆ ಆರಂಭ
- ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗೆದ್ದಿದ್ದರು

'ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡು 2,600 ಎಲೊ ಪಾಯಿಂಟ್ಸ್ ತಲುಪುವುದು ಮುಂದಿನ ಗುರಿ. ಆದರೆ ಅದಕ್ಕೂ ಮುನ್ನ ಕಲಿಕೆಯತ್ತ ಗಮನಹರಿಸಬೇಕಿದೆ' ಎಂದು ಇಲ್ಲಿನ ಸರ್ಜಾಪುರ ರಸ್ತೆಯಲ್ಲಿರುವ ದೆಹಲಿ ಪಬ್ಲಿಕ್ ಸ್ಕೂಲ್‌ನಲ್ಲಿ 10ನೇ ತರಗತಿಯಲ್ಲಿ ರುವ ಅವರು ತಿಳಿಸಿದರು.

ಪ್ರಣವ್ ಅವರ ತಂದೆ ಆನಂದ್ ಅನಂತ ನಾರಾಯಣನ್ ಮತ್ತು ತಾಯಿ ಅಪರ್ಣಾ ರಮೇಶ್‌ಕುಮಾರ್ ತಮಿಳುನಾಡು ಮೂಲದವರು. ಕಳೆದ ಕೆಲವು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

'ಪ್ರಣವ್, ಏಳನೇ ವಯಸ್ಸಿನಿಂದ ಚೆಸ್ ಆಡಲು ಶುರು ಮಾಡಿದ್ದ. ಬೆಂಗಳೂರಿನ ಚೆಸ್ ಶೂಟ್ಸ್ ಅಕಾಡೆಮಿಯಲ್ಲಿ ಜಯರಾಂ ರಾಮಣ್ಣ ಅವರ ಮಾರ್ಗದರ್ಶನದಲ್ಲಿ ಚೆಸ್‌ನ ಕಲೆಗಳನ್ನು ಕರಗತಮಾಡಿಕೊಂಡ. ಈಗ ಚೆನ್ನೈನ ಕೋಚ್ ವಿ.ಸರವಣನ್ ಅವರಿಂದ ತರಬೇತಿ ಪಡೆಯುತ್ತಿದ್ದಾನೆ. ಮಗನ ಸಾಧನೆ ಹೆಮ್ಮೆ ತಂದಿದೆ' ಎಂದು ಆನಂದ್ ಅನಂತ ನಾರಾಯಣನ್ ಪ್ರತಿಕ್ರಿಯಿಸಿದರು.

ಕರ್ನಾಟಕದ ಅತ್ಯಂತ ಕಿರಿಯ ಜಿಎಂ ಎಂಬ ಗೌರವ ಪ್ರಣವ್‌ಗೆ (15 ವರ್ಷ, 10 ತಿಂಗಳು) ಸಂದಿದೆ. ಎಂ.ಎಸ್. ತೇಜಕುಮಾರ್, ಜಿ.ಎ.ಸ್ಟ್ಯಾನಿ ಮತ್ತು ಗಿರೀಶ್ ಕೌಶಿಕ್ ಅವರು ಜಿಎಂ ಪಟ್ಟ ಪಡೆದಿರುವ ಕರ್ನಾಟಕದ ಇತರರು.

ಕರ್ನಾಟಕದ ಅತ್ಯಂತ ಕಿರಿಯ ಇಂಟರ್‌ನ್ಯಾಷನಲ್ ಮಾಸ್ಟರ್ (ಐಎಂ) ಎಂಬ ಗೌರವವೂ ಅವರಿಗೆ ಒಲಿದಿತ್ತು. 14 ವರ್ಷ 3 ತಿಂಗಳು ಆಗಿದ್ದಾಗ ಅವರಿಗೆ ಐಎಂ ಪದವಿ ದೊರೆತಿತ್ತು. 16 ವರ್ಷದೊಳಗಿನ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಣವ್ ಚಿನ್ನ ಗೆದ್ದಿದ್ದರು.

ಚೆಸ್: ಶರಣ್ ಚಾಂಪಿಯನ್

ಪ್ರಜಾವಾಣಿ ವಾರ್ತೆ


ಶರಣ್ ರಾವ್

ಮಂಗಳೂರು: ಮಂಗಳೂರಿನ ಶರಣ್ ರಾವ್ ಅವರು ಇಟಲಿಯಲ್ಲಿ ಗುರುವಾರ ಮುಕ್ತಾಯಗೊಂಡ ಇಂಟರ್‌ನ್ಯಾಷನಲ್ ಡಿ ಸ್ಕಾಚಿ ಫೆಸ್ಟಿವಲ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದಾರೆ.

ಮೊಟೆಸಿಲ್ವಾನೊದ ಗ್ರ್ಯಾಂಡ್ ಹೋಟೆಲ್ ಅಡ್ರಿಯಾಟಿಕೊದಲ್ಲಿ ನಡೆದ ಟೂರ್ನಿಯ ಎಂಟು ಸುತ್ತುಗಳಲ್ಲಿ ಒಟ್ಟು 6.5 ಪಾಯಿಂಟ್ ಕಲೆ ಹಾಕಿರುವ ಫಿಡೆ ಮಾಸ್ಟರ್ ಶರಣ್ ಈ ಗೆಲುವಿನೊಂದಿಗೆ ಇಂಟರ್‌ನ್ಯಾಷನಲ್ ಮಾಸ್ಟರ್ ಪಟ್ಟಕ್ಕೆ ಬೇಕಾದ ಎರಡನೇ ನಾರ್ಮ್ ಗಳಿಸಿದ್ದಾರೆ.

ಅಂತಿಮ ಸುತ್ತಿನಲ್ಲಿ ಶರಣ್, ಸ್ಥಳೀಯ ಆಟಗಾರ ಲೊಯಕಾನೊ ಲಿಯೊನಾರ್ಡೊ ವಿರುದ್ಧ ಗೆದ್ದು ಪೂರ್ಣ ಪಾಯಿಂಟ್ ಕಲೆಹಾಕುವುದರೊಂದಿಗೆ ಪ್ರಶಸ್ತಿಗೆ ಮುತ್ತನ್ನಿತ್ತರು.

ಇಟಲಿಯ ಇಂಟರ್‌ನ್ಯಾಷನಲ್ ಮಾಸ್ಟರ್ ಅಫಯೆವ್ ಮಿರಾಗ 6 ಪಾಯಿಂಟ್ ಗಳಿಸಿ ರನ್ನರ್ ಅಪ್ ಸ್ಥಾನ ತಮ್ಮದಾಗಿಸಿಕೊಂಡರು. 5.5 ಪಾಯಿಂಟ್ ಗಳಿಸಿದ ಇಟಲಿಯ ಲೊಯಕಾನೊ ಆ್ಯಂಟೊನಿಯೊ ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಇಟಲಿಯ ಆ್ಯಂಟೊನಿಯೊ ನೆರಿ, ಒರ್ಫಿನಿ ನಿಕೊಲೊ ಮತ್ತು ಮಾರ್ಟಿನೆರಿ ವಲೆರಿಯಾ ಕೂಡ ತಲಾ 5.5 ಪಾಯಿಂಟ್ ಗಳಿಸಿದ್ದಾರೆ.

ಮೊದಲ ಸುತ್ತಿನಲ್ಲಿ ಶರಣ್ ಇಟಲಿಯ ಮ್ಯಾಕ್ಸಿಮೊವಿಚ್ ಮೊಯೊಡ್ರ್ಯಾಗ್ ಅವರನ್ನು ಮಣಿಸಿದ್ದರು. ಎರಡನೇ ಸುತ್ತಿನಲ್ಲಿ ಇಟಲಿಯ ಮಯೋನ್ ಮೆಲಿಸಾ ವಿರುದ್ಧ ಗೆಲುವು ಸಾಧಿಸಿದ್ದರು.

ಮೂರನೇ ಸುತ್ತಿನಲ್ಲಿ ಇಟಲಿಯ ಪಸಿನಿ ನಿಕೊಲೊ ಜೊತೆ ಡ್ರಾ ಮಾಡಿಕೊಂಡಿದ್ದರು. ನಾಲ್ಕನೇ ಸುತ್ತಿನಲ್ಲಿ ಒರ್ಫಿನಿ ನಿಕೊಲೊ ಅವರನ್ನು ಸೋಲಿಸಿದ್ದರು. ಐದನೇ ಸುತ್ತಿನಲ್ಲಿ ಲೊಯಕಾನೊ ಆ್ಯಂಟೊನಿಯೊ ವಿರುದ್ಧ ಗೆದ್ದಿದ್ದರು. ಆರು ಮತ್ತು ಏಳನೇ ಸುತ್ತುಗಳಲ್ಲಿ ಕ್ರಮವಾಗಿ ಆ್ಯಂಟೊನಿಯೊ ನೆರಿ ಹಾಗೂ ಬೆತಾಲಿ ಫ್ರಾನ್ಸಿಸ್ಕೊ ಜೊತೆ ಡ್ರಾ ಮಾಡಿಕೊಂಡರು.

ಶರಣ್ ಅವರು ಲೇಡಿಹಿಲ್‌ನ ಶುಭಾನಂದ ರಾವ್ ಮತ್ತು ಜ್ಯೋತಿ ದಂಪತಿಯ ಪುತ್ರ.

ಶ್ರವಣದೋಷವುಳ್ಳವರ ರಾಷ್ಟ್ರಮಟ್ಟದ ಕ್ರಿಕೆಟ್ ಟೂರ್ನಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮೈಸೂರು: 'ಅಖಿಲ ಭಾರತ ಶ್ರವಣ ದೋಷವುಳ್ಳವರ ಕ್ರೀಡಾ ಒಕ್ಕೂಟ, ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಸೆ.18ರಿಂದ 24ರವರೆಗೆ ಶ್ರವಣದೋಷವುಳ್ಳವರ 6ನೇ ರಾಷ್ಟ್ರೀಯ ಟ್ವೆಂಟಿ–20 ಕ್ರಿಕೆಟ್ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ' ಎಂದು ಮೈಸೂರಿನ ಲಯನ್ಸ್ ಕ್ಲಬ್ ನಿಸರ್ಗ ಚಾಪ್ಟರ್‌ನ ಅಧ್ಯಕ್ಷ ಎಸ್. ಮೂರ್ತಿ ತಿಳಿಸಿದರು.

'ಆರ್‌ಬಿಐ ಮೈದಾನ, ಇನ್ಫೊಸಿಸಿ ಮೈದಾನ ಹಾಗೂ ಎನ್‌ಐಎಫ್‌ಟಿ ಕ್ರಿಕೆಟ್ ಮೈದಾನದಲ್ಲಿ ಪಂದ್ಯಗಳು ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ನಡೆಯಲಿದ್ದು, 16 ರಾಜ್ಯದ ಒಕ್ಕೂಟಗಳಿಂದ 270 ಕ್ರಿಕೆಟಿಗರು ಪಾಲ್ಗೊಳ್ಳಲಿದ್ದಾರೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮೈಸೂರಿನಲ್ಲಿ ನಡೆಯುವ ಪಂದ್ಯದಲ್ಲಿ ವಿಜೇತ ಮೂರು ತಂಡಗಳಿಗೆ ಕ್ರಮವಾಗಿ ₹ 25 ಸಾವಿರ, ₹ 15ಸಾವಿರ ಹಾಗೂ ₹ 10 ಸಾವಿರ ನಗದು, ಟ್ರೋಫಿ ನೀಡಿ ಸನ್ಮಾನಿಸಲಾಗುತ್ತದೆ. ಚಾಂಪಿಯನ್ ತಂಡವು ಕೇರಳದ ತಿರುವನಂತಪುರದಲ್ಲಿ 2023ರಲ್ಲಿ ಜನವರಿ 10ರಿಂದ 20ರವರೆಗೆ ನಡೆಯಲಿರುವ ಚೊಚ್ಚಲ ವಿಶ್ವ ಶ್ರವಣದೋಷವುಳ್ಳವರ ಟ್ವೆಂಟಿ–20 ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದೆ' ಎಂದರು.

'17ರಂದು ಸಂಜೆ 5.30ಕ್ಕೆ ಆಯಿಷ್ ಜಿಮ್‌ಖಾನಾ ಕೇಂದ್ರದಲ್ಲಿ ಉದ್ಘಾಟನೆ ನಡೆಯಲಿದ್ದು, ಇಂದ್ರಗ್ರೂಪ್ ಆಫ್ ಹೋಟೆಲ್ಸ್‌ನ ಮಾಲೀಕ ಹೇಮಂತ್ ಚಂದ್ರ, ಮೈಸೂರು ಲಯನ್ಸ್ ಕ್ಲಬ್‌ನ ರೀಜನಲ್ ಮುಖ್ಯಸ್ಥ ಎನ್. ನಂಜುಂಡಸ್ವಾಮಿ, ರಾಹುಲ್ ಕನ್ವೆನ್ಷನ್ ಹಾಲ್‌ನ ಮಾಲೀಕ ಎಸ್.ಮೂರ್ತಿ ಭಾಗವಹಿಸಲಿದ್ದಾರೆ. ಅಖಿಲ ಭಾರತ ಶ್ರವಣದೋಷವುಳ್ಳವರ ಕ್ರೀಡಾ ಸಮಿತಿಯ ಉಪಾಧ್ಯಕ್ಷ ಇ.ಕೆ. ನೌಷಾದ್, ರಾಜ್ಯ ಕಾರ್ಯದರ್ಶಿ ಜಿ.ಎಸ್. ನವೀನ್‌ಕುಮಾರ್ ಅವರನ್ನು ಸನ್ಮಾನಿಸಲಾಗುತ್ತದೆ' ಎಂದರು. ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷ ಮಹೇಶ್ ವರ್ಮಾ, ರಾಜ್ಯ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ತಾಂತ್ರಿಕ ನಿರ್ದೇಶಕ ಗಣೇಶ್ ರಾವ್ ಇದ್ದರು.


ಪ್ರಶಸ್ತಿ ವಿಜೇತ ಬೆಂಗಳೂರು ಸ್ಪೋರ್ಟ್ಸ್ ಕ್ಲಬ್: ಎಡದಿಂದ– ನಿಂತವರು: ರೋಹಿತ್ ಆರ್‌ವಿ, ಮಯೂರ ಎಲ್, ನವದೀಪ್ ಕುಮಾರ್, ರಿಷಭ್ ಅಡಿಗ, ಪಿ.ಎಂ. ವೆಂಕಟೇಶ್, ಎಂ.ಎಸ್. ಸುಧಾಕರ್ ರಾವ್ (ಕಾರ್ಯದರ್ಶಿ), ಮನೋಜ್ ನಾಯಕ್, ಅರ್ನವ್ ಶರ್ಮಾ, ಪ್ರೀತಂ ಎ, ಆದಿಲ್ ವಾರಿಯರ್, ಪ್ರದೀಪ್ ಕುಮಾರ್ (ಕೋಚ್). ಮಂಡಿಯೂರಿದವರು: ಅನಂತ್ ಎಸ್, ಎಟಿ ದೀಕ್ಷಿತ್, ಆಶಿತ್ ಕುಮಾರ್ ಗೌಡ, ವಿಜಯ್ ಮಲ್ಲೇರ್, ರಿಷಭ್ ಕುಮಾರ್ ಎಸ್, ಆದರ್ಶ್ ಎಸ್‌ಜೆ.

ಬೆಂಗಳೂರು ಸ್ಪೋರ್ಟ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಬೆಂಗಳೂರು ಸ್ಪೋರ್ಟ್ಸ್ ಕ್ಲಬ್ ತಂಡದವರು ಕೆಎಸ್‌ಸಿಎ ಗುಂಪು ಒಂದರ 1ರಿಂದ 3ನೇ ಡಿವಿಷನ್ 16 ವರ್ಷದೊಳಗಿನವರ ಅಂತರ್‌ಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಆರ್‌ಡಬ್ಲ್ಯುಎಫ್ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಅಂತಿಮ ಪಂದ್ಯದಲ್ಲಿ ಸ್ಪೋರ್ಟ್ಸ್ ಕ್ಲಬ್ ತಂಡವು ವಲ್ಚರ್ಸ್ ಕ್ರಿಕೆಟ್ ಕ್ಲಬ್‌ನೊಂದಿಗೆ ಡ್ರಾ ಸಾಧಿಸಿತು. ಹೆಚ್ಚು ಪಾಯಿಂಟ್ಸ್ ಗಳಿಕೆಯ ಆಧಾರದಲ್ಲಿ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಸ್ಪೋರ್ಟ್ಸ್ ಕ್ಲಬ್: ಮೊದಲ ಇನಿಂಗ್ಸ್: 90 ಓವರ್‌ಗಳಲ್ಲಿ 275 (ಅನಂತ್ ಎಸ್. 67, ರೋಹಿತ್ ಆರ್.ವಿ. 68, ಅರ್ನವ್ ಶರ್ಮಾ 60; ಸಮ್ಯಕ್ ವೆಲ್ಲಾಲೂರ್ 29ಕ್ಕೆ 2, ಆರಿನ್ ಪಾಠಕ್ 35ಕ್ಕೆ 2). ಎರಡನೇ ಇನಿಂಗ್ಸ್: 46 ಓವರ್‌ಗಳಲ್ಲಿ 9ಕ್ಕೆ 127 (ರೋಹಿತ್ 23, ಅರ್ನವ್ 29; ಸಮ್ಯಕ್ 9ಕ್ಕೆ 2, ಮಣಿಕಂಠ ಶಿವಾನಂದ್ 14ಕ್ಕೆ 2, ಶಿವಕುಮಾರ್ 26ಕ್ಕೆ 3). ವಲ್ಚರ್ಸ್ ಸಿಸಿ: ಮೊದಲ ಇನಿಂಗ್ಸ್: 68.5 ಓವರ್‌ಗಳಲ್ಲಿ 133 ಆಲೌಟ್ (ಮಣಿಕಂಠ ಶಿವಾನಂದ್ 35, ನಿಹಾಲ್ ಗೌಡ ಕೆ. 36; ಮಯೂರ ಲಕ್ಷ್ಮಿಕಾಂತ್ 45ಕ್ಕೆ 2, ಪ್ರೀತಂ ಎ. 6ಕ್ಕೆ 2, ಆದರ್ಶ್ ಎಸ್.ಜೆ 45ಕ್ಕೆ 2). ಫಲಿತಾಂಶ: ಪಂದ್ಯ ಡ್ರಾ

ಸಂಕ್ಷಿಪ್ತ ಸುದ್ದಿ

ಚೆನ್ನೈ ಓಪನ್ ಟೆನಿಸ್: ಕ್ವಾರ್ಟರ್‌ಗೆ ನಾದಿಯಾ

ಚೆನ್ನೈ (ಪಿಟಿಐ): ಅರ್ಜೆಂಟೀನಾದ ನಾದಿಯಾ ಪೊಡೊರೊಸ್ಕಾ ಅವರು ಚೆನ್ನೈ ಓಪನ್ ಟೂರ್ನಿಯ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಪೊಡೊರೊಸ್ಕಾ 1-6, 6-4, 6-2ರಿಂದ ಯೂಜೀನ್ ಬೊಶಾಡ್ ಅವರನ್ನು ಪರಾಭವಗೊಳಿಸಿದರು. ಇನ್ನೊಂದು ಪಂದ್ಯದಲ್ಲಿ ಜೆಕ್ ಗಣರಾಜ್ಯದ ಲಿಂಡಾ ಫ್ರುವಿರ್ಟೊವಾ 6-4, 6-3ರಿಂದ ವಾರ್ವರಾ ಗ್ರಚೆವಾ ಎದುರು ಗೆದ್ದರು.

ದಸರಾ ಕ್ರೀಡಾಕೂಟ: ವಾಟರ್ ಪೋಲೊ ಸೇರಿಸಲು ಮನವಿ

ಬೆಂಗಳೂರು: ಮೈಸೂರು ದಸರಾ ಉತ್ಸವದ ಅಂಗವಾಗಿ ಇದೇ 18 ಮತ್ತು 19ರಂದು ನಡೆಯುವ ದಸರಾ ಕ್ರೀಡಾಕೂಟದಲ್ಲಿ ವಾಟರ್‌ಪೋಲೊ ಕ್ರೀಡೆ ಸೇರಿಸುವಂತೆ ವಸಂತವಿಹಾರ ವಾಟರ್‌ಪೋಲೊ ಕ್ಲಬ್ ಮನವಿ ಮಾಡಿದೆ. ಈ ಕುರಿತು ಕ್ಲಬ್ ಸಂಸ್ಥಾಪನಾ ಕಾರ್ಯದರ್ಶಿ ಟಿ. ಉಮಾಶಂಕರ್ ಅವರು ಕ್ರೀಡಾ ಸಚಿವರಿಗೆ ಪತ್ರ ಬರೆದಿದ್ದಾರೆ. ಒಲಿಂಪಿಕ್ ಕ್ರೀಡೆಯಾದ ವಾಟರ್‌ಪೋಲೊವನ್ನೂ ಪರಿಗಣಿಸುವಂತೆ ಅವರು ಕೋರಿದ್ದಾರೆ.


ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡದ ಬರ್ನಾರ್ಡ್ ಯಾವೊ (ಬಲ) ಮತ್ತು ಎಂಇಜಿ ತಂಡದ ಎಂ.ಅಮಲ್ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

ಸ್ಪೋರ್ಟಿಂಗ್ ಕ್ಲಬ್‌ಗೆ ಗೆಲುವು

ಬೆಂಗಳೂರು: ಬರ್ನಾರ್ಡ್ ಯಾವೊ ಅವರ ಚುರುಕಿನ ಆಟದ ನೆರವಿನಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಗೆಲುವು ಪಡೆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ 5–0 ಗೋಲುಗಳಿಂದ ಎಂಇಜಿ ಮತ್ತು ಸೆಂಟರ್ ತಂಡವನ್ನು ಮಣಿಸಿತು.

ಮೂರು ಗೋಲುಗಳನ್ನು ಗಳಿಸಿದ ಬರ್ನಾರ್ಡ್ ಯಾವೊ (7, 19 ಮತ್ತು 52ನೇ ನಿ.) ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಶೀಶ್ ಜಾ (70) ಹಾಗೂ ಅಮೇಯ್ ಭಟ್ಕಳ್ (87) ಅವರು ಒಂದು ಗೋಲು ತಂದಿತ್ತರು.

ದಿನದ ಇನ್ನೊಂದು ಪಂದ್ಯದಲ್ಲಿ ಅಗ್ನಿಪುತ್ರ ತಂಡ 1–0 ಗೋಲಿನಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಸೋಲಿಸಿತು. ಉತ್ತಮ್ ರಾಜ್ 18ನೇ ನಿಮಿಷದಲ್ಲಿ ಅಗ್ನಿಪುತ್ರ ತಂಡದ ಗೆಲುವಿನ ಗೋಲು ತಂದಿತ್ತರು.